ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಸಂದರ್ಶನ ಸ.ಉಷಾ

ತೆರೆದುಕೊಂಡ ತೇಜಸ್ವಿ ಲೋಕ

ಅಕ್ಟೋಬರ್ 09, 2013 ಪುಟ 20 ರೂ. 14/-

ಮನೆ ಮಾರಿದ್ದು ಯಾಕೆ?




ನೀವರಿಯದ ಆರತಿ ಮತ್ತವರ ಪತಿ

ಹಿಂದೂ ಟೆರರಿಸ್ಟ್ ಜಯಪ್ರಕಾಶ



ದೇಶಪಾಂಡೆ ಶಿಷ್ಯ ಸ್ಪೈರ್ ಜೈಲಿಗೆ






ಮೋದಿ ಗೆಳೆತನ ಎಸ್ಸಾರ್ ಕಂಪೆನಿ ಸಿರಿತನ



ಜೈಲು ಇಲಾಖೆ ಪವರ್‌ಲೂಮ್ ಖರೀದಿ ಡೀಲ್



ಸಂಪಾದಕ

• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಮೌಢ್ಯವಿರದ ಮನುಷ್ಯರನ್ನು ರೂಪಿಸುವಲ್ಲಿನ ತೊಡಕುಗಳ


ಇದನ್ನು ಹೇಳಲು ನನಗೆ ಸಂಕೋಚವೇನಿಲ್ಲ.

ಬೆಳಗಿನ ಹೊತ್ತು ನನಗೆ ಬಿಡುವಿದ್ದಾಗ ಕನ್ನಡದ ಟಿವಿ ಚಾನಲ್ಲುಗಳಲ್ಲಿ ಬರುವ ಜ್ಯೋತಿಷ್ಯ ವಾಸ್ತು, ನ್ಯೂಮರಾಲಜಿಯ ಕಾರ್ಯಕ್ರಮಗಳನ್ನು ನಾನು ನೋಡುತ್ತಿರುತ್ತೇನೆ......

ನಂಬಿಕೆಯ ಕಾರಣಕಲ್ಲ

ಅಪನಂಬಿಕೆಯಿಂದಲೂ ಅಲ್ಲ

ಅನುಮಾನದಿಂದ!!



ಜನಸಾಮಾನ್ಯರ 'ಮೌಢ್ಯ'ದ ಆಳ ಅಗಲಗಳನ್ನು ಬಿಂಬಿಸುವ ಇಂತಹ ಪ್ರೋಗ್ರಾಂಗಳೇ ವಿಚಾರವಾದಿಗಳ ಹಾಗೂ ನಮ್ಮ ಸೆಕ್ಯುಲರ್ ಸರ್ಕಾರಗಳ ಸಾಧನೆ-ವೈಫಲ್ಯಗಳ indicator ಕೂಡಾ ಆಗಿವೆ.

ಇಲ್ಲಿ ಅನುಮಾನದ ಪ್ರಶ್ನೆ ಏಕೆಂದರೆ

ಸ್ವಾತಂತ್ರ ಬಂದು ಆರೂವರೆ ದಶಕಗಳ ನಂತರವೂ, ಸಾಕ್ಷರತೆಯ ಪ್ರಮಾಣ ಪ್ರತಿಶತ ಎಪ್ಪತ್ತು ದಾಟಿದ ನಂತರವೂ ನಾವು ರಾಕೆಟ್ ಹಾರಿಸಿ, ಅಣುಬಾಂಬ್ ತಯಾರಿಸಿ, ವೇಗದ ರೈಲು ಓಡಿಸಿ, ನೂರಾರು ಯುನಿವರ್ಸಿಟಿಗಳನ್ನು ಸ್ಥಾಪಿಸಿ, ಕಮ್ಯುನಿಸ್ಟ್ ಹೋರಾಟ, ಸಮಾಜವಾದಿ ಆಂದೋಲನ, ರೈತ-ದಲಿತ ಹೋರಾಟಗಳನ್ನು ಮಾಡಿದ ಮೇಲೂ ಈ 'ಮೌಢ್ಯ'ವನ್ನು ಸದೆಬಡಿಯಲಾಗಿಲ್ಲ, ಅದು ಕಂದಾಚಾರ, ಮೂಢನಂಬಿಕೆ, ವಾಸ್ತು ಜ್ಯೋತಿಷ್ಯ ಜಾತಕ, ರಾಹುಕಾಲಗಳ ರೂಪದಲ್ಲಿ ಈಗಲೂ ನಮ್ಮ ಸಮಾಜದ ಕೋಟ್ಯಂತರ ಜನರನ್ನು ತನ್ನ ಕಪಿಮುಷ್ಟಿಯಲ್ಲೇ ಉಳಿಸಿಕೊಂಡು ಆಳುತ್ತಿದೆಯಲ್ಲ... ಅದು ಹೇಗೆ ಎಂಬ ಅನುಮಾನವದು. ಟಿವಿಯಲ್ಲಿ ಪ್ರಸಾರವಾಗುವ ಇಂತಹ ಪ್ರೋಗ್ರಾಂಗಳನ್ನು ನೋಡಿದಾಗ ನಮಗೆ ಜನರು ತಮ್ಮ ದುಃಖ-ದುಗುಡ, ಕಷ್ಟ-ನಷ್ಟ, ವೈಯಕ್ತಿಕ ಜೀವನದ ನೋವುಗಳಿಗೆ ಪರಿಹಾರ ಹುಡುಕುತ್ತಾ ಯಾವ ಪ್ರಮಾಣದಲ್ಲಿ ಈ ವಂಚಕರ ಮೊರೆ ಹೋಗುತ್ತಿದ್ದಾರೆಂಬುದು ಗೊತ್ತಾಗುತ್ತದೆ.


ಈ ಟೀವಿ ಕಾರ್ಯಕ್ರಮಗಳಲ್ಲಿ ಬಹುತೇಕವು ಆಯಾ ಚಾನಲ್‌ಗಳ ಸ್ವಂತದ್ದಾಗಿರುವುದಿಲ್ಲ. ಹತ್ತರಿಂದ ಇಪ್ಪತ್ತು ಸಾವಿರ ರೂಪಾಯಿತನಕ ಅರ್ಧಗಂಟೆಯಿಂದ ಒಂದು ಗಂಟೆಯತನಕದ ಅವಧಿಯನ್ನು slot ರೂಪದಲ್ಲಿ ಚಾನಲ್ ಮಾಲೀಕರು ಜ್ಯೋತಿಷಿಗಳಿಗೆ ಮಾರಿಕೊಂಡಿರುತ್ತಾರೆ. ಅದನ್ನು ಖರೀದಿಸುವ ಜ್ಯೋತಿಷಿ ತನ್ನನ್ನು ಸಂಪರ್ಕಿಸುವ ಜನರಿಗೆ 'ವಾಸ್ತು ದೋಷ, ಹುಟ್ಟಿದ ದಿನಾಂಕ ಅಥವಾ ಮದುವೆಯಾದ ದಿನದ ದೋಷ, ಶನಿ ಗುರು ಗ್ರಹಗಳ ಚಲನೆ'ಯ ಬುರುಡೆ ಕತೆ ಹೇಳುತ್ತಾನೆ. ಅವುಗಳಿಗೆ ಪರಿಹಾರವಾಗಿ ತಾನೇ ಸಿದ್ಧಪಡಿಸಿರುವ ಜಪಮಾಲೆ, ಹರಳು, ಪೂಜೆಗಳನ್ನು ಸೂಚಿಸಿ ವ್ಯಾಪಾರ ಕುದುರಿಸಿಕೊಳ್ಳುತ್ತಿರುತ್ತಾನೆ.

ಇದಲ್ಲದೆ ಹಾದಿಬೀದಿಗಳಲ್ಲಿ ಜ್ಯೋತಿಷ್ಯ ಹೇಳುವವರು, ಬಾಬಾಗಳು, ಪುರೋಹಿತರು, ದೈವಾಂಶಸಂಭೂತರು ಬಿಡುವಿಲ್ಲದೆ ನಡೆಸುತ್ತಿರುವ ಮೌಢ್ಯದ ಬ್ಯುಸಿನೆಸ್‌ನ ಭರಾಟೆ ನೋಡಿದರೆ ಅದು ಸಾವಿರಾರು ಕೋಟಿ ರೂಪಾಯಿಗಳ ದಂಧೆಯಾಗಿ ಬೆಳೆದಿದೆ ಎನಿಸುತ್ತದೆ.

ನೂರಾರು ವರ್ಷಗಳಿಂದ ಬೆಳೆದುಬಂದಿರುವ ಈ ಮೌಢ್ಯದಿಂದ ದೊಡ್ಡವರನ್ನು ಪಾರು ಮಾಡುವ ಬಗೆ ಹೇಗೆ ಹಾಗೂ ಈಗಿನ್ನೂ ಅದರ ಬಲಿಪಶುಗಳಾಗದಿರುವ ಚಿಕ್ಕವರನ್ನು ಮೌಢ್ಯದ ಬಲೆಗೆ ಸಿಲುಕದಂತೆ ಏನು ಮಾಡಬೇಕೆಂಬ ಒಂದು ವ್ಯವಸ್ಥಿತ ಕಾರ್ಯಯೋಜನೆ ಹಾಕಿಕೊಳ್ಳದೆ ಹೋದರೆ ಮೌಢ್ಯದ ವಿರುದ್ಧದ ಈ ಹೋರಾಟದಲ್ಲಿ ಗೆಲ್ಲಲಾಗುವುದಿಲ್ಲ.

ಕರ್ನಾಟಕ ಸರ್ಕಾರವು ಈಗ ಮೌಢ್ಯ, ಮಾಟಮಂತ್ರ ಜ್ಯೋತಿಷ್ಯಗಳ ಕೆಡುಕನ್ನು ನಿಯಂತ್ರಿಸುವ ಹೊಸ ಕಾಯ್ದೆಯೊಂದನ್ನು ಜಾರಿಗೆ ತರುವ ಬಗ್ಗೆ ಪ್ರಸ್ತಾಪಿಸಿದೆ. ನೆರೆಯ ಮಹಾರಾಷ್ಟ್ರದಲ್ಲಿ ಈಗಾಗಲೇ ಈ ಬಗ್ಗೆ ಒಂದು ಸುಗ್ರೀವಾಜ್ಞೆಯೇ ಜಾರಿಯಾಗಿದೆ. ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲಿನವರು, ವಿಚಾರವಾದಿಗಳಾದ ಪ್ರೊ. ವಿ.ಎಸ್. ಶ್ರೀಧರ, ಡಾ. ಜಿ. ರಾಮಕೃಷ್ಣ ಮುಂತಾದವರು, ವಿಜಯ ಕರ್ನಾಟಕ ದಿನಪತ್ರಿಕೆ ಎಲ್ಲಾ ಜೊತೆಗೂಡಿ ಕರ್ನಾಟಕದಲ್ಲಿ ಜಾರಿಯಾಗಬೇಕಾದ ಕಾಯ್ದೆಯ ರೂಪುರೇಷೆಗಳ ಬಗ್ಗೆ ಚರ್ಚಿಸಿ ಸಲಹೆ ನೀಡುತ್ತಿದ್ದಾರೆ.

ನಮ್ಮಲ್ಲಿನ ಜಾತಿ, ಕಂದಾಚಾರ ಮೌಢ್ಯದ ವಾತಾವರಣದಲ್ಲಿ ಹುಟ್ಟುವ ಒಂದು ಮಗು ಬೆಳೆಯುತ್ತಾ ಹೋದಂತೆ, ಅದರ ಸಾಮಾಜಿಕ ವ್ಯಾಪ್ತಿ ವಿಸ್ತರಿಸುತ್ತಾ ಹೋದಂತೆ ಇವೆಲ್ಲಾ ಕೆಡುಕುಗಳೂ ಸಹಜವಾಗಿಯೇ ಅದನ್ನು ಪ್ರಭಾವಿಸುತ್ತವೆ. ಈ ಹಂತದಲ್ಲಿ ಮಕ್ಕಳಿಗೆ ಪ್ರಶ್ನಿಸುವ, ಯೋಚಿಸುವ ಪ್ರವೃತ್ತಿ ಕಲಿಸದಿದ್ದರೆ, ವೈಚಾರಿಕತೆಯನ್ನು ಕಲಿಸುವ ಶಿಕ್ಷಕರು, ಒಡನಾಡಿಗಳು ಸಿಗದೇ ಹೋದರೆ, ಪುಸ್ತಕ ಓದುವ ಚರ್ಚಿಸುವ ಹವ್ಯಾಸ ಬೆಳೆಯದಿದ್ದರೆ ಅಂತವರು ಹಳೆಯ ಕಂದಾಚಾರ, ಮೌಢ್ಯಗಳನ್ನೇ ಮೈಗೂಡಿಸಿಕೊಳ್ಳುತ್ತಾ ತಮ್ಮ ಜೀವನ ಪ್ರಯಾಣ ಆರಂಭಿಸುತ್ತಾರೆ. ಒಮ್ಮೆ ಆ ದಿಕ್ಕಿನತ್ತ ಶುರುವಾಗುವ ಪ್ರಯಾಣವು ಬಲಿಪಶುವಿನ ವಿವೇಚನಾಶಕ್ತಿಯನ್ನೇ ಕುಗ್ಗಿಸಿ ಸದೆಬಡಿದು ಬದುಕಿರುವ ತನಕ ಗುಲಾಮನನ್ನಾಗಿಸಿಕೊಳ್ಳುತ್ತದೆ.



ಭಾರತದ ಸಂವಿಧಾನದ 51 ಎ (ಎಚ್)ಗೆ ತಂದ 42ನೇ ತಿದ್ದುಪಡಿಯಲ್ಲಿ ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ, ಮಾನವೀಯ ಆಶಯಗಳಿಗೆ ಪ್ರೇರಣೆ ನೀಡುವ ಸುಧಾರಣೆಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

ಇವೆಲ್ಲಾ ಮೂಲಭೂತ ಕರ್ತವ್ಯಗಳ ಭಾಗವಾಗಿ ಸಂವಿಧಾನದಲ್ಲಿ ಸೇರ್ಪಡೆಗೊಂಡಿವೆ.

ಕೋಟಿಗಟ್ಟಲೆ ಜನರಿರುವ ನಮ್ಮ ಸಮಾಜದಲ್ಲಿ ವೈಚಾರಿಕತೆ ಬೆಳೆಸುವ ಹೊಣೆ ಕೇವಲ ಪ್ರಗತಿಪರರ ಮೇಲಷ್ಟೇ ಬಿದ್ದಿರುವುದೇ ಈ ದುರಂತಕ್ಕೆ ಕಾರಣವಾಗಿದೆ. ಅವರೊಂದಿಗೆ ಸರ್ಕಾರವೂ ಜೊತೆಯಾದಲ್ಲಿ ಮುಂದಿನ ಹಲವು ವರ್ಷಗಳಲ್ಲಿ 'ಮೌಢ್ಯ'ದ ವಿರುದ್ಧದ ಹೋರಾಟದಲ್ಲಿ ವೈಚಾರಿಕತೆ ಮೇಲುಗೈ ಸಾಧಿಸಲು ಸಾಧ್ಯವಿದೆ. ಸಿದ್ದರಾಮಯ್ಯನವರ ಸರ್ಕಾರವು ಈ ನಿಟ್ಟಿನಲ್ಲಿ ಸೂಕ್ತ ಕಾಯ್ದೆಯನ್ನು ರೂಪಿಸುವ ಜೊತೆಗೆ ಸ್ವತಃ ಸರ್ಕಾ[ರಿ] ಕಚೇರಿಗಳಲ್ಲಿ ನಡೆಯುವ ಪೂಜೆಪುನಸ್ಕಾರಗಳಿಗೆ, ಸರ್ಕಾ[ರಿ] ಯೋಜನೆಗಳ ಗುದ್ದಲಿಪೂಜೆ, ವಾಸ್ತುದೋಷ ನಿವಾರಣೆ[ಯ] ಹುಂಬತನಗಳಿಗೆ ಕಡಿವಾಣ ಹಾಕಬೇಕಿದೆ. ಪಠ್ಯಪುಸ್ತಕಗಳ[ಲ್ಲಿ] ಮೌಢ್ಯದ ನಿವಾರಣೆಯ ಅಂಶಗಳನ್ನು ಸೇರಿಸಿ ವಿದ್ಯಾರ್ಥಿಗಳ[ಲ್ಲಿ] ವೈಚಾರಿಕ ಮನೋಭಾವ ಬೆಳೆಸುವ ಪ್ರಯತ್ನಕ್ಕೆ ಚಾಲ[ನೆ] ನೀಡಬೇಕಿದೆ. ಶಾಲಾಕಾಲೇಜುಗಳಲ್ಲಿ ಅರೇಂಜ್ ಮಾಡು[ವ] ಟೂರ್‌ಗಳು ಸಾಮಾನ್ಯವಾಗಿ ಉಡುಪಿ, ಧರ್ಮಸ್ಥಳ, ಶೃಂಗೇ[ರಿ] ತರದ ಸ್ಥಳಗಳೇ ಆಗಿರುತ್ತವೆ. ಜಾತಿ ತಾರತಮ್ಯ, ಕಂದಾಚಾ[ರ] ಮೂಢನಂಬಿಕೆಗಳ ಸೆಂಟರ್‌ಗಳಂತಿರುವ ಇಂತ[ಹ] ಪುರೋಹಿತಶಾಹಿ ಸ್ಥಳಗಳಿಗೆ ಹೋಗಿ ದಕ್ಷಿಣೆ ಕೊ[ಟ್ಟು] ನಮಸ್ಕಾರ ಹಾಕಿ ಬರುವ ಅಸಹ್ಯ ಪ್ರವೃತ್ತಿಗೆ ಕಡಿವಾ[ಣ] ಹಾಕಬೇಕಿದೆ. ಅವುಗಳ ಬದಲ[ು] ಶಿಕ್ಷಕರು ಐತಿಹಾಸಿಕ ಮಹತ್ವ[ದ] ನಿಸರ್ಗ ರಮಣೀಯ ಹಾಗೂ ಸಾ[...] ಪ್ರವೃತ್ತಿಗೆ ಉತ್ತೇಜನ ನೀಡು[ವ] ಸ್ಥಳಗಳಿಗೆ ಮಾತ್ರ ಪ್ರವಾ[ಸ] ಕರೆದುಕೊಂಡು ಹೋಗುವಂತೆ ಸ[...] ಸುತ್ತೋಲೆಗಳನ್ನು ಹೊರಡಿಸಬೇಕಿ[ದೆ].

ಇದೆಲ್ಲದರ ಆಚೆಗೆ ಮೌ[...] ಕಂದಾಚಾರಗಳನ್ನು ಆಯ[ಾ] ಸಮುದಾಯಗಳಲ್ಲಿ ಇರುವ ಸ[...] ಧಾರ್ಮಿಕ ನಂಬಿಕೆಗಳ, ಸಾಂಸ್ಕೃ[ತಿಕ] ಆಚರಣೆಗಳಿಂದ ಬೇರ್ಪ[ಡಿಸಿ] ನೋಡುವ ಒಂದು ಅಂಶವನ್ನು ಹ[...] ಕಾಯ್ದೆ ಒಳಗೊಳ್ಳಬೇಕಾಗುತ್ತದೆ.

ಇದೊಂದು ಸಂಕೀರ್ಣ ವಿಷಯವಾಗಿರುವುದರಿ[ಂದ] ಕಂದಾಚಾರಿಗಳು 'ಮೌಢ್ಯಾಚರಣೆಯನ್ನು ನಿರ್ಬಂಧಿಸ[ುವ] ಕಾಯ್ದೆಯ ವಿರುದ್ಧ ಅಮಾಯಕ ಜನರನ್ನೇ ಎತ್ತಿಕಟ್[ಟುವ] ಸಾಧ್ಯತೆಗಳಿವೆ.

ಸಿದ್ದರಾಮಯ್ಯನವರ ಸರ್ಕಾರ ಈ ವಿಚಾರ[ದಲ್ಲಿ] ದಿಟ್ಟತನದಿಂದ ವರ್ತಿಸಲಿ. ■

ಪುಟ್ಟವರ ಪ್ರಪಂಚದಲ್ಲಿ ದೊಡ್ಡವರ ಅವಸ್ಥೆ

`Are you a thinker or an understander?"

–ಇಂಥದ್ದೊಂದು ಪ್ರಶ್ನೆ ನನಗೆ ಪುಟ್ಟ ಬಾಲೆಯೊಬ್ಬಳಿಂದ ಎದುರಾಗುತ್ತದೆ ಎಂಬ ನಿರೀಕ್ಷೆ ಇರಲಿಲ್ಲ. ನಮ್ಮಷ್ಟಕ್ಕೆ ಓದು, ಬರವಣಿಗೆ, ಭಾಷಣ, ಆಕ್ಟಿವಿಸಂ ಕೆಲಸ ಮಾಡಿಕೊಂಡು 'ಚೆನ್ನಾಗಿತ್ತು' ಅಂತಾ ಯಾರಾದರೂ ಕಾಮೆಂಟ್ ಮಾಡಿದಾಗ ಕೊಂಚ ಹಿಗ್ಗುತ್ತಾ, ಯಾರೂ ಏನನ್ನೂ ಹೇಳದಿದ್ದಾಗ ಕೊರಗುತ್ತಾ... ಹೀಗೇ ಕಾಲ ಕರಗಿಸುತ್ತಾ ನಾವೆಲ್ಲಾ ಸಾಗುವಾಗ ಆವಾಗೀವಾಗ ಇಂಥ ಪ್ರಶ್ನೆಗಳು ಬಂದರೆ ಒಳ್ಳೆಯದೆನಿಸುತ್ತದೆ.



ಚಾರುಮತಿ

ಆಗಿದ್ದಿಷ್ಟೆ...

ಆ ಪ್ರಶ್ನೆ ಬಂದಾಗ ನಾನು ಒಂದೆರಡು ಕ್ಷಣ ಯೋಚಿಸಿ ನಾನೊಬ್ಬ ಬುದ್ಧಿಜೀವಿ ಕೆಟಗರಿಯವನಲ್ಲವಾ ಅಂತಂದುಕೊಂಡು 'ನಾನು ಥಿಂಕರ್' ಅಂತ ಉತ್ತರಿಸಿದೆ. ನನ್ನ ಸಮಸ್ಯೆ ಶುರುವಾಗಿದ್ದೇ ಆವಾಗ.

ಆ ನನ್ನ ಪುಟ್ಟ ಗೆಳತಿಗೆ ನನ್ನ ಉತ್ತರ ಕೇಳಿ ಖುಷಿಯಾಗಲಿಲ್ಲ... 'ಬ್ಯಾಡ್ ಆನ್ಸರ್' ಅಂದಳು.

ನಾನು 'ಅದು ಹೇಗೆ? ಅಂತ ಕೇಳಿದೆ.

"ಥಿಂಕರ್ಸ್ ಯಾವಾಗಲೂ ಅವರ ಬಗ್ಗೆನೇ ಜಾಸ್ತಿ ಥಿಂಕ್ ಮಾಡ್ತಾ ಇರ್ತಾರಂತೆ. ಆದ್ರೆ ಅಂಡರಸ್ಟಾಂಡರ್ಸ್ ಅಂದರೆ ಅವರು ಬೇರೆಯವರನ್ನ ಅರ್ಥ ಮಾಡಿಕೋತಾರೆ ಅಂತಾ ಅಜಿತಾ ಹೇಳಿದಳು" ಅಂದಳು. ಈ ಅಜಿತಾ ಆ ಬಾಲೆ ಚಾರುಮತಿಯ ದೊಡ್ಡ ಗೆಳತಿ. ಈ ಸಂಭಾಷಣೆಯಿಂದ ನನಗೆ ಎಡವಿ ಕೆಳಗೆ ಬಿದ್ದಂತೆನಿಸಿತು. ಚಿಕ್ಕಮಕ್ಕಳಿಗೆ ಈ ವಿಚಾರವೆಲ್ಲಾ ಎಲ್ಲಿ ಹೇಗೆ ಗೊತ್ತಾಯಿತೆಂದು ಕೊಂಚ ಪತ್ತೆದಾರಿ ಮಾಡಿದೆ.

ವಿಷಯ ಗೊತ್ತಾಯಿತು ಆ ಇಬ್ಬರು ಗೆಳತಿಯರ ಕೈಗೆ ``thinkers and under standers" ಅನ್ನುವ ಒಂದು ಪುಸ್ತಕ ಒಮ್ಮೆ ಸಿಕ್ಕಿ ಅದರಲ್ಲಿ ಈ ಮಾತು ಇತ್ತಂತೆ. ಹಾಗಾಗಿ ಯಾರಾದರೂ ತಮ್ಮನ್ನು thinkers ಅಂತ ಹೇಳಿಕೊಂಡರೆ 'ಬ್ಯಾಡ್' ಎನ್ನುತ್ತಲೂ understanders ಅಂದಾಗ 'ಗುಡ್' ಅನ್ನುತ್ತಲೂ ಓಡಾಡುತ್ತಿದ್ದರು. ಈ ಮಾತುಗಳನ್ನು ಕೊಂಚ ಸಾವಧಾನದಿಂದ ಮನಸ್ಸಿನೊಳಗೆ ತಂದುಕೊಂಡರೆ ನಮ್ಮ ಕಾಲುಗಳು ನೆಲದ ಮೇಲೇ ಇರುತ್ತವೆನಿಸಿತು.

ಇನ್ನೊಂದು ದಿನ ಈ ಬಾಲೆ 'ನಮ್ಮನೇಲಿ ನಾನೇ ಜಾಸ್ತಿ ಎಜುಕೇಟೆಡ್' ಅಂತ ಘೋಷಿಸಿದಳು. ಅಷ್ಟಕ್ಕೂ ಆಕೆಯಿನ್ನೂ ಜುಜುಬಿ ನಾಲ್ಕನೇ ತರಗತಿ ಕಲಿಯುತ್ತಿರುವಾಕೆ.

ನನಗೆ ಆಶ್ಚರ್ಯವಾಯಿತು "ಅದು ಹೇಗೆ?" ಅಂದೆ.

"ನಾನು ದಿನಾ ಎಲ್ಲಾರ್ಗು ಎಷ್ಟೊಂದು ಪ್ರಶ್ನೆ ಕೇಳ್ತೀನಿ, ಆದ್ರೆ ಯಾರೂ ಸರಿಯಾಗಿ ಉತ್ತರಾ ಕೊಡಲ್ಲ... ಆಮೇಲೆ ಮನೇಲಿ ಯಾರೂ ನನ್ ತರಾ ಪ್ರಶ್ನೇನೂ ಕೇಳಲ್ಲ. ಅದಕ್ಕೆ ನಮ್ಮನೇಲಿ ನಾನೇ ಜಾಸ್ತಿ ಎಜುಕೇಟೆಡ್" ಅಂದಳು.


ಯೋಚಿಸಿದರೆ ಮಕ್ಕಳ ಈ ಮಾತುಗಳು ಜೆನ್ ಕತೆಯ ಗೂಢಾರ್ಥದಂತೆ ಬೆಳೆಯುತ್ತಾ ಹೋಗುತ್ತವೆ. ●

ದಿ ಲಂಚ್ ಬಾಕ್ಸ್' ಎಂಬ ಅಚ್ಚುಕಟ್ಟಾದ ಸಿನಿಮಾ...

ಈಗ ಎಲ್ಲೆಡೆ 'ದಿ ಲಂಚ್‌ಬಾಕ್ಸ್' ಎಂಬ ...ದಿ-ಇಂಗ್ಲಿಷ್ ಸಿನಿಮಾದ ಬಗ್ಗೆ ಸುದ್ದಿ, ಚರ್ಚೆ, ...ವಿವಾದ ನಡೆಯುತ್ತಿದೆ. ಈಗಾಗಲೇ ಹಲವಾರು ...ತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ವಿಮರ್ಶಕರ ...ಚ್ಚುಗೆಯನ್ನು ಗಳಿಸಿರುವ ಈ ಸಿನಿಮಾವನ್ನು ಭಾರತದಿಂದ ...ಷ್ಠಿತ ಆಸ್ಕರ್ ಪ್ರಶಸ್ತಿಗೆ ಕಳುಹಿಸಬೇಕಿತ್ತು, ಆದರ ...ಲಾಗಿ ಯಾರೂ ನೋಡಿರದ 'ದಿ ಗುಡ್ ರೋಡ್' ...ಬ ಗುಜರಾತಿ ಸಿನಿಮಾವನ್ನು ಆಯ್ಕೆ ಮಂಡಳಿ ...ಹಿಸಲು ನಿರ್ಧರಿಸಿದ್ದು ತಪ್ಪು ಎಂದೂ ಹಲವರು ...ದಿಸುತ್ತಿದ್ದಾರೆ. 'ದಿ ಲಂಚ್‌ಬಾಕ್ಸ್' ಪರ ವಾದಿಸುತ್ತಿರು ...ರೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಆದರೊಂದಿಗೆ ...ಬು ಇಟ್ಟುಕೊಂಡಿರುವವರೇ ಎಂಬುದು ಗಮನಾರ್ಹ.

ಈ ಸಿನಿಮಾ ಬಗ್ಗೆ ನಾನೂ ಮೆಚ್ಚುಗೆಯನ್ನು ಕೇಳಿದ್ದರಿಂದ ...ನ್ನು ನೋಡಲು ಕುತೂಹಲವಿದ್ದು ಮೊನ್ನೆ ಸಮಯ ...ಡಿಕೊಂಡು ನೋಡಿದೆ. 'ದಿ ಲಂಚ್‌ಬಾಕ್ಸ್' ...ವಾಗಲೂ ತುಂಬಾ ಚೆನ್ನಾಗಿರುವ ಸಿನಿಮಾ.

ಇದು ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ (!). ಬರಿ ...ಷ್ಯರ ನಡುವಿನ ಪ್ರೇಮಕತೆಯಲ್ಲ, ಜೊತೆಗೆ ಮುಂಬೈ ...ಬ ಮಹಾನಗರಿಯ ಬಗೆಗಿನ ಲವ್ ಸ್ಟೋರಿ ಕೂಡ. ...ಕೇಳಿ ಮುಂಬೈ ಜನದಟ್ಟಣೆಯ ನಗರ. ಯಾವ ...ತ್ತಿನಲ್ಲಾದರೂ ಎಲ್ಲಿ ನೋಡಿದರೂ ಈ ನಗರದಲ್ಲಿ



...ಕಾಣಿಸುತ್ತಾರೆ, ಆದರೂ ಇಲ್ಲಿ ವಾಸಿಸುವ ಲಕ್ಷಾಂತರ ...ಷ್ಯರು ಒಂದು ರೀತಿಯಲ್ಲಿ ಏಕಾಂಗಿಗಳು.

...ಅಂಥವರಲ್ಲಿ ಸಾಜನ್ ಫೆರ್ನಾಂಡಿಸ್ ಕೂಡ ಒಬ್ಬ. ...ರನಾದ ಸಾಜನ್ ನಿವೃತ್ತಿಯ ಅಂಚಿನಲ್ಲಿರುವಾತ. ...ಸಿನಲ್ಲಿ ದಕ್ಷತೆಯಿಂದ ಕೆಲಸ ಮಾಡುವ ಸಾಜನ್ ...ರೊಂದಿಗೂ ಹೆಚ್ಚು ಮಾತನಾಡದೆ, ಸಂತೋಷ, ನಗು ...ವುದೂ ಇರದೇ ತನ್ನ ಪಾಡಿಗೆ ತಾನಿರುವ ...ವದವನು.

...ಆತನಂತೆ ಇಲಾ ಕೂಡ ಏಕಾಂಗಿ. ಆಕೆಯ ಜಗತ್ತು ...ಗಂಡ, ಚಿಕ್ಕ ಗೂಡಿನಂತಿರುವ ಮನೆ ಮತ್ತು ಶಾಲೆಗೆ ...ಗುವ ಮಗಳು. ಆದರೆ ತನ್ನ ಕೆಲಸದಲ್ಲೇ ಮುಳುಗಿರುವ ... ಇಲಾಳನ್ನು ನಿರ್ಲಕ್ಷಿಸುತ್ತಿದ್ದಾನೆ. ಅವನ ಗಮನವನ್ನು ...ಮತ್ತೆ ತನ್ನ ಜೀವನದಲ್ಲಿ ಒಂದಿಷ್ಟು ರೋಮಾಂಚನ ...ಯಬೇಕೆಂದು ಇಲಾ ಹಂಬಲಿಸುತ್ತಿದ್ದಾಳೆ. ಆಗ ಆಕೆಗೆ ...ಳೆಯುವ ಐಡಿಯಾ "ಗಂಡನ ಮನಸ್ಸಿಗೆ ದಾರಿ ಆತನ ...ಟ್ಟೆಯ ಮೂಲಕ" ಎಂಬ ನಾಣ್ನುಡಿ. ಒಂದು ದಿನ ... ಗಂಡನಿಗೆ ವಿಶೇಷವಾದ ಅಡುಗೆಯನ್ನು ಮಾಡಿ ...ಧ್ಯಾಹ್ನದ ಊಟದ ಡಬ್ಬಿಯಲ್ಲಿ ಕಳುಹಿಸುತ್ತಾಳೆ. ಆಕೆಯ ...ಗೆ ಅದು ಬರೀ ಊಟವಲ್ಲ, ಆಕೆಯ ಬದುಕಿನ ...ಗಳನ್ನೇ ಆ ಡಬ್ಬಾದಲ್ಲಿ ತುಂಬಿದ್ದಾಳೆ.

...ಮುಂಬೈನ ಡಬ್ಬಾವಾಲಾಗಳು ತಮ್ಮ ದಕ್ಷತೆಗಾಗಿ ಈಗ ...ಶಿಕ ಮಟ್ಟದಲ್ಲಿ ಖ್ಯಾತಿ ಪಡೆದಿದ್ದಾರೆ. ಕಂಪ್ಯೂಟರ್‌ಗಳು ...ವೆತ್ತುವ ಹಲವಾರು ದಶಕಗಳ ಹಿಂದಿನಿಂದ ಅವರು ...ದಿನ ಲಕ್ಷಾಂತರ ಡಬ್ಬಾಗಳನ್ನು ಕರಾರುವಾಕ್ಕಾಗಿ ...ಗಳಿಂದ ಆಫೀಸಿಗೆ ಮತ್ತು ಆಫೀಸುಗಳಿಂದ ಮನೆಗೆ ...ಸುತ್ತಾರೆ. ಅವರು ಯಾರದ್ದೋ ಡಬ್ಬವನ್ನು ಇನ್ಯಾರಿಗೋ ...ಹಿಸಿದ್ದು ಅಪರೂಪ.

...ಆದರೆ ಅಂತಹ ಒಂದು ಅಪರೂಪದ ತಪ್ಪು 'ದಿ ...ಬಾಕ್ಸ್' ಸಿನಿಮಾದಲ್ಲಿ ಆಗುತ್ತದೆ. ಇಲಾ ತನ್ನ ...ಗಾಗಿ ಮಾಡಿರುವ ಅಡುಗೆ ಸಾಜನ್‌ನ ಟೇಬಲ್ ...ತ್ತದೆ. ಪ್ರತಿದಿನ ತನ್ನ ಮನೆಯ ಹತ್ತಿರದ ಹೋಟೆಲ್ ...ಹಿಸುವ ಊಟಕ್ಕಿಂತ ಅವತ್ತು ಊಟ ...ವಾಗಿದೆಯಲ್ಲದೆ ರುಚಿಕರವಾಗಿಯೂ ಇದೆ ಎಂದು ...ಗೊಳ್ಳುವ ಸಾಜನ್ ಡಬ್ಬಿಯಲ್ಲಿರುವುದನ್ನೆಲ್ಲ ತಿಂದು ...ನಾಗುತ್ತಾನೆ.

...ತ್ತ ಗಂಡನ ಪ್ರತಿಕ್ರಿಯೆಗಾಗಿ ಹಂಬಲಿಸುತ್ತಿರುವ ಇಲಾ ... ಡಬ್ಬಿ ಖಾಲಿಯಾಗಿ ವಾಪಸ್ ಬಂದಿರುವುದನ್ನು ನೋಡಿ ಸಂತೋಷಗೊಳ್ಳುತ್ತಾಳೆ. ಗಂಡನಿಗೂ ಸಂತೋಷವಾಗಿ ತನಗೆ ಒಂದಿಷ್ಟು ಗಮನ ಕೊಡುತ್ತಾನೆಂದು ನಿರೀಕ್ಷಿಸುತ್ತಾಳೆ. ಆದರೆ ಸಂಜೆ ಮನೆಗೆ ಬರುವ ಗಂಡ ಎಂದಿನಂತೆ ಅವಳನ್ನು ನಿರ್ಲಕ್ಷಿಸುತ್ತಾನೆ. "ಊಟ ಹೇಗಿತ್ತು?" ಎಂದು ಇಲಾ ಕೇಳಿದಾಗ ಅವನು ಕೊಡುವ ಉತ್ತರದಿಂದ ತಾನು ವಿಶೇಷ ಕಾಳಜಿಯಿಂದ ತಯಾರಿಸಿದ್ದ ಅಡುಗೆ ಬೇರೆಯವರನ್ನು ತಲುಪಿತ್ತು ಎಂದು ಅವಳಿಗೆ ಗೊತ್ತಾಗುತ್ತದೆ.

ಹೋಗಲಿ, ತನ್ನ ಅಡುಗೆಯನ್ನು ಇಷ್ಟಪಟ್ಟು ತಿಂದಿರುವ ವ್ಯಕ್ತಿ ಒಂದು ಸಣ್ಣ ಥ್ಯಾಂಕ್ಸ್ ಕೂಡ ಹೇಳದಿದ್ದದ್ದು ಅವಳಲ್ಲಿ ನಿರಾಶೆ ಮೂಡಿಸುತ್ತದೆ. ಮಾರನೆ ದಿನ "ಆ ಅಡುಗೆಯನ್ನು ನಾನು ನನ್ನ ಗಂಡನಿಗೆಂದು ಮಾಡಿದ್ದು" ಎಂದು ಒಂದು ಚೀಟಿ ಬರೆದು ಅದನ್ನು ಊಟದ ಡಬ್ಬದಲ್ಲಿ ಕಳುಹಿಸುತ್ತಾಳೆ.

ಸಾಜನ್‌ಗೆ ಆ ಚೀಟಿ ನೋಡಿ ಅಚ್ಚರಿ ಆಗುತ್ತದೆ. ಅದಕ್ಕೆ ಹೇಗೆಂದು ಪ್ರತಿಕ್ರಿಯಿಸಬೇಕೆಂದು ಗೊತ್ತಾಗದೆ "ಊಟ ಚೆನ್ನಾಗಿತ್ತು, ಆದರೆ ಉಪ್ಪು ಸ್ವಲ್ಪ ಹೆಚ್ಚಾಗಿತ್ತು" ಎಂದು ಪ್ರತ್ಯುತ್ತರ ಕಳುಹಿಸುತ್ತಾನೆ. ಅವಳಿಗೆ ರೇಗಿಹೋಗುತ್ತದೆ. ಊಟ ಮಾಡಿದ್ದಲ್ಲದೆ ಅದರೊಂದಿಗೆ ಟೀಕೆ ಬೇರೆ ಎಂದು ಬೇಕಂತಲೇ ಮಾರನೆ ದಿನ ಹೆಚ್ಚಿಗೆ ಖಾರ ಹಾಕಿ ತಯಾರಿಸಿದ ಅಡುಗೆಯನ್ನು ಕಳುಹಿಸುತ್ತಾಳೆ.

ಬಾಯಿ ಉರಿಸಿಕೊಂಡು ಅದನ್ನು ಸೇವಿಸುವ ಸಾಜನ್ ಆಕೆಗೆ ಅವತ್ತು ಬರೆಯುವ ಚೀಟಿಯಲ್ಲಿ "ಖಾರದ ಪರಿಣಾಮವನ್ನು ನಿವಾರಿಸಲು ಬಾಳೆಹಣ್ಣು ತಿನ್ನಬೇಕಾಯಿತು. ಮುಂಬೈಯಲ್ಲಿ ಬಹಳಷ್ಟು ಜನ ಮಧ್ಯಾಹ್ನದ ಊಟಕ್ಕೆ ಬಾಳೆ ಹಣ್ಣು ತಿನ್ನುತ್ತಾರೆ" ಎಂದು ಬರೆದು ಕಳುಹಿಸುತ್ತಾನೆ.

ಇವರಿಬ್ಬರ ನಡುವೆ ಹೀಗೆ ಪ್ರಾರಂಭವಾಗುವ 'ಪತ್ರ ಸಂಭಾಷಣೆ' ಅವರಿಬ್ಬರಿಗೂ ಬದುಕಿನ ಏಕತಾನತೆಯಿಂದ ಒಂದು ಬ್ರೇಕ್ ಕೊಡುತ್ತದೆ. ಅವರು ಪರಸ್ಪರ ಬರೆಯುವ ಪತ್ರಗಳು ಪ್ರೇಮಪತ್ರಗಳಲ್ಲ, ಬದಲಾಗಿ ಬದುಕನ್ನು, ಮುಂಬೈ ನಗರವನ್ನು, ಕಳೆದುಕೊಂಡ ಸಂಬಂಧಿಗಳನ್ನು, ತಮ್ಮ ಸುತ್ತಲಿನ ಜಗತ್ತನ್ನು, ಮನುಷ್ಯ ಸಂಬಂಧಗಳನ್ನು ಕುರಿತ ಪತ್ರಗಳು. ನಿಧಾನವಾಗಿ ಅವರಿಬ್ಬರ ಬದುಕಿನಲ್ಲಿ ಆ ಪತ್ರಗಳು ಅದೆಷ್ಟು ಮುಖ್ಯವಾಗುತ್ತವೆ ಎಂದರೆ ಪ್ರತಿದಿನ ಅದಕ್ಕಾಗಿಯೇ ಅವರಿಬ್ಬರೂ ಎದುರು ನೋಡಲಾರಂಭಿಸುತ್ತಾರೆ.

ಅವರಿಬ್ಬರ ನಡುವಿನ ಈ ಪತ್ರಗಳಿಂದಾಗಿ ಅವರಿಬ್ಬರ ಬದುಕಿನಲ್ಲೂ ಬದಲಾವಣೆಗಳು ಕಾಣಿಸುತ್ತವೆ. ಸಾಜನ್ ಈಗ ಹಿಂದಿನಂತೆ ಮುಂಗೋಪಿಯಲ್ಲ, ದುಃಖದಲ್ಲಿ ಮುಳುಗಿ ಹೋದವನಲ್ಲ, ಏಕಾಂತದಲ್ಲೇ ಇರಲು ಆಶಿಸುವವನಲ್ಲ. ಬದಲಾಗಿ ಬದುಕಿನ ಬಗ್ಗೆ ಹೊಸ ಆಶೆಗಳನ್ನು ಕಾಣುವ ವ್ಯಕ್ತಿಯಾಗಿದ್ದಾನೆ. ಇಲಾ ಕೂಡ ಬದಲಾಗಿದ್ದಾಳೆ. ಗಂಡನನ್ನು ಸಂತೃಪ್ತಿಗೊಳಿಸುವುದೇ ತನ್ನ ಜೀವನದ ಗುರಿಯಲ್ಲ, ಸಂಗಾತಿ ಎಂದರೆ ಕೇವಲ ಜೊತೆಗಿರುವುದಲ್ಲ ಬದಲಾಗಿ ಆತ್ಮಕ್ಕೆ ಹತ್ತಿರವಾಗಿರುವುದು ಎಂಬುದನ್ನು ಕಂಡುಕೊಂಡಿದ್ದಾಳೆ, ಜೀವನದಲ್ಲಿ ತನಗೆ ಸಿಕ್ಕಿರುವುದಕ್ಕಿಂತ ಹೆಚ್ಚಿನದ್ದು ಇರಬೇಕು ಎಂಬ ಸತ್ಯವನ್ನು ಅರ್ಥ ಮಾಡಿಕೊಂಡಿದ್ದಾಳೆ. ತನ್ನನ್ನು ಕಡೆಗಣಿಸುತ್ತಿರುವ ಗಂಡ ಮತ್ತೊಬ್ಬಳೊಂದಿಗೆ ಸಂಬಂಧವನ್ನು ಬೆಳೆಸಿಕೊಂಡಿರುವುದರಿಂದ ಆತನನ್ನು ತೊರೆದು ಹೋಗುವ ನಿರ್ಧಾರ ಮಾಡಿದ್ದಾಳೆ.

ಸಾಜನ್ ಬಗ್ಗೆ ಇಲಾಳಲ್ಲಿ ಭರವಸೆ ಮೂಡಿದೆ, ಇಲಾ ಬಗ್ಗೆ ಸಾಜನ್‌ನಲ್ಲಿ ಹೊಸ ಕನಸುಗಳು ಚಿಗುರೊಡೆದಿವೆ. ಕೊನೆಗೊಂದು ದಿನ ಇಬ್ಬರೂ ಮುಖತಃ ಭೇಟಿಯಾಗಲು ನಿರ್ಧರಿಸುತ್ತಾರೆ. ಅವತ್ತು ಸಾಜನ್ ತನ್ನ ಉಡುಪಿನ ಬಗ್ಗೆ ವಿಶೇಷ ಕಾಳಜಿ ವಹಿಸಿ ಮನೆಯಿಂದ ಹೊರಡುತ್ತಾನೆ. ಆದರೆ ಅವರು ನಿಗದಿ ಮಾಡಿಕೊಂಡಿದ್ದ ಹೋಟೆಲ್‌ಗೆ ಸಾಜನ್ ಹೋಗುವುದಿಲ್ಲ, ಇದರಿಂದ ನಿರಾಶಳಾಗುವ ಇಲಾ ತನ್ನ ಪ್ರತಿಕ್ರಿಯೆ ಸಂಕೇತವಾಗಿ ಮಾರನೆ ದಿನ ಸಾಜನ್‌ಗೆ ಖಾಲಿ ಊಟದ ಡಬ್ಬಾ ಕಳುಹಿಸುತ್ತಾಳೆ.

ಅವತ್ತು ಸಾಜನ್ ಆ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಕೊನೆಯ ದಿನ. ಮಾರನೆ ದಿನದಿಂದ ನಿವೃತ್ತಿ. ಇಲಾಳ ಪತ್ರಕ್ಕೆ ಸಾಜನ್ ತನ್ನ ಉತ್ತರವನ್ನು ಎಂದಿನಂತೆ ಚೀಟಿಯ ಮೂಲಕ ಕಳುಹಿಸುತ್ತಾನೆ. "ನಾನು ಆ ಹೋಟೆಲ್‌ಗೆ ಬಂದಿದ್ದೆ ಆದರೆ ನಿನ್ನ ಮುಂದೆ ನಿಲ್ಲಲು ನನ್ನಿಂದ ಆಗಲಿಲ್ಲ, ನನಗೆ ಗೊತ್ತಾಗದಂತೆ ನಾನು ಎಂದೋ ಮುದುಕನಾಗಿಬಿಟ್ಟಿದ್ದೇನೆ. ನೀನೋ ಇನ್ನೂ ಯೌವನದಲ್ಲಿರುವ ಸುಂದರಿ. ಇದು ಆಗದ ಮಾತು" ಎಂದು ವಾಸ್ತವ ಸ್ಥಿತಿಯನ್ನು ಆಕೆಗೆ ಮನದಟ್ಟು ಮಾಡಲು ಪ್ರಯತ್ನಿಸುತ್ತಾನೆ.

ಇಲಾ ಜೊತೆಗೆ ಚೀಟಿ ಸಂಪರ್ಕ ಏರ್ಪಡುವ ಮುನ್ನ ಸಾಜನ್ ನಿರ್ಧರಿಸಿದ್ದಂತೆ ತನ್ನ ನಿವೃತ್ತ ಬದುಕನ್ನು ನಾಸಿಕ್ ನಗರದಲ್ಲಿ ಕಳೆಯಲು ಮಾರನೆ ದಿನ ಮುಂಬೈಯಿಂದ ಹೊರಡುತ್ತಾನೆ. ಆದರೆ ಅವತ್ತು ತಾನು ಕಳುಹಿಸುತ್ತಿದ್ದ ಡಬ್ಬಿ ಯಾವ ಆಫೀಸಿಗೆ ಹೋಗುತ್ತಿದ್ದೆಂದು ಪತ್ತೆ ಹಚ್ಚುವ ಇಲಾ ಸಾಜನ್‌ನನ್ನು ಹುಡುಕಿಕೊಂಡ ಅವನ ಆಫೀಸಿಗೆ ಬರುತ್ತಾಳೆ. ಆದರೆ ಸಾಜನ್ ಅಲ್ಲಿರುವುದಿಲ್ಲ.

ಇತ್ತ ನಾಸಿಕ್‌ಗೆ ಹೊರಟಿರುವ ಸಾಜನ್ ಟ್ರೈನಿನಲ್ಲಿ ಒಬ್ಬ ಹಣ್ಣುಹಣ್ಣು ಮುದುಕನನ್ನು ಭೇಟಿ ಆಗುತ್ತಾನೆ. ಅವನನ್ನು ನೋಡಿ ತಾನು ಇನ್ನೂ ಮುದುಕನಾಗಿಲ್ಲ, ತನಗೆ ಇನ್ನೂ ಬದುಕಿನ ಬಗ್ಗೆ ಕನಸುಗಳಿವೆ ಎಂದು ಸಾಜನ್‌ಗೆ ಅರ್ಥವಾಗುತ್ತದೆ. ಆತ ತನ್ನ ಮುಂಬೈ ಮನೆಗೆ ವಾಪಸ್ ಬಂದು ಮಾರನೆ ದಿನ ಇಲಾಳ ಮನೆಯನ್ನು ಪತ್ತೆಹಚ್ಚಲು ಹೊರಡುತ್ತಾನೆ.

ಅಷ್ಟು ಹೊತ್ತಿಗೆ ಇಲಾ ತನ್ನ ಎಲ್ಲ ಒಡವೆಗಳನ್ನು ಮಾರಿ ತನ್ನ ಮಗಳೊಂದಿಗೆ ಗಂಡನ ಮನೆಯನ್ನು ತೊರೆಯಲು ನಿರ್ಧರಿಸಿದ್ದಾಳೆ. ಸಾಜನ್ ಆಕೆಯ ಮನೆ ತಲುಪಿದಾಗ ಆಕೆ ಅಲ್ಲಿರುತ್ತಾಳಾ? ಕೊನೆಗೂ ಅವರಿಬ್ಬರು ಪರಸ್ಪರ ಭೇಟಿ ಆಗುತ್ತಾರಾ? ಅವರ ಬದುಕಿನಲ್ಲಿ ಮುಂದೇನಾಗುತ್ತದೆ.



ಹೇಳಲ್ಲಪ್ಪ! ನೀವೇ ಈ ಅಚ್ಚುಕಟ್ಟಾದ, ಚೆನ್ನಾಗಿರುವ ಸಿನಿಮಾವನ್ನು ನೋಡಿ ತಿಳಿದುಕೊಳ್ಳಿ!!

ಈ ಸಿನಿಮಾದ ಹೆಗ್ಗಳಿಕೆ ಇದರಲ್ಲಿರುವ ಪ್ರಮುಖ ಪಾತ್ರಧಾರಿಗಳ ನಟನೆ. ಇರ್ಫಾನ್ ಖಾನ್ ಅದ್ಭುತ ನಟ ಎಂಬುದರ ಬಗ್ಗೆ ಯಾರಿಗೂ ಸಂಶಯವಿಲ್ಲ. ಹೆಚ್ಚು ಸಂಭಾಷಣೆಗಳಿಲ್ಲದ ಈ ಚಿತ್ರದಲ್ಲಿ ಇರ್ಫಾನ್ ಖಾನ್ ತಮ್ಮ ನಟನಾ ಸಾಮರ್ಥ್ಯದಿಂದಲೇ ಸಾಜನ್‌ನ ಆಳದಲ್ಲಿರುವ ಏಕಾಂಗಿತನ, ಆತನಲ್ಲಿ ಸಣ್ಣಪುಟ್ಟದಾಗಿ ಚಿಗುರೊಡೆಯುವ ಆಶಾಭಾವನೆಗಳನ್ನು ಮನಮುಟ್ಟುವಂತೆ ತೋರಿಸಿದ್ದಾರೆ.

ಅವರಿಗಿಂತ ಹೆಚ್ಚು ಅಚ್ಚರಿ ಮೂಡಿಸುವುದು ಇಲಾ ಪಾತ್ರದಲ್ಲಿ ನಟಿಸಿರುವ ನಿಮ್ರತ್ ಕೌರ್. ಮೂಲಭೂತವಾಗಿ ರಂಗಕಲಾವಿದೆಯಾದ ನಿಮ್ರತ್ ಪಾಲಿಗೆ ಇದು ಎರಡನೆ ಸಿನಿಮಾ. ಹೆಚ್ಚಿನ ದೃಶ್ಯಗಳಲ್ಲಿ ಅವರು ಒಬ್ಬರೇ ಇದ್ದರೂ

ಕಂಡಹಾಗೆ



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಅವರು ಅದೆಷ್ಟು ಚೆನ್ನಾಗಿ ನಟಿಸಿದ್ದಾರೆಂದರೆ ಎಲ್ಲರೂ ಈಗ ಈಕೆ ಭವಿಷ್ಯದಲ್ಲಿ ಭರವಸೆ ಮೂಡಿಸಿರುವ ನಟಿ ಎಂದೇ ಬಣ್ಣಿಸುತ್ತಿದ್ದಾರೆ.

ಹಾಗೆಯೇ ಮುಂಬೈನ ಕಷ್ಟ, ನೋವು, ಭರವಸೆ, ಕನಸು ಎಲ್ಲವನ್ನೂ ಪ್ರತಿನಿಧಿಸುವಂತಿರುವ ಅಸ್ಲಮ್ ಶೇಖ್ ಪಾತ್ರದಲ್ಲಿ ನಟಿಸಿರುವ ನವಾಜುದ್ದೀನ್ ಸಿದ್ದಿಕಿ ಕೂಡ ಮನಮುಟ್ಟುವಂತೆ ನಟಿಸಿದ್ದಾರೆ. ಅದರಲ್ಲೂ ಇರ್ಫಾನ್ ಖಾನ್ ತರಹದ ನಟ ಇರುವ ದೃಶ್ಯಗಳಲ್ಲಿ ತಮ್ಮ ಛಾಪು ಮೂಡಿಸುವುದು ಬಹಳಷ್ಟು ನಟರಿಗೆ ಸಾಧ್ಯವೇ ಆಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲೂ ನವಾಜುದ್ದೀನ್ ಸಿದ್ದಿಕಿ ಇರ್ಫಾನ್ ಖಾನ್‌ಗೇ ಸವಾಲು ಒಡ್ಡಿ ಹಲವು ದೃಶ್ಯಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ.

'ದಿ ಲಂಚ್‌ಬಾಕ್ಸ್' ರಿತೇಶ್ ಬತ್ರಾ ಅವರು ನಿರ್ದೇಶಿಸಿರುವ ಪ್ರಥಮ ಚಿತ್ರ. ಆದರೂ ಅವರು ಪ್ರತಿಯೊಂದು ಫ್ರೇಮಿಗೂ ಅರ್ಥ ತುಂಬಿರುವ ರೀತಿ, ಎಲ್ಲೂ ಎಡವದೆ ಚಿತ್ರವನ್ನು ಮಾಡಿ ಮುಗಿಸಿರುವ ಪರಿ ನೋಡಿದರೆ ಇದು ಅವರ ಮೊದಲನೆ ಸಿನಿಮಾನ ಎಂದು ಅಚ್ಚರಿ ಆಗುತ್ತದೆ.

ಈ ಚಿತ್ರದ ಬಗ್ಗೆ ಅದೆಷ್ಟು ಜನರಿಗೆ ಭರವಸೆ ಇತ್ತೆಂದರೆ ಸ್ವತಃ ಇರ್ಫಾನ್ ಖಾನ್ ಇದಕ್ಕೆ ತಮ್ಮ ಕೈಯಿಂದ ಬಂಡವಾಳ ಹೂಡಿದ್ದಾರೆ. ಅವರ ಜೊತೆಗೆ ಖ್ಯಾತ ನಿರ್ದೇಶಕರಾದ ಅನುರಾಗ್ ಕಾಶ್ಯಪ್ ಮತ್ತು ಕರಣ್ ಜೋಹರ್ ಕೂಡ ಕೈ ಜೋಡಿಸಿದ್ದಾರೆ. ರಾಷ್ಟ್ರೀಯ ಸರ್ಕಾರಿ ಸಿನಿಮಾ ಸಂಸ್ಥೆ ಎನ್‌ಎಫ್‌ಡಿಸಿ ಕೂಡ ಇದಕ್ಕೆ ನೆರವು ನೀಡಿದೆಯಲ್ಲದೆ ಸೋನಿ ಕ್ಲಾಸಿಕ್ಸ್ ಎಂಬ ಅಂತಾರಾಷ್ಟ್ರೀಯ ಕಂಪನಿ ಇದರ ಅಂತಾರಾಷ್ಟ್ರೀಯ ಮಾರಾಟ ಹಕ್ಕನ್ನು ಖರೀದಿಸಿದೆ.

ಈ ಚಿತ್ರದ ಬಗ್ಗೆ ಇಷ್ಟೆಲ್ಲಾ ಹೇಳಿದ ಮೇಲೆ 'ದಿ ಗುಡ್ ರೋಡ್' ಬದಲಾಗಿ 'ದಿ ಲಂಚ್‌ಬಾಕ್ಸ್' ಚಿತ್ರವೇ ಆಸ್ಕರ್ ಪ್ರಶಸ್ತಿಗೆ ಭಾರತದಿಂದ ನೇಮಕವಾಗಬೇಕಿತ್ತೆ ಎಂಬ ಪ್ರಶ್ನೆ ಉಳಿಯುತ್ತದೆ. ನಾನು 'ದಿ ಗುಡ್ ರೋಡ್' ಚಿತ್ರವನ್ನು ನೋಡಿಲ್ಲವಾದ್ದರಿಂದ ಅದರ ಬಗ್ಗೆ ಏನನ್ನೂ ಹೇಳುವುದಿಲ್ಲ.

ಆದರೆ ಅವೆರಡೂ ಚಿತ್ರಗಳನ್ನು ನೋಡಿರುವ ನನ್ನ ತಂಗಿ ಮತ್ತು ಚಲನಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ಆಸ್ಕರ್ ಪ್ರಶಸ್ತಿಗೆ ಚಿತ್ರವನ್ನು ಆಯ್ಕೆ ಮಾಡುವ ಮಂಡಳಿಯಲ್ಲಿದ್ದಳು. ಆಕೆ ಹೇಳುವ ಪ್ರಕಾರ "'ದಿ ಲಂಚ್‌ಬಾಕ್ಸ್' ಚೆನ್ನಾಗಿದೆ ನಿಜ. ಆದರೆ ಅದಕ್ಕಿಂತ 'ದಿ ಗುಡ್ ರೋಡ್' ಚೆನ್ನಾಗಿದೆ ಎಂಬುದೂ ಅಷ್ಟೇ ಸತ್ಯ. ವ್ಯತ್ಯಾಸ ಯಾವುದೆಂದರೆ 'ದಿ ಲಂಚ್‌ಬಾಕ್ಸ್' ಹಿಂದೆ ದೈತ್ಯ ಕಂಪನಿಗಳಿವೆ, ಆರ್ಥಿಕ ಬಲವನ್ನು ಹೊಂದಿರುವವರಿದ್ದಾರೆ. ಆದರೆ 'ದಿ ಗುಡ್ ರೋಡ್' ಹಿಂದೆ ಸರ್ಕಾರಿ ಸಂಸ್ಥೆಯಾದ ಎನ್‌ಎಫ್‌ಡಿಸಿ ಹೊರತುಪಡಿಸಿದರೆ ಬೇರೆ ಯಾವ ಶಕ್ತಿಯೂ ಇಲ್ಲ. 'ದಿ ಲಂಚ್‌ಬಾಕ್ಸ್' ತಂಡಕ್ಕೆ ಆಸ್ಕರ್ ಪ್ರಶಸ್ತಿಗಾಗಿ ಅಬ್ಬರದ ಪ್ರಚಾರ ಮಾಡುವ ತಾಕತ್ತು ಇದೆ ಎಂಬ ಒಂದೇ ಕಾರಣಕ್ಕೆ ಅದಕ್ಕಿಂತ ಚೆನ್ನಾಗಿರುವ ಸಿನಿಮಾವನ್ನು ನಿರ್ಲಕ್ಷಿಸಬೇಕೆಂಬ ವಾದ ಸರಿಯಾದುದ್ದಲ್ಲ."

ಈಗ 'ದಿ ಗುಡ್ ರೋಡ್' ಸಿನಿಮಾದ ಬಗ್ಗೆಯೂ ನನ್ನಲ್ಲಿ ಕುತೂಹಲವಿದ್ದು ಅದನ್ನು ನೋಡುವ ಅವಕಾಶ ಸಿಗಲಿ ಎಂದು ಆಶಿಸುತ್ತಿದ್ದೇನೆ ಎಂದು ಹೇಳಿ ಈ ಲೇಖನವನ್ನು ಮುಗಿಸುತ್ತೇನೆ...

ಶಿದ್ದು ನಿರೀಕ್ಷಿತ !

ಕಾರವಾರದ ಹೊಸ ಶಾಸಕ ಕಂ ಕಳ್ಳ ಅದಿರು ರಫ್ತುದಾರ ಸತೀಶ್ ಸೈಲ್ ಯಾನೆ ಸೈಲ್ ಸಾಹುಕಾರ್‌ನನ್ನು ಸಿಬಿಐ ಹೆಡೆಮುರಿ ಕಟ್ಟಿ ಬಂದೀಖಾನೆಗೆ ದಬ್ಬಿದೆ! ಇದು ನೈಸರ್ಗಿಕ ನ್ಯಾಯ ತತ್ವ. ಉಪ್ಪು ತಿಂದೋರು ನೀರು ಕುಡಿಯಲೇಬೇಕಲ್ಲವಾ? ಹೀಗೆ ಆಗೇ ಆಗುತ್ತದೆಂದು ತುಂಬ ಹಿಂದೆಯೇ ಕಾರವಾರ-ಅಂಕೋಲಾ ಕ್ಷೇತ್ರದ ಅಷ್ಟೂ ಜನರಿಗೆ ಖಾತ್ರಿಯಾಗಿಹೋಗಿತ್ತು, 'ಪತ್ರಿಕೆ'ಯೂ ಬರೋಬ್ಬರಿ ಒಂದು ವರ್ಷದ ಹಿಂದೆಯೇ 'ಸೈಲ್‌ಗೆ ಕಾದಿದೆ ಜೈಲು' ಎಂದು ಬರೆದಿತ್ತು, ಅದೆಲ್ಲ ಈಗ ಅಕ್ಷರಶಃ ನಿಜವಾಗಿದೆ...

ಮೈನ್ಸ್ ಮಾಫಿಯಾ ಡಾನ್ ಜನಾರ್ದನ ರೆಡ್ಡಿ ಬಳಗ ಬಳ್ಳಾರಿ ಜಿಲ್ಲೆಯಲ್ಲಿ ಗೆಬರಿದ ಅಮೂಲ್ಯ ಕಬ್ಬಿಣದ ಅದಿರು ಉತ್ತರ ಕನ್ನಡದ ಬೇಲೇಕೇರಿ ಬಂದರಿನಿಂದ ಸಮುದ್ರ ಮಾರ್ಗವಾಗಿ ವಿದೇಶಕ್ಕೆ ರಫ್ತಾಗುತ್ತಿತ್ತು. ಈ ಅಕ್ರಮ ಅದಿರು ಕಳ್ಳ ಸಾಗಾಣಿಕೆ ಮಾಡುವ ನಾಲ್ಕು ಖತರ್‌ನಾಕ್ ಎಕ್ಸ್‌ಪೋರ್ಟ್ ಕಂಪನಿಗಳು ಬೇಲೇಕೇರಿಯಲ್ಲಿದ್ದವು. ಇದರಲ್ಲಿ ಸತೀಶ್ ಸೈಲ್‌ನ ಆರಾಧ್ಯ ದೈವ ಮಲ್ಲಿಕಾರ್ಜುನನ ಹೆಸರಲ್ಲಿದ್ದ ಆತನ ರಫ್ತುದಾರಿಕೆ ಕಂಪನಿಯ ಕಳ್ಳಾಟದ ಆರ್ಭಟವೇ ಜೋರಾಗಿತ್ತು, ಜನಾರ್ದನ ರೆಡ್ಡಿಯ ದುಷ್ಟಕೂಟದ ಪ್ರಮುಖ ಮಾಂಡಲೀಕನಾಗಿದ್ದ ಸೈಲ್ ರಾಜಾರೋಷವಾಗೇ ಅಕ್ರಮ ಅದಿರನ್ನು ಹಡಗಿಗೇರಿಸಿ ಕಳಿಸುತ್ತಿದ್ದ; ಲೋಕಾಯುಕ್ತದವರು ಸೀಜ್ ಮಾಡಿದ ಅದಿರನ್ನೂ ಯಾವ ಅಂಜಿಕೆ-ಅಳುಕೂ ಇಲ್ಲದೆ ಹಾಡುಹಗಲೇ ಕದ್ದು ರಫ್ತು ಮಾಡುತ್ತಿದ್ದ. ಯಾವ ಕಾನೂನು-ಕಟ್ಟಳೆಗೂ ಕೇರ್ ಮಾಡದೇ ದೋ ನಂಬರ್ ದಂಧೆ ನಡೆಸುತ್ತಿದ್ದ. ಇದೇ ಇವತ್ತು ಸೈಲ್‌ನ ಕೊರಳಿಗೆ ಉರುಳಾಗಿದೆ!!

ಸಿಬಿಐ ಬೋನಿನಲ್ಲಿ


ಸುಖದ ಸುಪ್ಪತ್ತಿಗೆಯಲ್ಲಿ ಮೆರೆದಾಡುತ್ತಿದ್ದ ಸೈಲ್ ಈಗ ಸಿಬಿಐ ಬೋನಿನಲ್ಲಿ ಬಂಧಿಯಾಗಿ ಪಿಳಿಪಿಳಿ ಕಣ್ಣು ಬಿಡುತ್ತಿದ್ದಾನೆ! ಅಲ್ಲೀಗ ಕೊಚಲಕ್ಕಿ ಗಂಜಿ-ಕೆಂಡದಲ್ಲಿ ಹುರಿದ ಒಣಮೀನು ಉಣ್ಣಬೇಕಾಗಿ ಬಂದಿದೆ. ಬಾಸ್ ಜನಾರ್ದನ ರೆಡ್ಡಿ ಕಳಿಸುತ್ತಿದ್ದ ಕಳ್ಳ ಅದಿರನ್ನಷ್ಟೇ ಸೈಲ್ ವಿದೇಶಕ್ಕೆ ಕಳಿಸಿದ್ದರೆ ಒಂಚೂರು ಬಚಾವಾಗುತ್ತಿದ್ದನೋ ಏನೋ? ಆತ ಯಾವಾಗ ಲೋಕಾಯುಕ್ತದವರು ಸೀಜ್ ಮಾಡಿದ್ದ ಅದಿರನ್ನೇ ಕಳ್ಳ ಸಾಗಾಣಿಕೆ ಮಾಡಿ ಈ ನೆಲದ ಕಾನೂನಿಗೆ ಸವಾಲು ಹಾಕಿದನೋ, ಆಗ ಆತನ ಪ್ರಾರಬ್ಧ ಕರ್ಮದ ಕೊಡ ತುಂಬಿ ತುಳುಕಲಾರಂಭಿಸಿತ್ತು. ಸುಪ್ರೀಂಕೋರ್ಟ್ ಆದೇಶದಂತೆ 2009ರ ಆರಂಭದಿಂದ ಮೇ 2010ರ ತನಕ ನಡೆದ ಅಕ್ರಮ ಗಣಿಗಾರಿಕೆ ಮತ್ತು ಅದಿರು ಕಳ್ಳ ಸಾಗಾಣಿಕೆ ಹಗರಣದ ತನಿಖೆ ಕೈಗೆತ್ತಿಕೊಂಡಿದ್ದ ಸಿಬಿಐ ಕೆಂಗಣ್ಣು ಸಹಜವಾಗೇ ಸೈಲ್‌ನ ದೋಖಾ ಎಕ್ಸ್‌ಪೋರ್ಟ್ ಕಂಪನಿ ಮೇಲೆ ಬಿದ್ದಿತ್ತು!

ಸೈಲ್‌ನ ಮಲ್ಲಿಕಾರ್ಜುನಾ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿತು. ಕಳೆದ ಸೆಪ್ಟೆಂಬರ್ 13ರಂದು ಆರ್‌ಸಿ16ಎ ಹೆಸರಿನಲ್ಲಿ ಸಿಬಿಐ ನ್ಯಾಯಾಲಯಕ್ಕೆ ಸಲ್ಲಿಸಿದ ಎಫ್‌ಐಆರ್‌ನಲ್ಲಿ ಸೈಲ್‌ನ ಕಂಪನಿ ಎಂಟೇ ತಿಂಗಳ ಅವಧಿಯಲ್ಲಿ 7.23 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಬೇಲೇಕೇರಿ ಬಂದರಿನಿಂದ ವಿದೇಶಕ್ಕೆ ಕಳಿಸಿದೆಯೆಂದು ಹೇಳಿದೆ. 2009 ರಿಂದ 2010ರ ಮೇವರೆಗೆ ಸದ್ರಿ ಬಂದರಿನಿಂದ 73 ಸೇವಾ ಪೂರೈಕೆದಾರ ಕಂಪನಿಗಳ 88.06ಲಕ್ಷ ಮೆಟ್ರಿಕ್ ಟನ್ ಅದಿರು ವಿದೇಶಕ್ಕೆ ರವಾನಿಸಲಾಗಿದೆಯೆಂಬ ಅಂಶವನ್ನು ಸಿಇಸಿ ವರದಿಯಲ್ಲಿ ಪಟ್ಟಿ ಮಾಡಲಾಗಿತ್ತು, ಆದರೆ ರಫ್ತಿಗೆ

ದೇಶಪಾಂಡೆ ಶಿಷ್ಯ



ಶಾಸಕ ಸೈಲ್‌ಗೆ ಜೈಲ್!!




ದೇಶಪಾಂಡೆ

ಪರವಾನಗಿ (ಎಂಡಿಪಿ) ಇದ್ದದ್ದು ಕೇವಲ 38.22 ಲಕ್ಷ ಮೆಟ್ರಿಕ್ ಟನ್ ಅದಿರಿಗೆ ಮಾತ್ರ!!!

ಅಂದರೆ, 50 ಲಕ್ಷ ಮೆಟ್ರಿಕ್ ಟನ್ ಅದಿರು ಬೇಲೇಕೇರಿ ಬಂದರಿನಿಂದ ಸ್ಮಗ್ಲಿಂಗ್ ಆಗಿದೆಯೆಂಬುದನ್ನು ಸಿಇಸಿ ಸತ್ಯ ಸಂಶೋಧನಾ ತಂಡ ಕಂಡುಕೊಂಡಿತ್ತು, ಇದರಲ್ಲಿ ಜುಂಜನ್ ಬೈಲ್ ಸ್ಟಾಕ್ ಯಾರ್ಡ್ ಕಂಪನಿಯೇ ಮುಂತಾದ ಹಲವು ಅದಿರು ಸಾಗಾಣಿಕೆದಾರರೊಂದಿಗೆ ಗೋಲ್‌ಮಾಲ್ ವ್ಯವಹಾರ ಮಾಡಿತ್ತು, ಸೈಲ್‌ನ ಕಂಪನಿ 7.23 ಲಕ್ ಮೆಟ್ರಿಕ್ ಟನ್ ಅದಿರನ್ನು ಅಕ್ರಮವಾಗಿ ವಿದೇಶಕ್ಕೆ ಸಾಗಿಸಿರುವ ಬಗ್ಗೆ ಸಿಬಿಐ ಪ್ರಬಲ ಸಾಕ್ಷ್ಯಾಧಾರ ಕಲೆ ಹಾಕಿಕೊಂಡಿದೆ. ಇದು ಸೈಲ್‌ನ ಮಲ್ಲಿಕಾರ್ಜುನಾ ಶಿಪ್ಪಿಂಗ್ ಕಂಪನಿಯ ಕಪ್ಪು ಮಹಿವಾಟಿನ ವೃತ್ತಾಂತವಾದರೆ, ಮತ್ತೊಂದೆಡೆ ಲೋಕಾಯುಕ್ತ ಟೀಮು ಸೀಜ್ ಮಾಡಿದ್ದ ಅದಿರನ್ನು ಹಾಡುಹಗಲೇ ಲೂಟಿ ಮಾಡಿ ಕಳ್ಳಸಾಗಾಣಿಕೆ ಆಟ ಆಡಿದ್ದಾನೆ ಸೈಲ್!!

ಸೈಲ್ ಸ್ವಾಹಾ !!

ಕಾನೂನು ನಿಷ್ಠ ಲೋಕಾಯುಕ್ತರಾಗಿದ್ದ ಸಂತೋಷ್ ಹೆಗ್ಡೆ ತಂಡ 2010ರ ಮಾರ್ಚ್ 20ರಂದು ಬೇಲೇಕೇರಿಯ ನಾಲ್ಕು ಸ್ಟೀವ್ ಡೋರಿಂಗ್ ಕಂಪನಿಗಳ ಜಟ್ಟಿ (ಹಡಗು ನಿಲ್ಲುವದಕ್ಕೆ) ಮೇಲೆ ದಾಳಿ ಮಾಡಿ 8,05,991 ಮೆಟ್ರಿಕ್ ಟನ್ ಅದಿರನ್ನು ಜಪ್ತು ಮಾಡಿತ್ತು, ಲೋಕಾಯುಕ್ತ ನಿರ್ದೇಶನದ ಅರಣ್ಯಾಧಿಕಾರಿಗಳು ವಶಪಡಿಸಿಕೊಂಡಿದ್ದ ಈ ಅದಿರಿನಲ್ಲಿ ಸೈಲ್ ಕಂಪನಿಗೆ ಸೇರಿದ ಜಟ್ಟಿಯಿಂದ 23 ಹ್ಯಾಡಲಿಂಗ್ ಕಂಪನಿಗಳು ಪೂರೈಸಿದ್ದ 2,29,279.02 ಮೆಟ್ರಿಕ್ ಟನ್ (21 ರಫ್ತುಗಾರಿಕೆ) ಅದಿರೂ ಸೇರಿತ್ತು; ಹಾಗೆಯೇ ಗುಜರಾತಿನ ಅದಾನಿ ಕಂಪನಿ, ಗೋವಾದ ಸಾಲ್ಗಾಂವಕರ್ ಕಂಪನಿ ಮತ್ತು ಬೆಂಗಳೂರಿನ ರಾಜಮಹಲ್ ಸಿಲ್ಕ್,





ಸತೀಶ್ ಮನೆ



ಬೇಲೇಕೇರಿ ಬಂದರಿನಲ್ಲಿರುವ ಅದಿರು

ಕಂಪನಿಗಳ ಕಳ್ಳ ಅದಿರೂ ಇತ್ತು. ಈ ಸೀಜ್ ಮಾಡಲಾಗಿದ್ದ ಅದಿರಲ್ಲಿ ಸೈಲ್ ದಾದಾಗಿರಿಯಿಂದ ಮತ್ತು ಕಾನೂನುಕಟ್ಟಲೆ ಧಿಕ್ಕರಿಸಿ ವಿದೇಶಕ್ಕೆ ಕಳ್ಳ ಸಾಗಾಣಿಕೆ ಮಾಡಿದ ಅದಿರು ಬರೋಬ್ಬರಿ 3.21 ಲಕ್ಷ ಮೆಟ್ರಿಕ್ ಟನ್! ಇಂಥ ಪಾತಕ ದಂಧೆಗಾಗೇ ಗ್ಯಾಂಗ್ ಅಪ್ ಆಗಿದ್ದ ಅದಾನಿ, ಸಾಲ್ಗಾಂವ್ಕರ್, ರಾಜಮಹಲ್ ಸಿಲ್ಕ್ ಕಂಪನಿಗಳು ಕೈಗೆ ಸಿಕ್ಕಷ್ಟು ಕಳ್ಳ ಸಾಗಾಣಿಕೆ ಮಾಡಿವೆ. ಸೈಲ್‌ನ ಸೋಗಲಾಡಿ ವ್ಯವಹಾರ ಒಂದರಲ್ಲೇ ಸರ್ಕಾರದ ಬೊಕ್ಕಸಕ್ಕೆ ಸರಿಸುಮಾರು 100 ಕೋಟಿ ರೂಪಾಯಿ ಖೋತಾ ಆಗಿದೆ!! ಇದು ಲೋಕಾಯುಕ್ತದವರು ಸೀಜ್ ಮಾಡಿದ್ದ ಅದಿರಲ್ಲಿ ಕದ್ದು ಸಾಗಿಸಿದ ಅದಿರಿನ ಮೊತ್ತವಷ್ಟೇ. ಇನ್ನು ಅಕ್ರಮವಾಗಿ 2-3 ವರ್ಷ ಅದಿರು ಕಳ್ಳ ಸಾಗಾಣಿಕೆ ಮಾಡಿದ ಮಹಿವಾಟಲ್ಲಿ ಇದಕ್ಕೆ ಹತ್ತು ಪಟ್ಟು ಹಾನಿ ಸೈಲ್‌ನಿಂದ ನಾಡಿಗಾಗಿದೆ ಎಂದು ಅಂದಾಜಿಸಲಾಗಿದೆ.

ಹಾಗೆ ನೋಡಿದರೆ ಸೈಲ್‌ನ ಅಸಲಿ ಅವತಾರ ಅನಾವರಣ ಆಗಿದ್ದು 2010ರ ಫೆಬ್ರವರಿ 20ರಂದು. ಅಂದು ಲೋಕಾಯುಕ್ತ ಟೀಮಿನ ಪ್ರಾಮಾಣಿಕ-ನಿಷ್ಠುರ ಅರಣ್ಯಾಧಿಕಾರಿ ಡಾ. ಯು.ವಿ.ಸಿಂಗ್ ಬೇಲೇಕೇರಿ ಬಂದರಿನ ಕಳ್ಳ ಅದಿರು ರಫ್ತುದಾರರ ಅಡ್ಡೆಗಳ ಮೇಲೆ ಮಾರುವೇಷದಲ್ಲಿ ದಾಳಿ ಮಾಡಿದ್ದರು. ನೇರಾನೇರ ತನಿಖೆಗೆ ಬೇಲೇಕೇರಿಗೆ ಬಂದುಹೋಗುವುದು ತುಂಬ ರಿಸ್ಕಿ ಸಂಗತಿಯಾಗಿತ್ತು, ಅಂದಿನ ಬಿಜೆಪಿ ಸರ್ಕಾರದ ಸೂತ್ರಧಾರನಾಗಿದ್ದ ಜನಾರ್ದನ ರೆಡ್ಡಿ ಕೃಪಾಕಟಾಕ್ಷದಲ್ಲಿ ಬೇಲೇಕೇರಿಯಲ್ಲಿ ಅದಿರು ಕಳ್ಳಸಾಗಾಣಿಕೆ ನಡೆಯುತ್ತಿತ್ತು, ಅಲ್ಲಿ ಅಪಾಯಕಾರಿ ರೌಡಿಗ[ಳು] ಸದಾ ಕಾವಲಿರುತ್ತಿದ್ದರು. ಅದಿರು ಮಾಫಿಯಾ ಬಿಟ್ಟ[ರೆ] ಉಳಿದವರ್‍ಯಾರೂ ಬೇಲೇಕೇರಿ ಬಂದರೂ ಅಂಗ[ಳ] ಪ್ರವೇಶಿಸುವಂತೆಯೇ ಇರಲಿಲ್ಲ, ಹೀಗಾಗಿ ಸಿಂಗ್ ಉತ್ತ[ರ] ಕರ್ನಾಟಕದ ಮಂದಿ ತೀರ್ಥಯಾತ್ರೆಗೆ ಹೋಗುವ ವೇಷದ[ಲ್ಲಿ] ತನ್ನ ತನಿಖಾ ತಂಡವನ್ನು ಬೇಲೇಕೇರಿಗೆ ಕೊಂಡೊಯ್ದಿದ್ದ[ರು] ಅವರ ವಾಹನಕ್ಕೆ ಕೇಸರಿ ಬಾವುಟಗಳನ್ನು ಕಟ್ಟಲಾಗಿತ್[ತು]


ಅಂತೂ ಬಂದರು ಪ್ರಾಂಗಣ ತಲುಪಿದ ಸಿಂಗ್ ತಂಡ ಸೈಲ್‌ನ ಕಂಪನಿ ಸಮೇತ ಇನ್ನಿತರ ಮೂರ[ು] ರಫ್ತುದಾರರ ಅಡ್ಡೆ ಮೇಲೆ ದಾಳಿ ಮಾಡಿದ್ದರು. ಅಂದ[ು] ಸಿಂಗ್ ಪಡೆಗೆ ಸಿಕ್ಕಿದ್ದು ಬರೋಬ್ಬರಿ 40 ಗೋ[ಣಿ] ಚೀಲದಷ್ಟು ದಾಖಲೆ; ಕಂಪ್ಯೂಟರ್ ಫೈಲ್, ಸಿ[ಡಿ] ಹಾರ್ಡ್‌ಫೈಲ್... ಇತ್ಯಾದಿ ದಾಖಲೆಗಳು ಈ ನಾಲ್[ಕು] ಅದಿರು ಎಕ್ಸ್‌ಪೋರ್ಟ್ ಕಂಪನಿಗಳ ದೊರೆಗಳು ಸರ್ಕಾ[ರಕ್ಕೆ] ದಿನನಿತ್ಯ ಕೋಟಿ-ಕೋಟಿ ಹಾನಿ ಮಾಡಿ ಅಕ್ರ[ಮ] ಐಶ್ವರ್ಯವಂತರಾಗುತ್ತಿರುವುದು ಸಾಬೀತುಪಡಿಸುವಂತಿತ್[ತು] ಸಿಂಗ್ ವರದಿ ಆಧರಿಸಿ ನ್ಯಾ. ಸಂತೋಷ್ ಹೆಗ್ಡೆ ಗ[ಣಿ] ಕರ್ಮಕಾಂಡದ ವರದಿ ಕೊಟ್ಟಾಗಂತೂ ಸೈಲ್ ಪ[ಕ್ಕಾ] ಕಳ್ಳನೆಂಬುದಕ್ಕೆ ಯಾವ ಅನುಮಾನವೂ ಇರಲಿ[ಲ್ಲ] ಲೋಕಾಯುಕ್ತ ವರದಿ ಬರುವ ಮೊದಲೇ ಕಾರವಾ[ರ] ಡಿಸಿಎಫ್ ಆಗಿದ್ದ ಗೋಕುಲ್ ಹೈಕೋರ್ಟ್‌ಗೆ ಒಂದ[ು] ಪ್ರಮಾಣ ಪತ್ರ ಈ ಅದಿರು ಅವ್ಯವಹಾರದ ಕುರಿ[ತು] ಕೊಟ್ಟಿದ್ದರು. ಜೂನ್ 23, 2010ರ ಈ ಪ್ರಮಾ[ಣ] ಪತ್ರದಲ್ಲಿ 2009ರಿಂದ ಫೆಬ್ರವರಿ 2010ರವರೆಗೆ ಕಾರವ[ಾರ] ಮತ್ತು ಬೇಲೇಕೇರಿ ಬಂದರಿಗೆ 35,319 ಲಕ್ಷ ಮೆಟ್ರ[ಿಕ್] ಟನ್ ಅಕ್ರಮ ಅದಿರು ಬಂದಿದೆ. ಈ 1060 ಕೋ[ಟಿ] ರೂ.ಗಳ ಅದಿರನ್ನು ಸೈಲ್‌ನ ಮಲ್ಲಿಕಾರ್ಜುನ ಕಂಪ[ನಿ] ಮತ್ತು ಇತರ ಮೂರು ಎಕ್ಸ್‌ಪೋರ್ಟ್ ಕಂಪನಿಗ[ಳು] ಕಳ್ಳ ಸಾಗಾಣಿಕೆ ಮಾಡಿದ್ದವು. ಆ ನಂತರ ಬೇಲೇಕೇ[ರಿ] ಬಂದರು ಭಾನ್ಗಡಿ ಹಿಂದೆ ಬೇತಾಳನಂತೆ ಬಿದ್ದಿ[ದ್ದ] ಧಾರವಾಡದ ಸಮಾಜ ಪರಿವರ್ತ[ನಾ] ಸಮುದಾಯದ ಎಸ್.ಆರ್[.] ಹಿರೇಮಠ. ಆಗ ಗಣಿ ಕರ್ಮಕಾಂ[ಡದ] ವಿಕಾರ ಮುಖ ಒಂದೊಂದಾ[ಗಿ] ಅನಾವರಣ ಆಗತೊಡಗಿತು.

ಸೈಲ್ ಪ್ರೊಫೈಲ್

ಕರಾರುವಾಕ್ಕಾಗಿ ಸಿಬಿ[ಐ] ಬೇಟೆಯಾಡಿರುವ ಸೈಲ್ ಸಾ[...] ಸಾಮಾನ್ಯ ಆಸಾಮಿಯಲ್ಲ. ಆ[...] ಇತಿಹಾಸ-ಭೂಗೋಳ ಕುತೂಹಲಕರ. ಕಳೆದ ನಾಲ್[ಕು] ವರ್ಷದಿಂದ ಉತ್ತರ ಕನ್ನಡದ, ಅದರಲ್ಲೂ ಕಾರವಾ[ರ] ಅಂಕೋಲಾ ಅಸೆಂಬ್ಲಿ ಕ್ಷೇತ್ರದಲ್ಲಿ ಧೂಮಕೇತುವಿ[ನಂತೆ] ಉರಿದ ಸೈಲ್ ಗಣ್ಯ ಕಳ್ಳ! ಕಬ್ಬಿಣದ ಅದಿರನ್ನು ಅಕ್ರಮ[ವಾಗಿ] ಅಹೋರಾತ್ರಿ ಹಡಗು ತುಂಬಿ ವಿದೇಶಕ್ಕೆ ಕಳಿಸಿ ಸಾವಿರ ಕೋಟಿ ತೂಗುವ ಸಾಹುಕಾರನಾದವನು. ದೋ ನಂ[ಬರ್] ದುಡ್ಡಿನ ಬಲದಿಂದಲೇ ಕಾರವಾರ-ಅಂಕೋಲ[ಾ] ರಾಜಕೀಯ ಪಡಸಾಲೆಯಲ್ಲಿ ಸಾಮಾಜಿಕ ಜಗುಲಿ[...] ಕೊಡಗೈ ದಾನಿ ಎಂದು ತನಗೆ ತಾ[ನೇ] ಆರೋಪಿಸಿಕೊಂಡವನು. ಇಂಜಿನಿಯರಿಂಗ್ ಕಾಲೇ[ಜು] ಕಟ್ಟಿಸಿದ 'ಶಿಕ್ಷಣೋದ್ಯಮ' ಪ್ರೇಮಿ. ತನ್ನ ಆಳೆತ್ತರದ ಕಟ[...] ಸಮೇತ ಆ್ಯಡ್-ಫ್ಲೆಕ್ಸ್-ಬ್ಯಾನರ್ ಬೇನಾಮಿಯ[...] ಹಾಕಿಸಿಕೊಂಡು ಮರ್ಯಾದಾ ಪುರುಷೋತ್ತಮ[...] ಅಂಡಲೆದವನು. 'ಸಿಜರೀನ್ ಸಚಿವ'ನಾಗಿದ್ದ ಆನ[ಂದ್] ಅಸ್ನೋಟಿಕರ್‌ಗೆ ನಡುಬೀದಿಯಲ್ಲೇ ಸೆಡ್ಡು ಹೊ[ಡೆದು] ನಿಂತವನು. ಹಳೆ ಹುಲಿ ಆರ್.ವಿ. ದೇಶಪಾಂ[ಡೆ] ಶಿಷ್ಯೋತ್ತಮ. ಮ್ಯಾಗಿ ಕಾಂಗ್ರೆಸ್ ಟಿಕೆಟ್ ತಪ್ಪಿಸಿ[...] ಪಕ್ಷೇತರನಾಗಿ ಕಾಂಗ್ರೆಸ್‌ನ ಮಹಿನಬ್ರಷ್ಟತೆ ಎತ್ತಿಯಾಡಿ ತ[...] ಅಪಾಯಕಾರಿಯಾದ ಎದುರಾಳಿ ಆನಂದ್ ಅಸ್ನೋಟಿ[ಕರ್‌ನನ್ನು] ಮಣಿಸಿ ಶಾಸಕನಾದವನು!!

ಇಂಥ ಸೈಲ್ ಸಾಹುಕಾರ ಜೈಲು ಸೇರುತ್ತಾನೆ[...] ಎಲ್ಲಾಗದಿದ್ದರೂ ಕಾರವಾರ-ಅಂಕೋಲಾ ರಾಜಕಾರ[ಣ] ಅಲ್ಲೋಲಕಲ್ಲೋಲ ಆಗೇ ಆಗುತ್ತದೆ. ಆಜನ್ಮ

ಶಾಸಕ ಹೆಬ್ಬಾರ್ ದುಸ್ವಪ್ನ!!




ಯಲ್ಲಾಪುರದ ಕಾಂಗ್ರೆಸ್ ಶಾಸಕ ಶಿವರಾಮ್ ಹೆಬ್ಬಾರ್ ಮತ್ತವನ ಕುಲೋದ್ಧಾರಕ ವಿವೇಕ್ ಹೆಬ್ಬಾರ್ ಸಿಬಿಐ ಹಿಟ್ ಲಿಸ್ಟ್‌ನಲ್ಲಿದ್ದಾರೆ. ಹೆಬ್ಬಾರ್ ವಂಶದ ಅದಿರು ಅವ್ಯವಹಾರದ ಕಂಪನಿ ಹೆಸರು "ಡ್ರೀಮ್ ಲಾಜಿಸ್ಟಿಕ್." ಆದ್ದರಿಂದ ಈಗ ಅಪ್ಪ-ಮಗನಿಗೆ ಸಿಬಿಐನ ಕೆಟ್ಟ ಕನಸೇ ಹಗಲು-ಇರುಳೂ ಕಾಡುತ್ತಿದೆ.

ಡ್ರೀಮ್ ಲಾಜಿಸ್ಟಿಕ್ ಕಂಪನಿಯ ಆರಂಭದ ದೊರೆ ಈಗ ಶಾಸಕನಾಗಿರುವ ಶಿವರಾಮ ಹೆಬ್ಬಾರ್ ಎಂಬ ಗೋಲ್‌ಮಾಲ್ ಮಾಣಿ. ನಂತರದ ಕಂಪನಿಯ ಆಧಿಪತ್ಯ ಮಗ ವಿವೇಕ್ ಹೆಬ್ಬಾರ್ ಎಂಬ ರಂಗೀಲಾ ಹುಡುಗ ವಹಿಸಿಕೊಂಡಿದ್ದ. ಅಪ್ಪನಿಗಿಂತ ಮಗನೇ "ವ್ಯವಹಾರಸ್ಥ"ನೆಂಬ ಗುಲ್ಲು ಡ್ರೀಮ್ ಲಾಜಿಸ್ಟಿಕ್ ತೇಜಿಯಲ್ಲಿದ್ದಾಗ ಹಬ್ಬಿತ್ತು. ಈ ಕಂಪನಿಯಲ್ಲಿ ನೂರಾರು ರಕ್ಕಸ ಲಾರಿಗಳಿದ್ದವು. ಇವೆಲ್ಲ ನಿಗದಿತ 16 ಟನ್‌ಗಿಂತ ಹೆಚ್ಚು ಅಕ್ರಮ ಅದಿರು ಬಳ್ಳಾರಿಯಿಂದ ಬೇಲೇಕೇರಿಗೆ ತರುತ್ತಿದ್ದವು. ಜೊತೆಗೆ ವಿದೇಶಕ್ಕೂ ಕಳ್ಳ ಅದಿರನ್ನು ಕಳ್ಳ ಸಾಗಾಣಿಕೆ ಡ್ರೀಮ್ ಲಾಜಿಸ್ಟಿಕ್ ಮಾಡುತ್ತಿತ್ತು.

ಈಗ ಕುತೂಹಲ ಇರುವುದು, ಸಿಬಿಐ ಬೇಟೆಯಾಡೋದು ಅಪ್ಪನನ್ನೋ ಅಥವಾ ಮಗನನ್ನೋ ಎಂಬ ಜಿಜ್ಞಾಸೆಯಲ್ಲಿ. ಅಕ್ರಮ ನಡೆದಾಗ ಡ್ರೀಮ್ ಲಾಜಿಸ್ಟಿಕ್‌ನ ಒಡೆಯನಾಗಿದ್ದವನು ಶಾಸಕ ಶಿವರಾಮ ಹೆಬ್ಬಾರನೇ ಹೊರತು ಆತನ ಮಗ ವಿವೇಕ್ ಹೆಬ್ಬಾರ್ ಅಲ್ಲವೆಂದು ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್. ಹಿರೇಮಠರ ವಾದ. ಶಾಸಕ ಹೆಬ್ಬಾರ್ ತನಗದು ಸಂಬಂಧ ಇಲ್ಲ-ವಿವೇಕನೇ ಕಂಪನಿ ಕಿಂಗ್ ಎನ್ನುತ್ತಿದ್ದಾನೆ. ಆದರೆ ಒಳಗೊಳಗೇ ಆತ ತಾನೇ ಜೈಲು ಪಾಲಾಗುವ ಸಿದ್ಧತೆ ಮಾಡುತ್ತಿದ್ದಾನೆ. ಎಷ್ಟೆಂದರೂ ಹೆತ್ತ ಕರುಳಲ್ಲವಾ? ಮಗನನ್ನು ಜೈಲಿಗೆ ಕಳಿಸಲು ಶಿವರಾಮ್‌ಗೆ ಮನಸ್ಸಿಲ್ಲ! ಎಮ್ಮೆಲ್ಲೆಯಾದ ಖುಷಿ ನಾಲ್ಕೇ ತಿಂಗಳಿಗೆ ಸಿಬಿಐ ಕಸಿಯಬಹುದೆಂದು ಹೆಬ್ಬಾರ್‌ಗೆ ಯಾವ ಡ್ರೀಮ್ ಬಿದ್ದಿರಲಿಲ್ಲ, ಪಾಪ!

ಆನಂದದಲ್ಲಿ ಅಸ್ನೋಟಿಕರ್



ಶಾಸಕ ಸೈಲ್ ಜೈಲು ಪಾಲಾಗುತ್ತಿದ್ದಂತೆಯೇ ಆತನ ಎದುರಾಳಿ ಆನಂದ್ ಅಸ್ನೋಟಿಕರ್ ಪ್ರತ್ಯಕ್ಷನಾಗಿದ್ದಾನೆ. ಕ್ಷೇತ್ರ ಅನಾಥವಾಗಿದೆ ಎಂದು ಅಲವತ್ತುಕೊಳ್ಳುತ್ತಿದ್ದಾನೆ. ಪಾಪ, ಎಂಥ ಕ್ಷೇತ್ರ ಕಳಕಳಿ!!

ಆತನ ಕಾಂಗ್ರೆಸ್ ಪ್ರವೇಶಕ್ಕೆ ಸೈಲ್ ಗುರು ದೇಶಪಾಂಡೆ ಅಡ್ಡಗಾಲು ಯಶಸ್ವಿಯಾಗಿ ಹಾಕಿದ್ದರು. ಸೈಲ್ ಜೈಲ್ ಪಾಲಾಗುವ ತನಕ-ಕಾಂಗ್ರೆಸ್ ಸೇರಲು ಬಿಡಬಾರದೆಂದು ಮ್ಯಾಗಿ-ಅಸ್ನೋಟಿಕರ್ ಪ್ಲಾನ್ ಹಾಕಿದ್ದರು. ಆತ ಜೈಲು ಸೇರಿದರೆ ಅಸ್ನೋಟಿಕರ್ ಕಾಂಗ್ರೆಸ್ ...ವೇಶ ನಿರಾತಂಕ ಎಂಬ ಲೆಕ್ಕಾಚಾರ ಮ್ಯಾಗಿಯದು. ದೇಶಪಾಂಡೆಗೂ ಲೋಕಸಭೆ ಎಲೆಕ್ಷನ್‌ನಲ್ಲಿ ತನ್ನ ಮಗನೇ ...ಂಡಿಡೇಟಾದರೆ ಅಸ್ನೋಟಿಕರ್ ಸಪೋರ್ಟ್ ಬೇಕಾಗುತ್ತದೆ.

ಈ ಸೂತ್ರ-ಸಮೀಕರಣ ಹಾಕುತ್ತ ಅಸ್ನೋಟಿಕರ್ ಈಗ ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಿದ್ದಾನೆ. ಕಾಂಗ್ರೆಸ್ ...ಬಾಗಿಲು ತನಗೆ ತೆರೆಯುತ್ತದೆ ಎಂದು ಕನಸು ಕಾಣುತ್ತಿದ್ದಾನೆ.



...ಂಕೇಶ್' ಸೆಪ್ಟೆಂಬರ್ 12, 2012 ರ ಸಂಚಿಕೆಯಲ್ಲಿ ...ಸೈಲ್‌ಗೆ ಕಾದಿದೆ ಜೈಲ್' ವರದಿ ಪ್ರಕಟವಾಗಿತ್ತು


...ಸ್ನೋಟಿಕರ್‌ನ ಸಾಮ್ರಾಜ್ಯದಲ್ಲಿ ಆನಂದದ ಹೊನಲೇ ...ರಿಯುತ್ತದೆ. ಸೈಲ್ ತನ್ನ ಗುರುವರ್ಯ ಜನಾರ್ದನ್ ...ಯಂತೆ ವರ್ಷಗಟ್ಟಲೆ ಜೈಲಲ್ಲಿ ...ಳಿತರಂತೂ ಆತನ ರಾಜಕೀಯ-...ಮಾಜಿಕ ಮತ್ತು ವ್ಯಾಪಾರಿ ಸಂಸ್ಥಾನ-...ಹತುಗಳೆಲ್ಲ ಪಾಳುಬಿದ್ದು ...ಗುತ್ತದೆ! ಆಗ ಸೈಲ್ ಎಲ್ಲಿಂದ ...ದಿದ್ದನೋ ಅಲ್ಲಿಗೇ ಹೋಗಬೇಕಾಗಿ ...ದರೂ ಬರಬಹುದು. ಈ ಸೈಲ್‌ನ ...ರು ಅಡ್ಡ ಕಸುಬು ಶುರುವಾಗಿದ್ದು ...ದ ಗೋವಾದ ಒಂದು ಶಿಪ್ಪಿಂಗ್ ...ಡರ್‌ನಲ್ಲಿ. ಅಲ್ಲಾತ ಶಿಪ್ಪಿಂಗ್ ...ಯೊಬ್ಬನ ಚಾಕರಿ ಮಾಡಿಕೊಂಡಿದ್ದ. ...ಲೋಕೋಪಯೋಗಿ ಇಲಾಖೆಯ ...! ಓವರ್‌ಸೀಯರ್‌ನ ಮಗನಾದ ...ಶ್ ಸೈಲ್ ಡಿಗ್ರಿ ಮುಗಿಸಿ ...ಟ್ಟೆಪಾಡಿನ ನೌಕರಿಗಾಗಿ ...ಅಲೆಯುತ್ತಿದ್ದಾಗ ಹೋಗಿ ತಲುಪಿದ್ದು ...ದರು ನಗರಿಯಾದ ಗೋವಾದ ...ಗಾಂವ್.


...ಅಲ್ಲಾತನಿಗೆ ಶಿಪ್ಪಿಂಗ್ ದೊರೆ ...ಬ್ಬನ ಕಚೇರಿಯಲ್ಲಿ ದೇಖರೇಖಿ ...ಕ ಸಿಗುತ್ತದೆ. ಚಾಲಾಕಿ ಸೈಲ್ ...ನಕ್ಕೆ ಸ್ಟೀವಡೋರ್ ದಂಧೆ ಶುರು ಹಚ್ಚಿಕೊಳ್ಳುತ್ತಾನೆ. ...ಹೊತ್ತಿಗೆ ಮಡಗಾಂವ್ ಬಂದರಿನಲ್ಲಿ ಅದಿರು ...ಪಾರ ಆರಂಭವಾಗುತ್ತದೆ. ಬಂದರು ದಂಧೆಯ ...ಖಾ-ದಗಲ್‌ಬಾಜಿ ಕರಗತ ಮಾಡಿಕೊಂಡಿದ್ದ ಸೈಲ್ ...ಮ ಹ್ಯಾಂಡಲಿಂಗ್ ಏಜೆಂಟಗಿರಿಗೆ ಇಳಿಯುತ್ತಾನೆ. ...ಂದು ಶುದ್ಧ ದಗಾಕೋರ ದಲ್ಲಾಳಿಗಿರಿ. ಅದಿರನ್ನು ...ಗೇರಿಸಿ ಕಮೀಷನ್ ಪಡೆಯುತ್ತಿದ್ದ ಸೈಲ್ ಅದೇ ...ದರಿನಲ್ಲಿ ಹೆಸರುವಾಸಿ ಶಿಪ್ಪಿಂಗ್ ಉದ್ಯಮಿಯಾಗಿ ...ರ್ಪಡುತ್ತಾನೆ! ಇದು ಕೋಟಿ-ಕೋಟಿಯ ಪಕ್ಕಾ ಕಪ್ಪು ...ಆಟ!!

...ನಂತರ ಅಬ್ಕಾರಿ ಸೈಲ್ ಹಿಂತಿರುಗಿ ನೋಡಿದ್ದೇ ...ಗೋವಾದ ಪ್ರಮುಖ ಅದಿರು ರಫ್ತುದಾರ ಧಣಿಯಾಗಿ ...ದ ಈತನ ಕಣ್ಣು ಬೇಲೇಕೇರಿ ಬಂದರಿನ ಮೇಲೆ ...ತ್ತದೆ. ದಗಲುಬಾಜಿ ಧೀರರಾದ ಮಂಗಲದಾಸ್ ...ಮತ್ತು ಕೃಷ್ಣ ಕೇಳಸ್ಕರ್ ಜತೆಗೂಡಿ ಬೇಲೇಕೇರಿ ...ರಿನಲ್ಲಿ ಅದಿರು ಸಾಗಿಸುವ ಕಾರ್ಯಾಚರಣೆಗೆ ...ತ್ತಾನೆ. ಆ ವೇಳೆಗೆ ಸೈಲ್‌ಗೆ ಅದಿರು ರೇಖಾ

ದಂಧೆಯ ದೊರೆ ಜನಾರ್ದನ್ ರೆಡ್ಡಿಯ ಪಾತಕಲೋಕದಲ್ಲಿ ಎಂಟ್ರಿಯೂ ಸಿಗುತ್ತದೆ. ಈ ಬಲದಿಂದ ಸೈಲ್ ಬೇಲೇಕೇರಿ ಬಂದರಿನಲ್ಲಿ ಹಗಲಿರುಳೂ ಅಕ್ರಮ-ಅವ್ಯವಹಾರ ನಿರಾತಂಕವಾಗಿ ಮಾಡುತ್ತ ಸಾಗಿದ! ಬಂದರು-ಕಸ್ಟಮ್ಸ್-ಪೊಲೀಸ್-ಸಾರಿಗೆ-ಕಂದಾಯ-ಗಣಿ, ಭೂವಿಜ್ಞಾನ... ಮುಂತಾದ ಆಯಕಟ್ಟಿನ ಇಲಾಖೆಯ ಅಧಿಕಾರಿಗಳ ಪಳಗಿಸಿಕೊಂಡು ಕಾನೂನುಬಾಹಿರ ಕರಾಮತ್ತಿನಿಂದ ಹಡಗುಗಟ್ಟಲೆ ಹಣ ಮಾಡಲಾರಂಭಿಸಿದ!

ಗಣಿ ಗೂಂಡಾ ಜನಾರ್ದನ ರೆಡ್ಡಿ ಬಿಜೆಪಿ ಸರ್ಕಾರವನ್ನೇ ಆಳುತ್ತಿದ್ದ ದಿನಗಳವು. ರೆಡ್ಡಿಯ ಪರಮಾಪ್ತನಾಗಿದ್ದ ಸೈಲ್ ಬೇಲೇಕೇರಿಯಲ್ಲಿ 'ಸೈಲ್ ರಿಪಬ್ಲಿಕ್' ಸ್ಥಾಪಿಸಿಕೊಂಡುಬಿಟ್ಟಿದ್ದ. ಸಾಕ್ಷಾತ್ ಜನಾರ್ದನ್ ರೆಡ್ಡಿಯೇ ಬೆನ್ನಿಗಿರುವುದರಿಂದ ತನಗ್ಯಾರೂ ಏನೂ ಮಾಡಲಾಗದೆಂಬ ಅಹಂಕಾರ ತಲೆಗೇರಿಸಿಕೊಂಡಿದ್ದ. ಇದು ಅದ್ಯಾವ ಪರಿ ಸೈಲ್‌ನಲ್ಲಿ ಸೊಕ್ಕು ತುಂಬಿತೆಂದರೆ, ಲೋಕಾಯುಕ್ತದಂಥ ಸಂಸ್ಥೆ ಸೀಜ್ ಮಾಡಿದ ಅದಿರೇ ಕದ್ದು ವಿದೇಶಕ್ಕೆ ಕಳಿಸುವ ದುಃಸ್ಸಾಹಸಕ್ಕೆ ಕೈಹಾಕಿಬಿಟ್ಟ! ಅದೇ ವೇಳೆಗೆ ಸೈಲ್ ಕಾರವಾರದ ಖಾಲಿ ಕಾಂಗ್ರೆಸ್‌ನ ಮಹಾ ಪೋಷಕನಾಗಿ ಅವತರಿಸಿ ಬಿಟ್ಟಿದ್ದ. ಆಪರೇಷನ್ ಕಮಲಕ್ಕೆ ಬಲಿಯಾಗಿದ್ದ ಆನಂದ್ ಅಸ್ನೋಟಿಕರ್ ವಿರುದ್ಧ ಸ್ಪರ್ಧಿಸಿ ಸೋತಿದ್ದ ಸೈಲ್‌ಗೆ ದೇಶಪಾಂಡೆ ಮತ್ತು ದಿಲ್ಲಿ ಲೆವೆಲ್‌ನ ಕಾಂಗ್ರೆಸಿಗರ ಸಖ್ಯಾ ಕುದುರಿತ್ತು! 2013ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟಾಗಿ ಅಸ್ನೋಟಿಕರ್‌ನ ಮಣಿಸುವ ಸ್ಕೆಚ್ ಹಾಕಿಕೊಂಡು ಕೋಟಿ-ಕೋಟಿ ನೀರಂತೆ ಹರಿಸಲಾರಂಭಿಸಿದ್ದ.


ಸಂತೋಷ್ ಹೆಗ್ಡೆ


ಯು.ವಿ.ಸಿಂಗ್

ಕಾಂಗ್ರೆಸ್ ಟಿಕೆಟ್ ತಪ್ಪಿದಾಗ ಪಕ್ಷೇತರನಾಗಿ ನಿಂತಿದ್ದ ಸೈಲ್ ಪರ ಅನುಕಂಪ ಎದ್ದಿತ್ತು. ಕಾಂಗ್ರೆಸ್ ಮೋಸ ಮಾಡಿತೆಂಬ ಸಿಟ್ಟು ಜನರಲ್ಲಿ ಮೂಡಿದ್ದು ಸೈಲ್‌ಗೆ ವರವಾಯ್ತು. ಜತೆಗೆ ಅಸ್ನೋಟಿಕರ್‌ನ ನಖರಾ-ನಾಲಾಯಕ್‌ತನದಿಂದ ಬೇಸತ್ತ ಕ್ಷೇತ್ರದ ಮತದಾರರು ಅನಿವಾರ್ಯವಾಗಿ ಅದಿರು ಕಳ್ಳ ಸೈಲ್‌ನನ್ನೇ ಶಾಸಕನಾಗಿ ಮಾಡಿಕೊಳ್ಳುವ ದುರಂತ ಎದುರಾಯ್ತು.

ಈ ಸೈಲ್ ಎಲೆಕ್ಷನ್ ಹೊತ್ತಲ್ಲಿ 66 ಕೋಟಿ ರೂ. ಆಸ್ತಿ ಘೋಷಿಸಿದ್ದ. ಆದರೆ ಕಾರವಾರದಲ್ಲಿರುವ ಸುದ್ದಿಗಳ ಪ್ರಕಾರ ಆತ ಸಾವಿರ ಕೋಟಿ ದೊರೆ; ಕಾರವಾರದ 'ಭೂಪತಿ'. ಕಾರವಾರ-ಅಂಕೋಲೆಯಲ್ಲಿ ಆತ ಅಪಾರ ಭೂಮಿ ಬೇನಾಮಿಯಾಗಿ ಖರೀದಿಸಿದ್ದಾನೆ. ಅಷ್ಟೇ ಅಲ್ಲ, ಸೈಲ್ ತೆರಿಗೆ ವಂಚನೆ ಪಾತಕಿಯೂ ಹೌದು. ಅಧಿಕಾರಿಗಳಿಗೆ ಲಂಚ ಕೊಟ್ಟು ಕಳ್ಳ ಕಸುಬು ನಡೆಸಿದ್ದಾನೆ. ಈತನಿಂದ ಸರ್ಕಾರಕ್ಕೆ 458 ಕೋಟಿ ರೂ. ಹಾನಿಯಾಗಿದೆ!

ಸಿಬಿಐ ಸೈಲ್ ಸಾಹುಕಾರ ಮೇಲೆ ಐಪಿಸಿ 120 ಬಿ ಪ್ರಕಾರ ಕ್ರಿಮಿನಲ್ ಒಳಸಂಚು, ಕಳ್ಳತನದಿಂದ ಅದಿರು ಪಡೆದದ್ದು, ಅರಣ್ಯನಾಶ, ಲೂಟಿ, ವಂಚನೆ, ಸೀಜ್ ಮಾಡಿದ್ದ ಅದಿರನ್ನೇ ಕದ್ದು ಸಾಗಿಸಿದ ಕೇಸ್ ಹಾಕಿದೆ. ಐಪಿಸಿ 379, 411 ಮತ್ತು 447 ಪ್ರಕಾರ ಸೈಲ್ ಮೇಲೆ ಪ್ರಕರಣ ಜಡಿಯಲಾಗಿದೆ.

ಅಕ್ರಮ ಆಸ್ತಿ-ಅಂತಸ್ತು ಸೈಲ್‌ಗೆ ನೆಮ್ಮದಿ ನೀಡಿದ್ದಕ್ಕಿಂತ ನಿದ್ದೆಗೆಡಿಸಿದ್ದೇ ಜಾಸ್ತಿ. ಕಳೆದೊಂದು ವರ್ಷದಿಂದ ಆತ ಸಿಬಿಐ ಭಯದಲ್ಲೇ ಬದುಕು ಕಳೆದಿದ್ದಾನೆ. ಎಂದಾದರೊಂದು ದಿನ ಜೈಲು ಸೇರಬೇಕೆಂಬ ಸತ್ಯದ ನಡುವೆಯೂ ಬೂಟಾಟಿಕೆಯ ದೊಡ್ಡಸ್ಥಿಕೆ ಸೈಲ್ ಪ್ರದರ್ಶಿಸುತ್ತ ಬಂದಿದ್ದ. ಆತ ಮಾನಸಿಕವಾಗಿ ಅದೆಂದೋ ಸಿಬಿಐ ಪಾಲಾಗಿ ಹೋಗಿದ್ದ. ಈಗ ದೈಹಿಕವಾಗಿ ಕಾರಾಗೃಹ ಸೇರಿದ್ದಾನೆ!!

ಮಾಡಬಾರದ್ದು ಮಾಡಿದರೆ ಆಗಬಾರದ್ದೇ ಆಗುತ್ತದೆ, ಅಲ್ಲವಾ?

● ಶುದ್ಧೋಧನ

ಈ ದೇಶದಲ್ಲಿ ಇನ್ನೂ ಅಸ್ಪೃಶ್ಯತೆ ಉಂಟಲ್ಲ ಮಾರಾಯರೆ?

ವಿಜಯ ಟ್ರಾನ್ಸ್‌ಪೋರ್ಟ್ ಎಂಬ ಪಾರ್ಸೆಲ್ ಲಾರಿ ಮಾಲೀಕ ತನ್ನ ಹೊಸ ಬೋರ್ಡಿನ ಹಳೆ ಲಾರಿಯಲ್ಲಿ ಒಂದೇ ತರದ ಮಾಲು ಸಾಗಿಸುವುದಕ್ಕಿಂತ ತರತರದ ಸಾಮಾನುಗಳನ್ನು ತುಂಬಿ ಚಡ್ಡಿಗಳಿಗೆ ಬೇಕಾದ ಹೆಚ್ಚಿನ ಸಾಮಗ್ರಿಯನ್ನ ಸಾಗಿಸುತ್ತಿದ್ದಾರಂತಲ್ಲಾ. ಅದಕ್ಕಿಂತಲೂ ಮೋದಿ ಎಂಬ ನರಹಂತಕ ಹೂಸಿದ, ಕೆಮ್ಮಿದ ಸುದ್ದಿಯನ್ನೆಲ್ಲಾ ಬಣ್ಣಬಣ್ಣದಲ್ಲಿ ಪ್ರಕಟಿಸುತ್ತ ಪುರೋಹಿತಶಾಹಿಗಳ ಸುದ್ದಿಯನ್ನು ಗುತ್ತಿಗೆ ಹಿಡಿದಿರುವ ವಿಶೇಷ ಭಟ್ಟರಿಗೇ ಪೈಪೋಟಿ ನೀಡಿದ್ದಾರಂತಲ್ಲಾ. ಈ ಹಳೆ ಲಾರಿ ಮಾಲೀಕನಿಗೆ ಯಾಕೆ ಇಂತಹ ದುರ್ಗತಿ ಬಂತು ಎಂದು ಯೋಚಿಸಿದರೆ, ಯಾರೊ ತಲೆ ಕೆಟ್ಟ ಸಾಬಿ ಈತನ ಲಾರಿಗೆ ಇವನ ಸಮೇತ ಬಾಂಬಿಡುತ್ತೇನೆ ಎಂಬ ಬೆದರಿಕೆಯೇ ಕಾರಣವಂತಲ್ಲಾ. ಪತ್ರಿಕೆ ಎಂದಮೇಲೆ ಅದಕ್ಕೇ ಆದ ಒಂದು ಆಕೃತಿ ಇರುತ್ತದೆ, ಭಾಷೆ ಇರುತ್ತದೆ, ಒಂದು ಕಲಾತ್ಮಕವಾದ ಜೋಡಣೆಯೂ ಇರುತ್ತದೆ. ಆದರೆ ಮುಸುಡಿ ಜಜ್ಜಿದಂತಿರುವ ಈ ಲಾರಿಗೆ ಗುಜರಿ ಸಾಮಾನಿನಂತಹ ಸುದ್ದಿಗಳೇ ಲಾಯಕ್ಕಾಗಿ ಕಾಣುತ್ತಿವೆಯಂತಲ್ಲಾ, ಥೂತ್ತೇರಿ!

* * *

ಥೂತ್ತೇರಿ

● ಯಾಹು


ಇನ್ನ ಈ ಹಳೇ ಲಾರಿಗೆ ಪೈಪೋಟಿಯೊಡ್ಡಿರುವ ವಿಶೇಷ ಭಟ್ಟರ ಲೇಖನಿಗೆ ಎಲ್ಲಿಲ್ಲದ ತಿಮಿರು ಬಂದಿದೆಯಂತಲ್ಲಾ. ನಿಜಕ್ಕೂ ಇತಿಹಾಸವನ್ನ ಅವಲೋಕಿಸಿದರೆ ಹಿಟ್ಲರ್ ರೂಪುಗೊಳ್ಳುವಾಗಲೂ ಭಟ್ಟರಂತಹ ಪತ್ರಕರ್ತರಿದ್ದರು. ಅವರಿಗೆ ಹಿಟ್ಲರ್ ಭಾಷಣ ಕೇಳಿದರೆ ಸಾಕು ರೋಮಾಂಚನವಾಗುತ್ತಿತ್ತು. ಎಲ್ಲ ಸುದ್ದಿಗಳನ್ನು ವಿಕೃತಗೊಳಿಸುತ್ತಿದ್ದರು. ಅದರಲ್ಲೂ ಜನಾಂಗೀಯ ದ್ವೇಷವಿದ್ದರಂತೂ ಪತ್ರಕರ್ತರು ಹಿಟ್ಲರನ ಅಕ್ರಮ ಸಂತಾನದಂತಾಗಿ ಬಿಡುತ್ತಿದ್ದರು. ಈಗ ನಾವು ಕರ್ನಾಟಕದಲ್ಲಿ ಇಂತಹ ಒಂದೆರಡು ಅಕ್ರಮ ಸಂತಾನಗಳನ್ನ ನೋಡುವಂತಾಗಿದೆಯಲ್ಲಾ. ಅನಂತಮೂರ್ತಿಯವರನ್ನ ದೇಶವನ್ನೆ ಬಿಟ್ಟು ಹೋಗಿ ಎನ್ನುವ ಮನಸ್ಸುಗಳಿಗೂ, ಹಿಟ್ಲರನ ಹಿಂಬಾಲಕರಾಗಿದ್ದು ಯಹೂದ್ಯರನ್ನು 'ದೇಶ ಬಿಡಿ ಇಲ್ಲ ಸಾಯಿಸುತ್ತೇವೆ' ಎನ್ನುತ್ತಿದ್ದವರಿಗೂ ಅಂತಹ ವ್ಯತ್ಯಾಸವೇ ಕಾಣುತ್ತಿಲ್ಲವಂತಲ್ಲಾ, ಥೂತ್ತೇರಿ !!

* * *

ಹಿಟ್ಲರ್ ಸಂತತಿಯ ಬಗ್ಗೆ ಗಾಢವಾಗಿ ಯೋಚಿಸುತ್ತಿರುವಾಗಲೇ ಮನಸ್ಸಿಗೆ ಸಾಂತ್ವನ ಕೊಡುವಂತಹ ಕೈಂಕರ್ಯವಾಗಿ ನಮ್ಮ ಆಳ್ವಾಸ್ ನುಡಿಸಿರಿಯ ಸುಸಂಸ್ಕೃತರು, ತಮ್ಮ ಶಿಕ್ಷಣ ಸಂಸ್ಥೆಯ ನೃತ್ಯಗುಚ್ಛವನ್ನ ತೆಗೆದುಕೊಂಡು ಎಲ್ಲಾ ಜಿಲ್ಲೆಗಳಿಗೆ ಹೊರಟಿದ್ದಾರಂತಲ್ಲಾ. ಸರಕಾರದಿಂದ ಒಂದು ಪೈಸೆ ನೆರವು ಕೇಳದೆ ಬೃಹತ್ತಾಗಿ ಶಿಕ್ಷಣ ಸಂಸ್ಥೆ ಕಟ್ಟಿ, ಶಿಸ್ತು ಸಮಯಪಾಲನೆ ಮತ್ತು ಸಂಸ್ಕೃತಿಗೆ ಒತ್ತು ಕೊಟ್ಟಿರುವ ಆಳ್ವಾಸ್ ಶಿಕ್ಷಣ ಸಂಸ್ಥೆಯವರು ಎಂಟನೇ ತರಗತಿಗೆ ಸೇರಿಸಲು ಬಡಮಕ್ಕಳಿಂದ ಸಂಗ್ರಹಿಸುವ ಡೊನೇಷನ್ ಕೇವಲ ಐವತ್ತು ಸಾವಿರ. ಈ ತರದಲ್ಲಿ ಹಲವಾರು ಕೋರ್ಸುಗಳಿಗೆ ಇವರು ಪಡೆಯುವ ಜುಜುಬಿ ಹಣದ ಲೆಕ್ಕವೇ ಹಲವಾರು ಕೋಟಿಗಳಷ್ಟಾಗುತ್ತದೆ. ಇವರು ಹಲವು ಜಿಲ್ಲೆಗಳಿಗೆ ಕೊಂಡೊಯ್ದಿರುವ ಸಾಂಸ್ಕೃತಿಕ ವೈಭವದ ನೃತ್ಯ ನೋಡಿದ ಕುಬೇರರು ತಮ್ಮ ಮಕ್ಕಳನ್ನ ಆಳ್ವಾಸರ ಸಂಸ್ಕೃತಿಗೆ ನೂಕಲು ಯೋಚಿಸುತ್ತಾರೆ. 'ಇವರ ಸಂಸ್ಕೃತಿಯ ಸಂಚಾರವೆಂದರೆ ಹೆಚ್ಚು ಡೊನೇಶನ್ ಬೇಟೆಯೇ ಹೊರತು ಇನ್ನೇನು ಅಲ್ಲ' ಎಂದು ಆಳ್ವಾಸರನ್ನ ಕಂಡರಾಗದ ಕಾಣದ ಅಸೂಯಾಪರರು ಆರೋಪಿಸುತ್ತಿದ್ದಾರಲ್ಲಾ. ಈ ಅಸೂಯಾಪರರ ಇನ್ನೊಂದು ಆರೋಪವೆಂದರೆ "ಇವರು ಹೇಳಿ ಕೇಳಿ ಪುರೋಹಿತಶಾಹಿ ಸಂಸ್ಕೃತಿಯ ವಿಸ್ತರಣೆ ಜನ. ಇವರು ಹೋದಲ್ಲಿ ಬಂದಲ್ಲಿ ಚಡ್ಡಿಗಳೇಕೆ ಆಳ್ವಾಸ್ ಬಂದರು, ಆಳ್ವಾಸ್ ಬಂದರು ಎಂದು ಕುಣಿಯುತ್ತಾರೆ" ಎಂದು ದೂರುತ್ತಿದ್ದಾರಲ್ಲಾ, ಥೂತ್ತೇರಿ!!

* * *

ಇದೆಲ್ಲಾ ಇರಲಿ ಕರ್ನಾಟಕ ದೇಶದ ಧಾರ್ಮಿಕ ಸಮಸ್ಯೆಯ ಪಿತಾಮಹರಾದ ಪೇಜಾವರ ಶ್ರೀಗಳನ್ನು ಮಾತನಾಡಿಸಿ ಮನಸ್ಸಿಗೆ ಸಾಂತ್ವನ ತಂದುಕೊಳ್ಳಬೇಕೆಂದು ಫೋನ್ ಮಾಡಿದರೆ ಫೋನ್ ರಿಂಗಾಯ್ತು.



ರಿಂಗ್ ಟೋನ್: "ಪಿಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರೀ... ಪಿಳಂಗೋವಿಯ ...."

"ಹಲೋ ಯಾರು?"

"ನಾನು ಸ್ವಾಮೀಜಿ, ಯಾಹು."

"ಯಂತ ಹೇಳಿ."

"ಸುಮ್ಮನೆ ಫೋನ್ ಮಾಡಿದೆ ಸ್ವಾಮೀಜಿ. ಬಹಳ ದಿನ ಆಗಿತ್ತು ಮಾತನಾಡಿಸಿ."

"ನನಗಿಲ್ಲಿ ಸಮಾ ಕೆಲಸವುಂಟು. ಯಂತ ಹೇಳಿ ಬೇಗ."

"ಕೆಲಸ ಅಂದ್ರೆ ಧಾರ್ಮಿಕ ಕೆಲಸನ ಸ್ವಾಮಿ?"

"ಹೌದು."

"ಈ ದೇಶದಲ್ಲಿ ಅಸ್ಪೃಶ್ಯತೆ ಇನ್ನೂ ಯಾಕಿದೆ ಅಂತ ಕೇಳಿದ್ದಿರಿ."


"ಹೌದು, ಆ ಬಗ್ಗೆ ಗಾಢವಾಗಿ ಯೋಚನೆ ಮಾಡ್ತ ಇದ್ದೇನೆ."

"ಯೋಚನೆ ಮಾಡೋದರಿಂದ ಏನೂ ಪ್ರಯೋಜನ ಇಲ್ಲ ಸ್ವಾಮೀಜಿ. ಏನಾದ್ರು ಕಾರ್ಯಕ್ರಮ ಹಾಕಿಕೋಬೇಕು."

"ಯಂತ ಕಾರ್ಯಕ್ರಮ?"

"ಮುಖ್ಯವಾಗಿ ನಿಮ್ಮ ಎಂಟು ಮಠಗಳ ಪೈಕಿ ಆರು ಮಠಕ್ಕೆ ಅಸ್ಪೃಶ್ಯರನ್ನ ಮಠಾಧಿಪತಿಗಳನ್ನಾಗಿ ಮಾಡಿ. ಅಂತರ್ಜಾತಿ ವಿವಾಹಗಳನ್ನು ಮಾಡಿ. ಮಠದಲ್ಲಿ ಸಮಾನ ಪಂಕ್ತಿ ಭೋಜನ ಏರ್ಪಡಿಸಿ. ಜೊತೆಗೆ ನಿಮ್ಮ ಜೊತೆ ಕುಳಿತು ಊಟ ಮಾಡೋದಕ್ಕೆ ಕಾತೂರಿತಾ ಇರುವವರ ಜೊತೆ ಬೆಂಡೆಕಾಯಿ ಗೊಜ್ಜು ಸಹಿತ, ಕಳ್ಳೆ ಬೇಳೆ ಪಾಯಸದ ಭೂರಿ ಭೋಜನ ಮಾಡಿ. ಅದೆಲ್ಲಕ್ಕಿಂತ ಮುಖ್ಯವಾಗಿ ಅಸ್ಪೃಶ್ಯರನ್ನ ಮುಟ್ಟಿ ಮಾತನಾಡಿಸಿ. ಅಯ್ಯೋ? ಹಲೋ? ಹಲೋ? ನಾನೇಳದು ಕೇಳ್ತಾಯಿದೆಯಾ ಸ್ವಾಮೀಜೀ... ಹಲೋ...."


ಥೂತ್ತೇರಿ!!





ಕರ್ನಾಟಕದ ಪ್ರಮುಖ ಏಳು ಜೈಲುಗಳಿಗೆಂದು ತಲಾ ಒಂದೊಂದು ಸೆಟ್ ವಿದ್ಯುತ್ ಮಗ್ಗಗಳು ಅಂದರೆ ಪವರ್‌ಲೂಮ್ಸ್ ಘಟಕಗಳನ್ನು ಪ್ರತಿಷ್ಠಾಪಿಸುವ ಯೋಜನೆ ರೂಪುಗೊಂಡಿದ್ದು ಮೇಲುನೋಟಕ್ಕಿದು ಜೈಲುಬಂದಿಗಳ ತಾಂತ್ರಿಕ ಕೌಶಲ್ಯ ಮತ್ತು ಬಟ್ಟೆ ಉತ್ಪಾದನೆಯ ದೃಷ್ಟಿಯಿಂದ ಮಹತ್ವಾಕಾಂಕ್ಷೆಯ ನಿರ್ಧಾರವಾದರೂ ಅದರ ಒಳಮರ್ಮವೇ ಬೇರೆ.

ಜೈಲು ಇಲಾಖೆ ಪವರ್‌ಲೂಂ ಖರೀದಿ ಡೀಲ್




ಸೈಕೋ ಶಂಕರ್‌ನಂಥ ಅಪಾಯಕಾರಿ ಕ್ರಿಮಿಗಳನ್ನೇ ಪರಾರಿಯಾದರೂ ಬಿಡದೆ ಹಿಡಿದು ಹಾಕುವ ಪೊಲೀಸ್ ಅಧಿಪತಿಗಳಿಗೆ ಆತ ಪರಾರಿಯಾಗಲು ಕಾರಣರಾದ ಜೈಲು ಹೆಗ್ಗಣಗಳನ್ನು ಮಾತ್ರ ಹಿಡಿಯಲಾಗುತ್ತಿಲ್ಲ!

ಸೈಕೋ ಜೈಶಂಕರ್ ಪರಾರಿಯಾಗಿದ್ದೇ ತಡ, ಗೃಹ ಮಂತ್ರಿ ಜಾರ್ಜ್ ಏಕಾಏಕಿ ಖಡಕ್ಕಾಗದವರಂತೆ 'ಮೂರೇ ದಿನದಲ್ಲಿ ಜೈಲಿನ ಖದೀಮರನ್ನು ಬಲಿ ಹಾಕ್ತೀನಿ, ಎಂಥಾ ಪ್ರಭಾವಿಗಳಾಗಿದ್ದರೂ ಸೈಕೋ ತಪ್ಪಿಸಿಕೊಳ್ಳಲು ಕಾರಣರಾದವರನ್ನು ಬಿಡಲಾರೆ. ಅದಕ್ಕೆಂದೇ ಗೃಹ ಇಲಾಖೆ ಕಾರ್ಯದರ್ಶಿ ಪಟ್ನಾಯಕ್, ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಷ್ಮಾ ಗೋಡ್‌ಬೋಲೆ ಮತ್ತು ಪ್ರಿನ್ಸಿಪಲ್ ಸೆಕ್ರೆಟರಿ ವಿಜಯವರನ್ನೊಳಗೊಂಡ ತನಿಖಾ ಆಯೋಗವನ್ನು ಸರ್ಕಾರ ನೇಮಿಸಿದೆ...' ಎಂದೆಲ್ಲ ಘರ್ಜಿಸಿದ್ದೇ ಬಂತು. ಸೈಕೋ ಶಂಕರ್ ಪರಾರಿಯಾಗಿ ಆನಂತರ ಸಿಕ್ಕೂ ಬಿದ್ದು ಇವತ್ತಿಗೆ 30 ದಿನಗಳೇ ಕಳೆದರೂ ಪರಪ್ಪನ ಅಗ್ರಹಾರದ ಹೆಗ್ಗಣಗಳನ್ನು ಮಾತ್ರ ಹಿಡಿಯಲಾಗುತ್ತಿಲ್ಲ!

ಸದ್ಯ ಪರಪ್ಪನ ಅಗ್ರಹಾರ ಜೈಲಿನ ಅಧಿಪತಿಗಳೆಂದರೆ ಬಂದೀಖಾನೆ ಇಲಾಖೆಯ ಡಿಐಜಿ ರಾಜಾ ಮತ್ತು ಮುಖ್ಯ ಅಧೀಕ್ಷಕ ವೀರೇಂದ್ರ ಸಿಂಹ ಎಂಬಿಬ್ಬರು ಪಳಗಿದ ಅಧಿಕಾರಿಗಳು. ಏನೇ ಯಡವಟ್ಟಾದರೂ ಅದರ ಹೊಣೆ ಹೊರಬೇಕಿದ್ದದ್ದು ಇವರಿಬ್ಬರೆ. ಇವರಲ್ಲದೆ ಮಾದೇವನಾಯ್ಕನೆಂಬ ಪ್ರಳಯಾಂತಕ ಜೈಲರ್ ಮತ್ತು ಇನ್ನೂ ಕೆಲ ಜೈಲು ಭ್ರಷ್ಟರ ಷಡ್ಯಂತ್ರದ ಕಾರಣದಿಂದಾಗಿಯೇ ಸೈಕೋ ಶಂಕರ್ ಪರಾರಿಯಾಗಿದ್ದ. ಎಸ್ಕೇಪಾಗಿ ಮೂರು ದಿನ ಕಳೆಯುವ ಮೊದಲೇ ಸಿಕ್ಕೂ ಬಿದ್ದ. ಹಾಗೆ ಸಿಕ್ಕಿಬಿದ್ದವನನ್ನು ಬಾಯಿ ಬಿಡಿಸಬೇಕಲ್ಲವೇ?

ಬಾಯಿಬಿಟ್ಟ ಸೈಕೋ



ಸಿಕ್ಕಿ ಬಿದ್ದ ಸೈಕೋನನ್ನು ಮೊದಲು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀನಾರಾಯಣ್ ಬಾಯಿಬಿಡಿಸಿದ್ದಾರೆ. ತದನಂತರ ಆತನನ್ನು ಗೃಹ ಕಾರ್ಯದರ್ಶಿ ಪಟ್ನಾಯಕ್ ತನಿಖಾ ಆಯೋಗ ವಿಚಾರಣೆ ನಡೆಸಿದೆ. ತಾನು ಪರಾರಿಯಾಗಲು ಕಾರಣರಾದವರು. ಎಸ್ಕೇಪಾದ ರೀತಿ ಎಲ್ಲವನ್ನೂ ತನಿಖಾಧಿಕಾರಿಗಳ ಮುಂದೆ ಸೈಕೋ ಬಾಯಿ ಬಿಟ್ಟಿದ್ದಾನೆ. ಆ ನಂತರವೇ ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಆದರೆ ಆತ ಬಾಯಿಬಿಟ್ಟ ವಿವರಗಳು, ಪರಾರಿಯಾಗಲು ಕಾರಣವಾದ ಅಂಶಗಳು ಇತ್ಯಾದಿ ಏನೊಂದನ್ನು ಯಾರೊಬ್ಬರೂ ಬಹಿರಂಗಪಡಿಸುತ್ತಿಲ್ಲ, ಖುದ್ದು ಸುಷ್ಮಾ ಗೋಡ್‌ಬೋಲೆಯವರೇ ಈ ಬಗ್ಗೆ ಕೇಳಿದ ಪತ್ರಕರ್ತರಿಂದ ತಲೆಮರೆಸಿಕೊಳ್ಳುತ್ತಿದ್ದಾರೆ.

ಹಾಳಾಗಲಿ ಕನಿಷ್ಠ ಸೈಕೋ ಶಂಕರ್ ನೀಡಿದ ಮಾಹಿತಿ ಆಧರಿಸಿಯಾಗಲಿ ಅಥವಾ ತನಿಖಾ ಆಯೋಗ ನಡೆಸಿದ ವಿಚಾರಣೆಯಿಂದಾಗಲಿ ಏನಾದರೂ ಕ್ರಮ ಜರುಗಿಸಬೇಕಿತ್ತಲ್ಲವೇ?

ಬಂದೀಖಾನೆ ಇಲಾಖೆಯ ಡಿಐಜಿ ರಾಜಾ ಮತ್ತು ಪರಪ್ಪನ ಅಗ್ರಹಾರ ಜೈಲಿನ ಮುಖ್ಯ ಅಧೀಕ್ಷಕ ವೀರೇಂದ್ರ ಸಿಂಹರಿಗೆ ಕಾಟಾಚಾರದ ನೋಟಿಸು ಕೊಟ್ಟಿದ್ದು ಬಿಟ್ಟರೆ ಪ್ರಾರಂಭದಲ್ಲಿ ಯಾರ್ಯಾರನ್ನು ಹೊಣೆ ಮಾಡಿ ಸರ್ಕಾರ ಸಸ್ಪೆಂಡ್ ಮಾಡಿತ್ತೋ ಅದರ ಹೊರತಾಗಿ ಬೇರೇನೂ ಕ್ರಮವಿಲ್ಲ, ಶುರುವಿನಲ್ಲಿ ಸಸ್ಪೆಂಡಾದವರ ಪೈಕಿ ಬಹುತೇಕರು ನಿರ್ದೋಷಿಗಳು ಮತ್ತು ಪ್ರಭಾವಶಾಲಿಗಳಲ್ಲ, ಜೈಲಿನಲ್ಲಿ ಆಕಾಲದಿಂದಲೂ ಗಾಂಜಾ, ಲಿಕ್ಕರ್, ಮೀಟರ್ ಬಡ್ಡಿ ಪೆರೋಲ್ ಡೀಲು, ಇಸ್ಪೀಟು, ಕಾಂಟ್ರಾಕ್ಟು ಮಾಡಿಕೊಂಡಿದ್ದವರ್‍ಯಾರನ್ನೂ ಮುಟ್ಟದೆ ತಮ್ಮ ಪಾಡಿಗೆ ತಾವಿದ್ದ ಅಮಾಯಕ ನಿಸ್ಸಹಾಯಕರನ್ನು ಸರ್ಕಾರ ಬಲಿಹಾಕಿತೇ ಹೊರತು ಇಡೀ ಜೈಲು ವ್ಯವಸ್ಥೆಗೇ ಕ್ಯಾನ್ಸರ್ ಸದೃಶರಾದ ಯಾರೊಬ್ಬರನ್ನೂ ಈತನಕ ಸರ್ಕಾರ ಮುಟ್ಟಲೇ ಇಲ್ಲ.

ಸದ್ಯದ ಪರಿಸ್ಥಿತಿ ನೋಡಿದರೆ ತನಿಖಾ ಆಯೋಗವಾಗಲಿ, ಸರ್ಕಾರವಾಗಲಿ ಇದಕ್ಕಿಂತ ಹೆಚ್ಚಿನದೇನನ್ನೂ ಮಾಡುವ ಲಕ್ಷಣಗಳೂ ಇಲ್ಲ, ಬಂದೀಖಾನೆ ಸಚಿವಾಲಯದ ಅಂಡರ್ ಸೆಕ್ರೆಟರಿ ಜೋಗೋಜಿ ಮತ್ತು ಸೆಕ್ಷನ್ ಆಫೀಸರ್ ಶೋಭಾ ವರ್ತನೆಗಳನ್ನು ನೋಡಿದ ಯಾರಿಗಾದರೂ ಸೈಕೋ ಶಂಕರ್‌ನ ಎಸ್ಕೇಪ್ ಕಾರಣದಿಂದಾಗಿ ಸರ್ಕಾರ ಪಾಠ ಕಲಿತಂತೆ ಅನ್ನಿಸುತ್ತಿಲ್ಲ.

ಖದೀಮ ಡಿಐಜಿ

ಬಂದೀಖಾನೆ ಎಡಿಜಿಪಿ ಗಗನ್‌ದೀಪ್ ಕೇವಲ ನಾಮಕಾವಸ್ಥೆ ಮುಖ್ಯಸ್ಥರಾದರೂ ಇಡೀ ಜೈಲು ವ್ಯವಸ್ಥೆಯ ಸೂತ್ರವಿರುವುದು ನಟೋರಿಯಸ್ ಡಿಐಜಿಯೊಬ್ಬನ ಕೈಯಲ್ಲಿ, ಮಾಂಸದ ಕಾಂಟ್ರಾಕ್ಟು, ರೇಷನ್ ಗೋಲ್‌ಮಾಲ್, ಕೈದಿಗಳ ಪೆರೋಲ್ ದಂಧೆ, ಕಟ್ಟಡ ಕಾಮಗಾರಿ ಟೆಂಡರ್, ಸಾಮಗ್ರಿಗಳ ಖರೀದಿ ಕರ್ಮಕಾಂಡ ಇತ್ಯಾದಿಗಳಿಂದಾಗಿ ತಿಂಗಳೊಂದಕ್ಕೆ ಕನಿಷ್ಠ 10 ಲಕ್ಷ ರೂಪಾಯಿಗಳ ಆದಾಯ ಇರುವ ಖದೀಮ ಡಿಐಜಿಗೆ ಸದ್ಯ ಅಬಕಾರಿ ಮಂತ್ರಿ ಸತೀಶ್ ಜಾರಕಿಹೊಳಿಯ ಶ್ರೀರಕ್ಷೆಯಿದೆ. ಇದಲ್ಲದೆ ಎರಡೂವರೆ ಕೋಟಿ ರೂಪಾಯಿಗಳ ಪವರ್‌ಲೂಮ್ಸ್ ಖರೀದಿ ಹಗರಣವನ್ನು ಮುಚ್ಚಿ ಹಾಕುವ ಪ್ರಯತ್ನವೂ ನಡೆದಿದೆ.

ಕರ್ನಾಟಕದ ಪ್ರಮುಖ ಏಳು ಜೈಲುಗಳಿಗೆಂದು ತಲಾ ಒಂದೊಂದು ಸೆಟ್ ವಿದ್ಯುತ್ ಮಗ್ಗಗಳು ಅಂದರೆ ಪವರ್‌ಲೂಮ್ಸ್ ಘಟಕಗಳನ್ನು ಪ್ರತಿಷ್ಠಾಪಿಸುವ ಯೋಜನೆ ರೂಪುಗೊಂಡಿದ್ದು ಈ ವರ್ಷ ಅಂದರೆ 2013ರಲ್ಲಿ. ಈಗಾಗಲೇ ಕೈಮಗ್ಗ ಮತ್ತು ಜವಳಿ ಇಲಾಖೆ ಕರ್ನಾಟಕದ ಅನೇಕ ಜೈಲುಗಳಲ್ಲಿ 40 ಲಕ್ಷ ರೂಪಾಯಿಗಳ ಬೆಲೆ ಬಾಳುವ ಕೈಮಗ್ಗಗಳನ್ನು ಹಾಕಿದ್ದರೂ ಕೈದಿಗಳ ನೆಯ್ಗೆ ಕೌಶಲ್ಯ ಮತ್ತು ತಾಂತ್ರಿಕ ಅಭಿವೃದ್ಧಿಯ ನೆಪದಲ್ಲಿ ಪವರ್‌ಲೂಮ್ಸ್ ಹಾಕುವ ಯೋಜನೆಯೊಂದನ್ನು ರೂಪಿಸಲಾಯ್ತು, ಮೇಲು ನೋಟಕ್ಕಿದು ಜೈಲುಬಂದಿಗಳ ತಾಂತ್ರಿಕ ಕೌಶಲ್ಯ ಮತ್ತು ಬಟ್ಟೆ ಉತ್ಪಾದನೆಯ ದೃಷ್ಟಿಯಿಂದ ಮಹತ್ವಾಕಾಂಕ್ಷೆಯ ನಿರ್ಧಾರವಾಗಿತ್ತಾದರೂ ಅದರ ಒಳಮರ್ಮವೇ ಬೇರೆಯಿತ್ತು.

ಅದು ಚಾಲ್ತಿಯಲ್ಲೇ ಇಲ್ಲದ ಹಳೇ ಮಾಡೆಲ್ ವಿದ್ಯುತ್ ಮಗ್ಗಗಳನ್ನು ಹಾಕಿ ಅತ್ಯಾಧುನಿಕ ಪವರ್‌ಲೂಮ್‌ಗಳನ್ನು ಹಾಕಿದಂತೆ ಬೋಗಸ್ ಬಿಲ್ ಹಾಕಿ ಕೋಟಿಗಟ್ಟಲೇ ದೋಚುವುದು. ಇದಕ್ಕೊಂದು ಜೈಲುಬಂದಿಗಳ ಕೌಶಲ್ಯ ಆಧುನೀಕರಣ ಸಮಿತಿಯೊಂದನ್ನು ರಚಿಸಿ ಅದಕ್ಕೆ ಮುಖ್ಯಸ್ಥನಾದದ್ದು ಡಿಐಜಿ ರಾಜಾ!

ತಮಾಷೆಯೆಂದರೆ ಜೈಲುಕೈದಿಗಳ ಬಗ್ಗೆಯಾಗಲಿ, ಜೈಲು ಸುಧಾರಣೆಯ ಬಗ್ಗೆಯಾಗಲಿ ಯಾವುದೇ ಪರಿಜ್ಞಾನವಿಲ್ಲದ, ಅನುಭವವೂ ಇಲ್ಲದ, ಕಾಳಜಿ ಕೂಡ ಇರದ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ದ್ವಯರಾದ ಸುರೇಶ ಮತ್ತು ರಮೇಶ ಎಂಬ ಜೋಡಿಯೇ ಡಿಐಜಿ ರಾಜಾರ ಮಾಡರ್ನೈಜೇಶನ್ ಕಮಿಟಿಯ ಸದಸ್ಯರಾದದ್ದು.


ಹಳೇ ಮಾಡಲ್ ಹೊಸ ಬಿಲ್ಲು!

ಈ ಬಗ್ಗೆ ತಲೆಬುಡ ಗೊತ್ತಿಲ್ಲದ ಎಡಿಜಿಪಿ ಗಗನ್‌ದೀಪ್ ಹೈಟೆಕ್ ಪವರ್‌ಲೂಮ್ಸ್ ಹಾಕುವ ಟೆಂಡರನ್ನು ಅನುಮೋದಿಸಿದ್ದೇ ಬಂತು. ರಾಜ್ಯದ ಪ್ರಮುಖ ಏಳು ಜೈಲುಗಳಿಗೆ ಪವರ್‌ಲೂಮ್ಸ್ ಹಾಕುವ ಟೆಂಡರ್ ಪ್ರಕ್ರಿಯೆ ಕೂಡ ಅನುಮಾನಾಸ್ಪದವಾಗಿಯೇ ನಡೆಯಿತು. ಅಂದರೆ ತಮಗೆ ಬೇಕುಬೇಕಾದವರನ್ನಷ್ಟೇ ಟೆಂಡರ್ ಹಾಕುವಂತೆ ಮಾಡಿಕೊಂಡು ಮೊದಲೇ ನಿರ್ಧಾರವಾದಂತೆ ಕಮ್ಮಿ ರೇಟಿನ ಟೆಂಡರ್ ಸಲ್ಲಿಸಿದವರಿಂದ ಪವರ್‌ಲೂಮ್ಸ್ ಖರೀದಿಸಲಾಯಿತಾದರೂ ಬಂದ ವಿದ್ಯುತ್ ಮಗ್ಗಗಳು ಎಂಥಾದ್ದು?


ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲೇ ಇಲ್ಲದ, ಯಾವುದೋ ಕಾಲಕ್ಕೆ ಪ್ರಸ್ತುತತೆಯನ್ನೇ ಕಳಕೊಂಡ, ಗುಜರಿಗೆ ಹಾಕಲಷ್ಟೇ ಯೋಗ್ಯವಾದ ಹಳೇ ಮಾಡಲ್ಲಿನ ಅಸ್ತಿತ್ವದಲ್ಲೇ ಇಲ್ಲದ ವಿದ್ಯುತ್ ಮಗ್ಗಗಳನ್ನು ಕದ್ದೂಮುಚ್ಚಿ ಆಯಾ ಜೈಲುಗಳಿ




ಗಗನ್ ದೀಪ್



ವಿಶ್ವನಾಥಯ್ಯ



ಸೆಲ್ವಂ



ರಾಜ

ಪನ್ನೀರ್ ಸೆಲ್ವಂ ಪ್ರಾಮಾಣಿಕತೆ ಮೆರೆಯುತ್ತಾರಾ?


ಪವರ್‌ಲೂಮ್ಸ್ ಕರ್ಮಕಾಂಡ ಬಯಲಾಗುತ್ತಿದ್ದಂತೆ ಖದೀಮ ಡಿಐಜಿಯ ಹೊಸ ವರಸೆ ಶುರುವಾಗಿದೆ. ಆಟೋಮೆಟಿಕ್ ಲೂಮ್ಸ್ ಅಳವಡಿಸಿದರೆ ಹೆಚ್ಚು ಮ್ಯಾನ್‌ಪವರ್ ಬೇಕಾಗುವುದಿಲ್ಲವಾದ್ದರಿಂದ ಅಧಿಕ ಬಂದಿಗಳ ಶ್ರಮದ ಬಳಕೆಯಾಗಲಿ ಎಂಬ ಒಂದೇ ಕಾರಣಕ್ಕೆ ಆರ್ಡಿನರಿ ಲೂಮ್ಸ್ ಹಾಕಲಾಯ್ತು ಎಂಬುದು ಈತನ ವರಸೆ!

ಹಾಗಾಗಿದ್ದೇ ಆದಲ್ಲಿ ಹಳೇ ಮಾಡಲ್‌ನ ರೇಟನ್ನೇ ಹಾಕಬೇಕಿತ್ತಲ್ಲವೇ? ಅಥವಾ ಎರಡೂವರೆ ಕೋಟಿಗೆ ಈಗಿನ ಮೂರು ಪಟ್ಟು ಮಗ್ಗಗಳು ಬರಬೇಕಿತ್ತಲ್ಲವೇ? ಲಟಾರಿ ಸೈಕಲ್ ಖರೀದಿಸಿ ಅದನ್ನು ರಾಕೆಟ್ ಎಂದು ನಂಬಿಸ ಹೊರಟರೆ ಅದನ್ನು ಮೂರ್ಖರಷ್ಟೇ ನಂಬಬಹುದು. ಜವಳಿ ಇಲಾಖೆಯ ಮುಖ್ಯಸ್ಥ ಪನ್ನೀರ್ ಸೆಲ್ವಂ ಯಾವುದೇ ಮರ್ಜಿ ಒತ್ತಡಕ್ಕೆ ಮಣಿಯದೆ ಪ್ರಾಮಾಣಿಕ ವರದಿ ನೀಡುವ ಮೂಲಕ ತನ್ನ ನಿಷ್ಠುರತೆ ಮೆರೆಯುತ್ತಾರಾ ಕಾದು ನೋಡಬೇಕಷ್ಟೆ.

ಲಾಯಿತು. ನಾಸ್ತವದಲ್ಲಿ ಇವುಗಳ ಮಾರುಕಟ್ಟೆ ಮೌಲ್ಯವೇ 70 ರಿಂದ 80 ಲಕ್ಷವಾದರೂ ಎರಡೂವರೆ ಕೋಟಿ ಎಂಬಂತೆ ಕಳ್ಳಬಿಲ್ಲು ಹಾಕಲಾಯ್ತು. ಇದೊಂದೇ ದುರ್ಕಾಂಡದಿಂದಾಗಿ ಹೆಚ್ಚೂ ಕಮ್ಮಿ ಒಂದೂ ಮುಕ್ಕಾಲು ಕೋಟಿ ರೂಪಾಯಿಗಳನ್ನು ದೋಚಲಾಯ್ತು.

ಹಾಗೆ ನೋಡಿದರೆ ವಿದ್ಯುತ್ ಮಗ್ಗಗಳ ಕುರಿತಂತೆ ವರದಿ ನೀಡಬೇಕಿದ್ದದ್ದು ಜವಳಿ ಖಾತೆ. ಜವಳಿ ಖಾತೆಯಿಂದಲೇ ವಿದ್ಯುತ್ ಮಗ್ಗಗಳನ್ನು ತರಿಸಿಕೊಳ್ಳಬೇಕಿತ್ತು, ಎಷ್ಟು ಎಂಥಾ ಮಗ್ಗಗಳನ್ನು ಹಾಕಬೇಕೆಂಬ ಬಗ್ಗೆಯಾದರೂ ಜವಳಿ ಖಾತೆಯ ಸಲಹೆ ಪಡೆಯಬೇಕಿತ್ತು. ಇದ್ಯಾವುದನ್ನು ಮಾಡದೆ ಜೈಲು ಡಿಐಜಿಯೇ ಆಧುನೀಕರಣದ ಪಂಡಿತನೆಂಬಂತೆ ಪವರ್‌ಲೂಮ್ಸ್ ಟೆಂಡರ್ ಕರೆಯುತ್ತಾನೆ. ಅದನ್ನು ಆತನದ್ದೇ ನೇತೃತ್ವದ ಖರೀದಿ ಸಮಿತಿ ಅನುಮೋದಿಸುತ್ತದೆ. ಖರೀದಿಸಿದ ಮಗ್ಗಗಳ ಗುಣಮಟ್ಟವನ್ನೂ ಇದೇ ಗ್ಯಾಂಗ್ ನಿರ್ಧರಿಸುತ್ತದೆ.

ಹೀಗಾಗಿ ಜೈಲಿಗೆ ಬಂದ ಹಳೇ ಮಾಡೆಲ್ ವಿದ್ಯುತ್ ಮಗ್ಗಗಳ ಗುಣಮಟ್ಟದ ಸಂಗತಿಯೇ ನಿಗೂಢವಾಗಿತ್ತು. ಯಾವತ್ತು ಸೈಕೋ ಶಂಕರ್ ಪರಾರಿಯಾದನೋ ಖದೀಮ ಡಿಐಜಿ ಮತ್ತು ಆತನ ದುಷ್ಟಕೂಟದ ಒಂದೊಂದೇ ಪ್ರಕರಣಗಳು ಬಯಲಾಗತೊಡಗಿದೆವು. ಹಳೇ ಮಾಡಲ್ ಪವರ್‌ಲೂಮ್ಸ್ ತರಿಸಿ ಅದನ್ನು Semi Automatic ಎಂಬಂತೆ ಪ್ರಮಾಣೀಕರಿಸಿ ಒಂದೂ ಮುಕ್ಕಾಲು ಕೋಟಿ ದೋಚಿದ ಬಗ್ಗೆ ಇಲ್ಲಿಗೆ ತಿಂಗಳ ಹಿಂದೆಯೇ ಎಡಿಜಿಪಿ ಗಗನ್‌ದೀಪ್‌ಗೆ ದೂರು ಬಂದಿದೆ. ಇದೇ ದೂರಿನ ಆಧಾರದ ಮೇಲೆ ಗಗನ್‌ದೀಪ್ ಪವರ್‌ಲೂಮ್ಸ್‌ಗಳ ಗುಣಮಟ್ಟದ ಕುರಿತಂತೆ ತನಿಖೆ ನಡೆಸುವಂತೆ ಕೈಮಗ್ಗ ಮತ್ತು ಜವಳಿ ಖಾತೆಯ ಡೆಪ್ಯೂಟಿ ಡೈರೆಕ್ಟರ್ ಪನ್ನೀರ್ ಸೆಲ್ವಂಗೆ ಪತ್ರ ಬರೆದಿದ್ದಾರೆ.



ಹಕೀಕತ್ತೇನೆಂದರೆ ಜವಳಿ ಖಾತೆಯ ಡೆಪ್ಯೂಟಿ ಡೈರೆಕ್ಟರ್ ಪನ್ನೀರ್ ಸೆಲ್ವಂ ಈಗಾಗಲೇ ಚಿಕ್ಕಬಳ್ಳಾಪುರದಲ್ಲಿ ಹಗರಣದಲ್ಲಿ ಸಿಲುಕಿ ಕೈಕೆಸರು ಮಾಡಿಕೊಂಡಿರುವಾತ. ಮೊದಲೇ ಭೀತಿಗೆ ಸಿಲುಕಿಬಿದ್ದ ಇಂಥ ಹುಂಬ ಅಧಿಕಾರಿ ಹೇಗೆ ತಾನೇ ನಿಷ್ಠುರವಾದ ವರದಿ ನೀಡಲು ಸಾಧ್ಯ?


ಜೈಲು ಇಲಾಖೆಯ ಮೂಲಗಳೇ ಹೇಳುವಂತೆ ಮಷಿನರಿ ಪವರ್‌ಲೂಮ್ಸ್‌ಗೆ ಬದಲಾಗಿ ಸೆಮಿ ಆಟೋಮೆಟಿಕ್ ಲೂಮ್ಸ್ ಖರೀದಿಸಿದಂತೆ ವರದಿ ನೀಡುವಂತೆ ಇದೇ ದುಷ್ಟಕೂಟ ಈಗ ಮಂತ್ರಿ ಜಾರಕಿಹೊಳಿ ಮೂಲಕ ಪನ್ನೀರ್ ಸೆಲ್ವಂಗೆ ಧಮಕಿ ಹಾಕಿಸುತ್ತಿದೆ. ಒಂದೊಮ್ಮೆ ಪನ್ನೀರ್ ಸೆಲ್ವಂ ಏನೇ ವರದಿ ಕೊಟ್ಟರೂ ಅದರ ಸತ್ಯಾಸತ್ಯತೆ ಪರಿಶೀಲಿಸಬೇಕಾದದ್ದು ಎಡಿಜಿಪಿ ಗಗನ್‌ದೀಪ್ ತಾನೆ?


ದುರಂತವೆಂದರೆ ಯಾವ ಖದೀಮ ಡಿಐಜಿಯ ದುಷ್ಟಕೂಟ ಜೈಲಿನಲ್ಲಿ ಇಸ್ಪೀಟ್ ದಂಧೆಗೆ ಕಾರಣವಾಗಿತ್ತೋ, ಜೈಲಿನಲ್ಲಿ ಗಾಂಜಾ, ಲಿಕ್ಕರ್, ಮೀಟರ್ ಬಡ್ಡಿ, ಸ್ಟೋರ್ ದಂಧೆಗಳ ಮೂಲಕ ಜೈಲನ್ನು ಕುಲಗೆಡಿಸಿತ್ತೋ ಅದೇ ಗ್ಯಾಂಗ್ ಈಗ ಪವರ್‌ಲೂಮ್ಸ್ ಹಗರಣಕ್ಕೂ ಕಾರಣವಾಗಿದೆ ಮತ್ತು ಇದೇ ದುಷ್ಟಕೂಟದ ನೆರವಿನಿಂದಲೇ ಸೈಕೋ ಜೈಶಂಕರ್ ಪರಾರಿಯಾಗಿದ್ದಾನೆ. ಈಗ ಸೈಕೋ ಶಂಕರ್‌ನೇ ಸತ್ಯ ಬಾಯಿಬಿಟ್ಟರೂ ಕೂಡ ಜೈಲು ಭ್ರಷ್ಟಾಚಾರದ ಕುರಿತಂತೆ ಸರ್ಕಾರ ನಿದ್ದೆ ಹಾರಿಸುತ್ತಿದೆಯೆಂದರೆ ಈ ಪವರ್ ಲೂಮ್ಸ್ ಖರೀದಿ ಹಗರಣದ ಕಳ್ಳ ಡಿಐಜಿಗೆ ಶಿಕ್ಷೆ ಆಗುವುದುಂಟೆ?

ಜೈಲು ವ್ಯವಸ್ಥೆಯೇ ಕಳ್ಳರ ಕೈವಶವಾಗಿರುವಾಗ ಯಾವ ಖೈದಿ ತಾನೇ ಸುಧಾರಣೆಯಾಗಲು ಸಾಧ್ಯ? ಯಾವ ಅಪರಾಧಿ ತಾನೇ ಮನುಷ್ಯನಾಗಲು ಸಾಧ್ಯ?

● ರಾ.ಸೋಮನಾಥ್

ಅಂಬಿ ಆರ್ಭಟಕ್ಕೆ ಕೃಷ್ಣ ಥರ...ಥರ...





ಮಂಡ್ಯ ಜಿಲ್ಲೆ ಮೇಲಿನ ಸಂಪೂರ್ಣ ಹಿಡಿತ ಅಂಬರೀಶ್ ಕೈಯಲ್ಲಿರಬೇಕೆಂದು ಹಪಹಪಿಸುತ್ತಿರುವ ಅವರ ಬೆಂಬಲಿಗರು ಎಸ್.ಎಂ.ಕೃಷ್ಣರ ಬೆಂಬಲಿಗರನ್ನು ತಡುವಿಕೊಂಡು ಬಡಿಯುತ್ತಿದ್ದರೆ ಕೃಷ್ಣ ಬೆಂಬಲಿಗರು ಅಂಬೋ ಎಂದು ಬಾಯಿಬಡಿದುಕೊಳ್ಳುತ್ತಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದ ಹಾಗೂ ಲೋಕಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವಿನ ಆಶೀರ್ವಾದ ಮಾಡಿರುವ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಸೆ. 30ರಂದು ಮಂಡ್ಯಕ್ಕೆ ಬರಲಿದ್ದಾರೆ. ಈ ಹಿನ್ನೆಲೆಯಲ್ಲಿ ಸೆ. 20ರಂದು ಮಂಡ್ಯದ ಹರಿಪ್ರಿಯ ಹೋಟೆಲ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಪೂರ್ವಭಾವಿ ಸಭೆ ಕರೆದಿದ್ದರು. ಸಭೆಯಲ್ಲಿ ಸಂಸದೆ ರಮ್ಯಾ, ರಾಜ್ಯ ಕಾಂಗ್ರೆಸ್ ನಾಯಕರಾದ ಬಿ.ಎಲ್.ಶಂಕರ್, ನಾರಾಯಣಪ್ಪ, ವೇಣುಗೋಪಾಲ್ ಮತ್ತಿತರರ ಸಮ್ಮುಖದಲ್ಲಿಯೇ ಅಂಬಿ ಹಾಗೂ ಎಸ್.ಎಂ.ಕೃಷ್ಣ ಬೆಂಬಲಿಗರ ಮಧ್ಯೆ ಮಾರಾಮಾರಿ ನಡೆಯಿತು. ಸಭೆಯ ಆರಂಭಕ್ಕೂ ಮುನ್ನವೇ ಅಂಬಿ ಬೆಂಬಲಿಗರಾದ ಅಮರಾವತಿ ಚಂದ್ರಶೇಖರ್, ಬೇಲೂರು ಸೋಮಶೇಖರ್, ಹನಕೆರೆ ಶಶಿ, ರಘು ಮೊದಲಾದವರು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಎದುರಲ್ಲೇ ಕೃಷ್ಣ ಬಣದ ವಕೀಲ ಸತ್ಯಾನಂದನ ಮೇಲೆ ಹಲ್ಲೆಗೆ ಮುಂದಾದರು. ಲೋಕಲ್ ಸಂಸ್ಕೃತಗಳನ್ನೆಲ್ಲ ಬಳಸಿ ಸತ್ಯಾನಂದನನ್ನು ನಿಂದಿಸಿದ್ದಲ್ಲದೆ ಸಭೆಯಿಂದಲೇ ಹೊರಕ್ಕೆಳೆದು ಬಿಸಾಕಿದರು. ಅವತ್ತು ಸತ್ಯಾನಂದ ಅಲ್ಲಿಂದ ತಪ್ಪಿಸಿಕೊಳ್ಳದಿದ್ದರೆ ಆಸ್ಪತ್ರೆ ಸೇರುವುದು ಗ್ಯಾರಂಟಿಯಿತ್ತು.



ಸತ್ಯಾನಂದನ ಮೇಲೆ ಮುಗಿಬಿದ್ದ ಅಂಬಿ ಶಿಷ್ಯ ಅಮರಾವತಿ ಚಂದ್ರಶೇಖರ್

ಇನ್ನೇನು ಪತ್ರಿಕಾಗೋಷ್ಠಿ ಮುಗಿಯುತ್ತದೆನ್ನುವ ಸಮಯಕ್ಕೆ ಬಂದ ಅಂಬಿಯೂ 'ಪಕ್ಷದ ಪರವಾಗಿ ಕೆಲಸ ಮಾಡಿದವರು ಹೊರಗಿದ್ದಾರೆ, ಪಕ್ಷ ವಿರೋಧಿಗಳು ಒಳಗಿದ್ದಾರೆ. ಅವರನ್ನೇ ಕರೆಸಿ ಸಭೆ ಮಾಡಿಕೊಳ್ಳಿ' ಅಂತ ಪರಮೇಶ್ವರ್ ಎದುರಿಗೇ ಗುಟುರು ಹಾಕಿದರು. ಅಂಬಿಯನ್ನು ಸಮಾಧಾನಿಸಲು ಸತ್ಯಾನಂದನನ್ನು ಜಿಲ್ಲಾ ವಕ್ತಾರ ಸ್ಥಾನದಿಂದಲೇ ಕಿತ್ತೆಸೆಯಲಾಗಿದೆ. ಒಟ್ಟಿನಲ್ಲಿ ಮಂಡ್ಯದಲ್ಲಿ ಅಂಬರೀಶ್ 'ಒಂಟಿಸಲಗ'ನಂತೆ ಹೂಂಕರಿಸುತ್ತಿದ್ದು ಅವರ ದಾರಿಗೆ ಅಡ್ಡ ಬಂದ ಯಾರಿಗೇ ಆದರೂ ಒದೆ ಬೀಳೋದು ಗ್ಯಾರಂಟಿ ಎಂಬಂತಾಗಿದೆ.

ಡಮ್ಮಿ ಅಧ್ಯಕ್ಷ ಆತ್ಮಾನಂದ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಮಾಜಿ ಸಚಿವ ಎಂ.ಎಸ್.ಆತ್ಮಾನಂದ ಇದ್ದರೂ ಅವರೀಗ ಹಲ್ಲು ಕಿತ್ತ ಹಾವು. ಕಳೆದ ಚುನಾವಣೆಯಲ್ಲಿ ಟಿಕೆಟ್ ವಿಷಯವಾಗಿ ಅಂಬಿ, ಆತ್ಮಾನಂದರ ನಡುವೆ ರಾದ್ಧಾಂತ ನಡೆದು ಇಬ್ಬರನ್ನೂ ದೂರಕ್ಕೆ ಸರಿಸಿದೆ. ಅಂಬಿ ಬೆಂಬಲಿಗರಂತೂ ಆತ್ಮಾನಂದನನ್ನು ಜಿಲ್ಲಾಧ್ಯಕ್ಷ ಸ್ಥಾನದಿಂದಲೇ ಕಿತ್ತುಹಾಕುವಂತೆ ವರಿಷ್ಠರ ಮುಂದೆ ಕೂಗಾಡಿದ್ದರು. ಆದರೆ ಎಸ್.ಎಂ.ಕೃಷ್ಣ ಪ್ರವೇಶದಿಂದ ಆತ್ಮಾನಂದ ಅಧ್ಯಕ್ಷ ಸ್ಥಾನದಲ್ಲೇ ಮುಂದುವರಿಯುವಂತಾಗಿದೆ.

ಇತ್ತೀಚೆಗೆ ತನ್ನ ಬೆಂಬಲಿಗರಾದ ಅಮರಾವತಿ ಚಂದ್ರಶೇಖರ್, ಸಾತನೂರು ನಾಗ, ರವಿಶಂಕರೇಗೌಡ, ಕಲ್ಲಹಳ್ಳಿ ಚಂದ್ರ ಮತ್ತಿತರ ತಾಳಕ್ಕೆ ಕುಣಿದ ಅಂಬರೀಶ್, ಪಕ್ಷೇತರ ಸದಸ್ಯ ಬಿ.ಸಿದ್ದರಾಜುನನ್ನು ನಗರಸಭಾಧ್ಯಕ್ಷನನ್ನಾಗಿ ಮಾಡಿದ್ದಾರೆ. ಸಿದ್ದರಾಜು ತಂದಿಟ್ಟ ಹಡಬೆ ದುಡ್ಡೇ ಈ ಚಮತ್ಕಾರ ಮಾಡಿಸಿದೆ. ಅಧ್ಯಕ್ಷ-ಉಪಾಧ್ಯಕ್ಷ ಆಯ್ಕೆ ಸಂಬಂಧ ಸದಸ್ಯರ ಅಭಿಪ್ರಾಯ ಸಂಗ್ರಹಿಸಲು ಬಂದ ನಾರಾಯಣಪ್ಪನನ್ನು ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಬದಲು ತನ್ನ ಶಿಷ್ಯ ಅಮರಾವತಿ ಚಂದ್ರಶೇಖರ್ ಹೋಟೆಲ್‌ಗೆ ಕರೆಸಿಕೊಂಡ ಅಂಬಿ ಎಲ್ಲಾ ಸದಸ್ಯರ ಅಭಿಪ್ರಾಯ ಸಿದ್ದರಾಜು ಪರ ಇದೆ ಎಂದು ಹೇಳಿಸಿ ಅಲ್ಲಿಂದಲೇ ಸಾಗಹಾಕಿದ್ದರು.

ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ಪಕ್ಷನಿಷ್ಠರಾದ ಹೊಸಹಳ್ಳಿ ಬೋರೇಗೌಡ, ಆತ್ಮಾನಂದ ಬಣದ ಬಿ.ಲೋಕೇಶ ಇದ್ದರೂ ಪಕ್ಷೇತರ ಸದಸ್ಯ ಸಿದ್ದರಾಜುನನ್ನು ಕಾಂಗ್ರೆಸ್ಸಿಗ ಎಂದು ಸಮರ್ಥಿಸಿದ ಅಂಬಿ ಆತನನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಕೇಳಿದರೆ 'ಬಿ' ಫಾರಂ ಗೊಂದಲದಿಂದ ಸಿದ್ದರಾಜು ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಬೇಕಾಯಿತು. ಅವನೂ ಕಾಂಗ್ರೆಸ್‌ನವನೇ ಎಂದು ಸಮರ್ಥಿಸಿಕೊಳ್ಳುವ ಅಂಬಿ ಇದೇ ಮಾತನ್ನು ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ ಪರ ಹೇಳುವುದಿಲ್ಲ. ಅಂಬಿ ಶ್ರೀರಂಗಪಟ್ಟಣದಲ್ಲಿ ಸ್ಪರ್ಧಿಸಿದ್ದಾಗ ರವೀಂದ್ರ ಶ್ರೀಕಂಠಯ್ಯ ತನ್ನ ಪರ ಕೆಲಸ ಮಾಡಲಿಲ್ಲ ಎಂದ ಅಂಬಿ ಆತನನ್ನು ಪಕ್ಷದಿಂದ ಉಚ್ಚಾಟಿಸುವಂತೆ ವರಿಷ್ಠರನ್ನು ಕಾಡಿದ್ದರು. ಆದರೆ ನಗರಸಭಾ ಚುನಾವಣೆಯಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿಗೆ ಸೆಡ್ಡುಹೊಡೆದ ಸಿದ್ದರಾಜುನನ್ನು ಉಚ್ಚಾಟಿಸದೆ ಆತನನ್ನು ಅಧ್ಯಕ್ಷರನ್ನಾಗಿ ಮಾಡಿದ ಅಂಬಿಯ ಇಬ್ಬಗೆನೀತಿಯ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರೇ ಬೇಸರಗೊಂಡಿದ್ದಾರೆ.

ಅಂಬಿ ಬಣದಲ್ಲಿ ಗುರುತಿಸಿಕೊಂಡರೆ ಹಣ-ಅಧಿಕಾರ ಖಚಿತ, ಎಸ್.ಎಂ.ಕೃಷ್ಣ ಬಣದಲ್ಲಿದ್ದರೆ ಒದೆ ಉಚಿತ ಎಂಬ ಹೊಸ ನಾಣ್ನುಡಿ ಮಂಡ್ಯದಲ್ಲಿ ಹರಿದಾಡುತ್ತಿದೆ. ಹಾಗಾಗಿ ಬಣಾಂತರದ ಕಸರತ್ತು ಜೋರಾಗಿ ನಡೆಯುತ್ತಿದೆ. ಅಂಬರೀಶ್ ಅವಕೃಪೆಗೆ ತುತ್ತಾಗಿರುವ ಸುರೇಶ್‌ಗೌಡ, ಕೆ.ಬಿ.ಚಂದ್ರಶೇಖರ್, ಆತ್ಮಾನಂದ ಇವರೆಲ್ಲಾ 'ಗೂರ್ಲು ಗಂಡ ಇದ್ದಂಗೆ'. ಇತ್ತ ಭದ್ರವಾಗಿ ಅಂಬಿ ವಿರುದ್ಧ ಕೆಮ್ಮುವುದೂ ಇಲ್ಲ, ಒಳಗೊಳಗೆ ಮುಲುಕುವುದೂ ತಪ್ಪುವುದಿಲ್ಲ. ಅಂತೂ ಅಂಬಿ ಮತ್ತವರ ಬೆಂಬಲಿಗರ ಆರ್ಭಟದ ಮುಂದೆ ಕೃಷ್ಣ ಪಾಳಯ ದಣ್ಣಾಗಿರುವುದು ಮಾತ್ರ ಸತ್ಯ.

ಅಂಬಿ ಶಿಷ್ಯನೇ ಸಚಿವ?

ಗೆದ್ದರೆ ವಾರಕ್ಕೆ 2 ದಿನ ಕ್ಷೇತ್ರದ ಜನರ ಸಮಸ್ಯೆ ಆಲಿಸುತ್ತೇನೆ ಎಂದಿದ್ದ ಅಂಬಿ ಕೈಗೆ ಸಿಗುವುದೇ ಕಷ್ಟ ಎಂಬಂತಾಗಿದೆ. ಅಂಬಿ ಬದಲು ಅವರ ಬಲಗೈಭಂಟ ಅಮರಾವತಿ ಚಂದ್ರಶೇಖರ್ 'ಡಿಫ್ಯಾಕ್ಟೋ ಮಿನಿಸ್ಟರ್' ಆಗಿ ಜಿಲ್ಲೆಯಲ್ಲಿ ಚಲಾವಣೆಯಲ್ಲಿದ್ದಾನೆ. ಕ್ಷೇತ್ರದ ಜನ, ಅಧಿಕಾರಿಗಳು ದಿನಬೆಳಗಾದರೆ ಅಮರಾವತಿ ಚಂದ್ರಶೇಖರ್‌ನ ಮನೆ ಮುಂದೆ ನೆರೆಯುತ್ತಿದ್ದಾರೆ. ಆತನೂ ಅಂಬಿ ಪರವಾಗಿ ಉದ್ಘಾಟನೆ, ಗುದ್ದಲಿಪೂಜೆ ಕೆಲಸ ಕಾರ್ಯಗಳಲ್ಲಿ ಭಾಗಿಯಾಗುತ್ತಾ ಮಂಡ್ಯದ ಎಂಎಲ್‌ಎ ಯಾರು ಎಂಬ ಗೊಂದಲ ಮೂಡಿಸುತ್ತಿದ್ದಾನೆ.

ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಅಂಬಿ ಶಿಷ್ಯ ಸಚ್ಚಿದಾನಂದ ಮತ್ತವನ ಮಾವ ಲಿಂಗರಾಜು ಮಾತುಗಳೇ ಅಂತಿಮ. ಕಳೆದ ಚುನಾವಣೆಯಲ್ಲಿ 3ನೇ ಸ್ಥಾನಕ್ಕೇ ಸುಸ್ತು ಹೊಡೆದು ಮಾನ ಕಳೆದುಕೊಂಡಿದ್ದ ಮಾವ-ಅಳಿಯರ ಜೋಡಿಗೆ ಅಂಬಿ ಜಿಲ್ಲಾ ಉಸ್ತುವಾರಿ ಸಚಿವರಾದ ಘಳಿಗೆಯಿಂದಲೇ ಕೊಂಬು ಮೂಡಿದ್ದವು. ಅತ್ತ ಪಾಂಡವಪುರದಲ್ಲಿ ಅಂಬಿ ಶಿಷ್ಯ ಎಲ್.ಡಿ.ರವಿ, ನಾಗಮಂಗಲದಲ್ಲಿ ಟೆಂಪರರಿ ಅಂಬಿ ಭಂಟ ಕಮ್ ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡರೇ ಡಾಮಿನೆಂಟ್ ಫಿಗರ್‌ಗಳು.

ಇದ್ದುದರಲ್ಲಿ ಮಳವಳ್ಳಿಯಲ್ಲಿ ಮಾತ್ರ ಅಂಬಿ ಹವಾ ಅಷ್ಟಾಗಿ ಹರಿದಾಡುತ್ತಿಲ್ಲ. ಅಲ್ಲಿ ಶಾಸಕ ನರೇಂದ್ರಸ್ವಾಮಿಯದ್ದೇ ಪಾರುಪತ್ಯ. ಸಿಎಂ ಸಿದ್ದರಾಮಯ್ಯ ಹಾಗೂ ಎಸ್.ಎಂ.ಕೃಷ್ಣರ ಅಚ್ಚುಮೆಚ್ಚಿನ ಶಿಷ್ಯನಾಗಿರುವ ನರೇಂದ್ರಸ್ವಾಮಿ ಮತ್ತು ಅಂಬರೀಶ್ ನಡುವೆ ಅಷ್ಟಕಷ್ಟೆ. ಸಿಎಂ ಸಿದ್ದುನ ಅಭಯವೇ ಲಭಿಸಿರುವುದರಿಂದ ಅಂಬಿಗೆ ಡೋಂಟ್‌ಕೇರ್ ಎಂಬಂತೆ ನರೇಂದ್ರಸ್ವಾಮಿ ನಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಲೋಕಸಭಾ ಉಪಚುನಾವಣೆಯಲ್ಲಿ ರಮ್ಯಾರಿಗೆ ಬರೋಬ್ಬರಿ 23 ಸಾವಿರಕ್ಕೂ ಅಧಿಕ ಮತಗಳ ಲೀಡ್ ಕೊಡಿಸಿದ ನರೇಂದ್ರಸ್ವಾಮಿ ಕಾಂಗ್ರೆಸ್ ಹೈಕಮಾಂಡ್‌ನ ಗಮನವನ್ನೂ ಸೆಳೆದಿದ್ದಾರೆ. ಹಾಗಾಗಿ ಅಲ್ಲಿ ಅಂಬಿ ಪಟ್ಟಾಂತರ ಸಾಧ್ಯವಾಗಿಲ್ಲ.

ವಿಧಾನಸಭಾ ಚುನಾವಣೆಯಲ್ಲಿ 43 ಸಾವಿರ ಮತಗಳ ಲೀಡ್‌ನಲ್ಲಿ ಗೆದ್ದಿದ್ದ ಅಂಬರೀಶ್‌ರ ಮಂಡ್ಯ ಕ್ಷೇತ್ರದಿಂದ ರಮ್ಯಾಗೆ ದಕ್ಕಿದ್ದು ಕೇವಲ 14 ಸಾವಿರ ಮತಗಳ ಲೀಡ್ ಮಾತ್ರ. ಅಲ್ಲಿಗೆ 3 ತಿಂಗಳಲ್ಲಿಯೇ ಅಂಬಿಯ ಜನಪ್ರಿಯತೆ ಧಸಕ್ಕೆಂದು ಕುಸಿದಿದೆ. ಈ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಂಬಿ ತನ್ನ ಭಟ್ಟಂಗಿ ಶಿಷ್ಯರ ಎಡಬಿಟ್ಟಿ ಮಾತುಗಳಿಗೇ ಮುದ್ರೆ ಒತ್ತುತ್ತಿದ್ದಾರೆ. ಈ 'ಚಕ್ರವ್ಯೂಹ'ದಿಂದ ಹೊರಬಂದರೆ ಮಾತ್ರ ಅಂಬಿಗೆ ಉಳಿಗಾಲ. ಇಲ್ಲದಿದ್ದರೆ ಇತಿಹಾಸ ಮರುಕಳಿಸಿಬಿಡುತ್ತೆ.

● ನಾಗೇಶ್

ಅಂಬಿಗಿಂತ ರಮ್ಯಾನೇ ವಾಸಿ!



ಅಂಬಿಯೇ ಕೈಗೆ ಸಿಗೋಲ್ಲ, ಇನ್ನು ರಮ್ಯಾ ಸಂಸದೆಯಾದರೆ ಕೈಗೆ ಸಿಗುತ್ತಾಳೆಯೇ, ರೈತರ-ಕಾರ್ಮಿಕರ ಗೋಳು ಆಲಿಸುತ್ತಾಳೆಯೇ ಎಂಬೆಲ್ಲಾ ಗೊಂದಲಗಳಿಗೆ ರಮ್ಯಾ ತೆರೆ ಎಳೆದಿದ್ದಾರೆ.

ಸಂಸದೆಯಾದ ನಂತರ ಮಂಡ್ಯ ಕ್ಷೇತ್ರದಲ್ಲಿಯೇ ಗರಗರನೆ ಸುತ್ತುತ್ತಿರುವ ರಮ್ಯಾ ಈಗಾಗಲೇ ಮೈಷುಗರ್ ಸಂಬಂಧ ಸಿಎಂ ಸಿದ್ದರಾಮಯ್ಯ ಹಾಗೂ ಸಕ್ಕರೆ ಸಚಿವರ ಜೊತೆ ಚರ್ಚಿಸಿ ಕಾರ್ಖಾನೆಗೆ 15 ಕೋಟಿ ಹಣ ಬಿಡುಗಡೆ ಮಾಡಿಸಿದ್ದಾರೆ. ತಾವೇ ಮುಂದೆ ನಿಂತು ರೈತರ ಬಾಕಿ ಹಣ ಕೊಡಿಸಿದ್ದಾರೆ. ಜಿ.ಪಂ.ಮೂಲಕ ಆಗಬೇಕಾದ ಕೆಲಸಗಳ ಬಗ್ಗೆ ಅಧಿಕಾರಿಗಳಿಂದ ತಿಳಿದುಕೊಂಡಿದ್ದಾರೆ. ವಾರದಲ್ಲಿ 3-4 ದಿನ ಜಿಲ್ಲೆಯಲ್ಲಿಯೇ ಇದ್ದುಕೊಂಡು ಜನಸಾಮಾನ್ಯರ-ರೈತರ ಸಮಸ್ಯೆಗಳತ್ತ ಗಮನ ಹರಿಸುತ್ತಿದ್ದಾರೆ.

ಶಾಲಾ-ಕಾಲೇಜಿಗೆ ತೆರಳಿ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ತೊಡಗುವ ರಮ್ಯಾ ಜನಪ್ರಿಯತೆಯ ಟಿಆರ್‌ಪಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಬಾಯಿಂದ ಬಾಯಿಗೆ ಹರಡಿದ ಆಕೆಯ ಜನಪ್ರಿಯತೆಯಿಂದ 'ಅಂಬರೀಶ್‌ಗಿಂತ ರಮ್ಯಾನೇ ವಾಸಿ ಕಣ್ಲಾ' ಎಂಬ ಮಾತುಗಳು ಮಂಡ್ಯದಲ್ಲಿ ಸಾಮಾನ್ಯವಾಗುತ್ತಿದೆ.


ಲಂಕೇಶ್

ಮೋದಿಯ ಗೆಳೆತನ–ಎಸ್ಸಾರ್ ಕಂಪನಿ ಸಿರಿತನ

ಬಡ ಕಂಟ್ರಾಕ್ಟರ್ ಶತಕೋಟ್ಯಾಧೀಶರಾದ ಕತೆ



ಶಶಿ ರುಯ್ಯ ಮತ್ತು ರವಿ ರುಯ್ಯ (ಹಳೇಫೋಟೋ)



ಎಸ್ಸಾರ್ ಕಂಪನಿಯ ಶಶಿ ರುಯ್ಯ ಮತ್ತು ರವಿ ರುಯ್ಯ (ಇತ್ತೀಚಿನ ಫೋಟೋ)

ಅಭಿವೃದ್ಧಿಯಲ್ಲಿ ಗುಜರಾತ್ ಎಲ್ಲರಿಗಿಂತಲೂ ಮುಂದು, ನರೇಂದ್ರ ಮೋದಿ ಆದರ್ಶ ನಾಯಕ ಎಂಬ ಪ್ರಚಾರ ಕೊನೆಮೊದಲಿಲ್ಲದೆ ನಡೆಯುತ್ತಿದೆ. ಮೋದಿಯನ್ನು ತೀವ್ರವಾಗಿ ವಿರೋಧಿಸುವವರೂ ಕೂಡ ಆತನ ಕೋಮುವಾದ, ಫ್ಯಾಸಿಸ್ಟ್ ಗುಣಗಳನ್ನು ಎತ್ತಿತೋರಿಸುತ್ತಾರೆ. ಆದರೆ ಆತನ ಕಾರ್ಪೊರೇಟ್ ಕನೆಕ್ಷನ್‌ಗಳ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ. ಕಾರ್ಪೊರೇಟ್ ಮಾಧ್ಯಮಗಳ ಮೋದಿ ಭಜನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದರೆ ನಾವು ಮೋದಿಯ ಪರಮ ಆಪ್ತರಾಗಿರುವ ಕಾರ್ಪೊರೇಟ್ ದಣಿಗಳ ವ್ಯವಹಾರವನ್ನು ಒರೆಗೆ ಹಚ್ಚಬೇಕು.

ಗುಜರಾತ್‌ನಲ್ಲಿ ಗಟ್ಟಿಯಾಗಿ ತಳವೂರಿರುವ ಕಂಪನಿಗಳಲ್ಲಿ ಎಸ್ಸಾರ್ ಕಂಪನಿ ಸಮೂಹವೂ ಒಂದು. ಮೋದಿ ಅಧಿಕಾರಕ್ಕೆ ಬರುವ ಮುಂಚಿನಿಂದಲೂ ಈ ಕಂಪನಿಯ ಮಾಲಿಕ ರವಿಕಾಂತ್ ರುಯ್ಯನಿಗೂ ಮೋದಿಗೂ ಆತ್ಮೀಯ ಸಂಬಂಧ. ಇದರ ಪರಿಣಾಮವಾಗಿ ಕಂಪನಿಯ ಲಾಭ, ಆಸ್ತಿಪಾಸ್ತಿಗಳು ನಾಗಾಲೋಟದಲ್ಲಿ ಹೆಚ್ಚುತ್ತಿದೆ.

ಹತ್ತಾರು ಕಂಪನಿಗಳ ಸಮೂಹವಾಗಿರುವ ಎಸ್ಸಾರ್ ಗ್ರೂಪ್ ದೇಶದ ನಾಲ್ಕನೇ ಅತಿದೊಡ್ಡ ಕಂಪನಿ. ಫೋರ್ಬ್ಸ್ ಶ್ರೀಮಂತರ ಪಟ್ಟಿಯಲ್ಲಿ ಎಸ್ಸಾರ್‌ನ ಮಾಲಿಕರಾದ ಶಶಿಕಾಂತ ರುಯ್ಯ ಮತ್ತು ರವಿಕಾಂತ ರುಯ್ಯರ ಹೆಸರೂ ಇದೆ. ಈಗ ಎಸ್ಸಾರ್ ಸಮೂಹ ತಮ್ಮ ಸಾಮ್ರಾಜ್ಯವನ್ನು ಸುಮಾರು 25 ದೇಶಗಳಿಗೆ ವಿಸ್ತರಿಸಿದೆ. ಕಂಪನಿಯಲ್ಲಿ ಒಟ್ಟು 73,000 ಮಂದಿ ನೌಕರರಿದ್ದಾರೆ.

2012-2013ರಲ್ಲಿ ಇದರ ಒಟ್ಟು ವಾರ್ಷಿಕ ವಹಿವಾಟು 39 ಬಿಲಿಯನ್ ಡಾಲರ್, ಅಂದರೆ ಸುಮಾರು 2 ಲಕ್ಷದ 42 ಸಾವಿರ ಕೋಟಿ ರೂಪಾಯಿಗಳು!

ಹೀಗೆ ಲಕ್ಷಾಂತರ ಕೋಟಿಗಳ ವಹಿವಾಟು ನಡೆಸುತ್ತಿರುವ ಈ ಎಸ್ಸಾರ್ ಮಾಲಿಕರು ಆಗರ್ಭ ಶ್ರೀಮಂತರಾಗಿದ್ದವರೇನಲ್ಲ; ಇವರು ಮೊದಲ ತಲೆಮಾರಿಗೆ ಶ್ರೀಮಂತರಾದವರು. ಹೀಗೆ ಲಾಭ ಗಳಿಸಲು ಅವರು ವಿಶೇಷ ತಂತ್ರಜ್ಞಾನವನ್ನೇನೂ ಅನ್ವೇಷಿಸಿಲ್ಲ, ಹಾಗೆ ನೋಡಿದರೆ ಶಶಿ-ರವಿ ರುಯ್ಯಗಳ ಹೆಸರನ್ನು ಸಾಮಾನ್ಯವಾಗಿ ಯಾರೂ ಕೇಳಿಲ್ಲ, ಎಸ್ಸಾರ್ ಕಂಪನಿಯ ವಿಶೇಷ ಸಾಮರ್ಥ್ಯವಿದೆ. ಅದು ಸರ್ಕಾರಿ ಅಧಿಕಾರಿಗಳ ಜೊತೆ ಹಾಗೂ ಆಯಕಟ್ಟಿನಲ್ಲಿರುವ ರಾಜಕಾರಣಿಗಳ ಜೊತೆ ಉತ್ತಮ "ಬಾಂಧವ್ಯ" ಬೆಳೆಸಿಕೊಳ್ಳುವುದು. ಹೇಗೂ ದೇಶದಲ್ಲಿ ಉದಾರೀಕರಣ, ಖಾಸಗೀಕರಣ ನೀತಿಗಳು ಜಾರಿಯಲ್ಲಿರುವುದರಿಂದ ತಮ್ಮ "ಬಾಂಧವ್ಯ" ಬಳಸಿಕೊಂಡು ಸರ್ಕಾರಿ ಗುತ್ತಿಗೆಗಳನ್ನು, ಸಾರ್ವಜನಿಕ ಸಂಪನ್ಮೂಲಗಳನ್ನು ಕಬ್ಜಾ ಮಾಡಿಕೊಳ್ಳುವುದು. ಅಲ್ಲಿಂದಾಚೆಗೆ ಕಂಪನಿಯ ಲಾಭವನ್ನು ಸಾವಿರಾರು ಕೋಟಿಗಳಲ್ಲಿ ಲೆಕ್ಕ ಹಾಕಿಕೊಳ್ಳುವುದು.

ಎಸ್ಸಾರ್ ಸಮೂಹ ಬೆಳೆದು ಬಂದ ಹಾದಿಯನ್ನು ಒಂದೊಂದಾಗಿ ಶೋಧಿಸುತ್ತಾ ಹೋದರೆ ಅದೊಂದು ಭಾರೀ ಪತ್ತೇದಾರಿ ಕೆಲಸವೇ ಆಗುತ್ತದೆ. ಅಲ್ಲದೆ ಅದಕ್ಕೆ ಒಂದು ದೊಡ್ಡ ಗ್ರಂಥವೇ ಬೇಕಾಗುತ್ತದೆ. ಆದ್ದರಿಂದ ಈ ಲೇಖನದ ಮಿತಿಯಲ್ಲಿ ಕೆಲವೇ ಅಂಶಗಳಿಗೆ ಸೀಮಿತಗೊಳಿಸಿ ಚರ್ಚಿಸೋಣ.

1969ರಲ್ಲಿ ಕಟ್ಟಡ ನಿರ್ಮಾಣ ಗುತ್ತಿಗೆ ಮಾಡುತ್ತಿದ್ದ ಎಸ್ಸಾರ್ ಕಂಪನಿ ಆಗ ಒಂದು ಲಿಮಿಟೆಡ್ ಕಂಪನಿ ಕೂಡ ಆಗಿರಲಿಲ್ಲ. **1976**ರಲ್ಲಿ ಎಸ್ಸಾರ್ ಕನ್‌ಸ್ಟ್ರಕ್ಷನ್ ಲಿಮಿಟೆಡ್ ಎಂದು ಮರುನೋಂದಣಿ ಪಡೆಯಿತು. ಇನ್ನು ಷೇರು ಮಾರುಕಟ್ಟೆಯಲ್ಲಿ ನೋಂದಾವಣೆಗೆ ಅರ್ಹತೆ ಪಡೆದದ್ದು **1988**ರಲ್ಲಿ.

ಕಂಪನಿ ಇತಿಹಾಸದಲ್ಲಿ ಹಗರಣಗಳಿಗೆ ಕೊರತೆಯಿಲ್ಲ, ಇಪ್ಪತ್ತೊಂದನೇ ಶತಮಾನದ ಎರಡು ಅತಿ ದೊಡ್ಡ ಹಗರಣಗಳಾದ 2ಜಿ ಹಗರಣ ಮತ್ತು ಕಲ್ಲಿದ್ದಲು ಹಗರಣದಲ್ಲಿ ಭಾಗಿಯಾದ ಕಂಪನಿಗಳ ಪಟ್ಟಿಯಲ್ಲಿ ಎಸ್ಸಾರ್‌ನ ಹೆಸರೂ ಕೂಡ ಇದೆ. ಎಸ್ಸಾರ್ ಕಂಪನಿ ಕಾನೂನಿನ ಕಣ್ಣಿಗೆ ಮಣ್ಣೆರಚಲು ತನ್ನದೇ ಪ್ರಾಕ್ಸಿ ಕಂಪನಿಗಳನ್ನು ಹುಟ್ಟುಹಾಕಿತ್ತು, 2ಜಿ ಹಗರಣದಲ್ಲಿ ಲೂಪ್ ಟೆಲಿಕಾಮ್ ಎಂಬ ಕಂಪನಿಯನ್ನು ಹುಟ್ಟುಹಾಕಿ, ರುಯ್ಯ ಸೋದರಿ ಕಿರಣ್ ಖೇತಾನ್‌ಳ ಮೂಲಕ ಬಂಡವಾಳ ಹೂಡಿ ಈಗ ಸಿಕ್ಕಿಬಿದ್ದಿದ್ದಾರೆ. ಈ ವಿಷಯದಲ್ಲಿ ಕಂಪನಿಯ ಚೇರ್ಮನ್ ಶಶಿ ರುಯ್ಯ ಮತ್ತು ಸಿಇಒ ಅಂಶುಮಾನ್ ರುಯ್ಯರನ್ನು ಸಿಬಿಐ ಹಲವು ಬಾರಿ ವಿಚಾರಣೆಗೆ ಒಳಪಡಿಸಿ, ದೇಶ ಬಿಟ್ಟು ಹೋಗದಂತೆ ನಿರ್ಬಂಧಿಸಿತ್ತು. ಹಾಗೇ ಕಲ್ಲಿದ್ದಲು ಹಗರಣದಲ್ಲಿ ನವಭಾರತ್ ಹೆಸರಿನಲ್ಲಿ ಮಂಜೂರಾತಿ ಪಡೆದು ನಂತರ ಆ ಕಂಪನಿಯನ್ನು ಕೊಂಡುಕೊಳ್ಳುವ ಮೂಲಕ ಕಲ್ಲಿದ್ದಲು ಗಣಿಗಳನ್ನು ಕೈವಶಮಾಡಿಕೊಳ್ಳುವ ಹೈಟೆಕ್ ತಂತ್ರ ಬಳಸಿತ್ತು.



ಎಸ್ಸಾರ್ ಮಿನರಲ್ಸ್ ಹೆಸರಿನಲ್ಲಿ ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲು ಗಣಿಗಾರಿಕೆಯಲ್ಲಿ ತೊಡಗಿರುವ ಎಸ್ಸಾರ್ ಹಾಲಿ 200 ಕೋಟಿ ಟನ್‌ಗಳಷ್ಟು ಕಬ್ಬಿಣದ ಅದಿರು ನಿಕ್ಷೇಪ ಹಾಗೂ 450 ದಶಲಕ್ಷ ಟನ್ ಕಲ್ಲಿದ್ದಲು ನಿಕ್ಷೇಪಗಳನ್ನು ಕೈವಶ ಮಾಡಿಕೊಂಡಿವೆ.

ಎಸ್ಸಾರ್ ಎನರ್ಜಿ ಎಂಬ ಹೆಸರಿನಲ್ಲಿ ವಿದ್ಯುತ್ ಉತ್ಪಾದನೆ ಹಾಗೂ ಪೆಟ್ರೋಲಿಯಂ ಉತ್ಪಾದನೆಗೆ ತೊಡಗಿರುವ ಎಸ್ಸಾರ್ ಇಂದು ದೇಶದ ಎರಡನೇ ಅತಿ ದೊಡ್ಡ ಖಾಸಗಿ ವಿದ್ಯುತ್ ಉತ್ಪಾದಕ. ಕೇಂದ್ರ ಸರ್ಕಾರ ಹಾಗೂ ಮೋದಿ ಸರ್ಕಾರಗಳು ಒಟ್ಟಾಗಿ ಗುಜರಾತ್‌ನ ಕರಾವಳಿಯಲ್ಲಿರುವ ವಾಡಿನಾರ್ ಎಂಬಲ್ಲಿ 35,000 ಚದರ ಕಿ.ಮೀ ವಿಸ್ತಾರದ ತೈಲ ಮತ್ತು ಅನಿಲ ನಿಕ್ಷೇಪಗಳನ್ನು ಎಸ್ಸಾರ್ ಸಮೂಹದ ಬಾಯಿಗೆ ಹಾಕಿದ್ದಾರೆ. ದುಗ್ಗಾಣಿ ಬೆಲೆಗೆ ಸಿಕ್ಕಿರುವ ನಮ್ಮ ರಾಷ್ಟ್ರೀಯ ಸಂಪತ್ತಾದ ತೈಲವನ್ನು ದೇಶ ಮತ್ತು ವಿದೇಶಗಳಲ್ಲಿ ಮಾರಾಟ ಮಾಡಿ ಸಾವಿರಾರು ಕೋಟಿಗಳನ್ನು ಕಂಪನಿ ಬಾಚಿದೆ, ಬಾಚುತ್ತಲೇ ಇದೆ.

ಹೀಗೆ ಅಗಾಧ ಪ್ರಮಾಣದಲ್ಲಿ "ಲಾಭ" ಹರಿದುಬಂದರೆ ಏನು ಮಾಡಬೇಕು? ಕೀನ್ಯಾ ದೇಶದ ಸರ್ಕಾರಿ ಒಡೆತನದಲ್ಲಿರುವ ಕೀನ್ಯಾ ಪೆಟ್ರೋಲಿಯಂ ರಿಫೈನರಿ ಕಂಪನಿಯ ಶೇಕಡ 50ರಷ್ಟು ಒಡೆತನವನ್ನು ಎಸ್ಸಾರ್ ತನ್ನದಾಗಿಸಿಕೊಂಡಿದೆ. ಕಂಪನಿಯ ನಾಗಾಲೋಟ ಹಾಗೇ ಮುಂದುವರೆದು 2011ರಲ್ಲಿ ಯುನೈಟೆಡ್ ಕಿಂಗ್‌ಡಮ್‌ನ ಶೆಲ್ ಕಂಪನಿ ಒಡೆತನದ ಸ್ಟ್ಯಾನ್‌ಲೊ ರಿಫೈನರಿಯನ್ನು 350 ಮಿಲಿಯನ್ ಡಾಲರ್ (ಇಂದಿನ ರೂ. ಮೌಲ್ 2200 ಕೋಟಿ ರೂ) ಮೊತ್ತಕ್ಕೆ ಕೊಂಡುಕೊಂಡಿದೆಯೆಂದು ಎಸ್ಸಾರ್ ಕಂಪನಿಯ ಪ್ರಕಟಣೆ ತಿಳಿಸಿದೆ. ಈ ಸುದ್ದಿ ಅಗ ನಮ್ಮ ಮಾಧ್ಯಮಗಳಲ್ಲೂ ವರದಿಯಾಗಿತ್ತು. ಆದರೆ ಶೆಲ್ ಕಂಪನಿಯ ವೆಬ್‌ಸೈಟ್ ಪ್ರಕಾರ "ಈ ಡೀಲ್‌ನ ಒಟ್ಟು ಮೊತ್ತ 1.3 ಬಿಲಿಯನ್ ಡಾಲರ್", ಅಂದರೆ ಇಂದಿನ ರೂಪಾಯಿ ಮೌಲ್ಯದಲ್ಲಿ ಸುಮಾರು 8200 ಕೋಟಿಗಳು ಅಸಲಿ ಸಂಗತಿ ಹೀಗಿರುವಾಗ ಎಸ್ಸಾರ್ ಕಂಪನಿ ಕೇವಲ 25% ಮೊತ್ತವನ್ನು ತೋರಿಸುತ್ತಿರುವುದರ ಹಿಂದಿನ ಮರ್ಮವೇನು? ಊಹೆ ನಿಮಗೇ ಬಿಟ್ಟದ್ದು.

ಇಲ್ಲಿ ಮತ್ತೊಂದು ವಿಷಯವನ್ನು ನೆನಪಿಸುವುದು ಒಳ್ಳೆಯದು. ಇದೇ ಅವಧಿಯಲ್ಲಿ ಎಸ್ಸಾರ್ ಕಂಪನಿ ಗುಜರಾತ್ ಸರ್ಕಾರಕ್ಕೆ ಕಟ್ಟಬೇಕಿದ್ದ 9000 ಕೋಟಿ ಮಾರಾಟ ತೆರಿಗೆ ಮೊತ್ತವನ್ನು ಯಾಮಾರಿಸಲು ಹವಣಿಸಿತ್ತು.(ವಿವರಗಳಿಗೆ ಬಾಕ್ಸ್ ನೋಡಿ)

ಅಡ್ಡದಾರಿಯಲ್ಲಿ ಕೋಟಿಗಳನ್ನು ಬಾಚುವುದನ್ನೇ ಕಾಯಕ ಮಾಡಿಕೊಂಡಿರುವ ಎಸ್ಸಾರ್ ಕೇವಲ ದೇಶದ ಕಾನೂನುಗಳ ದುರ್ಬಳಕೆ ಮಾತ್ರವಲ್ಲ; ಅಂತರರಾಷ್ಟ್ರೀಯ ಕಾನೂನುಗಳನ್ನು ಯಶಸ್ವಿಯಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಮಾರಿಷಸ್ ಎಂಬ ಪುಟ್ಟ ದ್ವೀಪ ರಾಷ್ಟ್ರದ ಜೊತೆ ಭಾರ

ರೈಲ್ವೆಗೆ ಪಂಗನಾಮ!

ಕಳೆದ ಒಂದುವಾರದ ಹಿಂದೆ ಎಸ್ಸಾರ್ ಸ್ಟೀಲ್ ಕಂಪನಿಯ ಗಣಿ ಅದಿರು ಸಾಗಾಟಕ್ಕೆ ಸಂಬಂಧಿಸಿ ಮತ್ತೊಂದು ಹಗರಣ ಬೆಳಕಿಗೆ ಬಂದು, ಹಾಗೆ ಕಣ್ಮರೆಯಾಗಿ ಹೋಗಿದೆ. ಅದರ ವಿವರ ಇಲ್ಲಿದೆ ನೋಡಿ.

ತನ್ನ ಉಕ್ಕು ಕಂಪನಿಗೆ ಬೇಕಾದ ಅದಿರನ್ನು ರೈಲ್ವೇ ಮೂಲಕ ಸಾಗಿಸುವ ಕಂಪನಿ ಅದಕ್ಕಾಗಿ ರಿಯಾಯಿತಿ ಸೌಲಭ್ಯ ಪಡೆದುಕೊಂಡಿದೆ. ಆದರೆ ಇದೇ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡು ಅದಿರನ್ನು ಬಂದರುಗಳ ಮೂಲಕ ರಫ್ತು ಮಾಡಿ ಸಾವಿರಾರು ಕೋಟಿ ಬಾಚಿರುವ ಎಸ್ಸಾರ್ ದಣಿಗಳು ರೈಲ್ವೆ ಅಧಿಕಾರಿಗಳ ಜೊತೆ ಡೀಲ್ ಕುದುರಿಸಿಕೊಂಡು ಸಾಗಾಣಿಕೆ ವೆಚ್ಚವನ್ನೆ ಕೊಡದೆ ಲಪಟಾಯಿಸಿದ್ದಾರೆ. ಆದರೆ ಇತ್ತೀಚಿನ ಸಿಎಜಿ ಲೆಕ್ಕಪತ್ರದಲ್ಲಿ ಹಲವಾರು ಕಂಪನಿಗಳು ಹಾಗೂ ರೈಲ್ವೆ ಅಧಿಕಾರಿಗಳು ಷಾಮೀಲಾಗಿ ಒಟ್ಟು ರೈಲ್ವೆಗೆ ಸುಮಾರು 17,000 ಕೋಟಿಗಳನ್ನು ವಂಚಿಸಿರುವ ಸಂಗತಿ ಬಹಿರಂಗಗೊಂಡಿದೆ.

ಹೀಗೆ ಸಿಎಜಿ ಸೂಚನೆಯನ್ನಾಧರಿಸಿ ರೈಲ್ವೆ ಇಲಾಖೆ 117 ಕೋಟಿ ಪಾವತಿಸುವಂತೆ ಎಸ್ಸಾರ್ ಕಂಪನಿಗೆ ಬೇಡಿಕೆ ಇಟ್ಟಿತು. ಪ್ರಾರಂಭದಲ್ಲಿ ತಪ್ಪಿಸಿಕೊಳ್ಳಲು ಹೆಣಗಿದ ಎಸ್ಸಾರ್ ಕಂಪನಿ ಅಂತಿಮವಾಗಿ 89 ಕೋಟಿಗಳನ್ನು ನೀಡುವುದಾಗಿ ಹೇಳಿಕೆ ನೀಡಿದೆ. ಅದೂ ಕೂಡ 18 ಮಾಸಿಕ ಕಂತುಗಳಲ್ಲಿ!

ಇದೆಲ್ಲ ಒತ್ತಟ್ಟಿಗಿರಲಿ. ಇದೇ ಸೆಪ್ಟೆಂಬರ್ 18ರಂದು ಎಸ್ಸಾರ್ ಕಂಪನಿ ನೀಡಿದ ಪತ್ರಿಕಾ ಪ್ರಕಟಣೆ ನೋಡಿ. ಈ ಪ್ರಕಟಣೆಯ ಪ್ರಕಾರ ರೈಲ್ವೆಗೂ ಎಸ್ಸಾರ್‌ಗೂ ಎರಡು ದಶಕಗಳ ಕಾಲದ ಮಧುರಬಾಂಧವ್ಯ ಇದೆಯಂತೆ. ಆದರೆ ಇತ್ತೀಚೆಗೆ ಕಂಪನಿಯ ಆಂತರಿಕ ಲೆಕ್ಕ ಪತ್ರ ಪರಿಶೀಲನೆಯ ವೇಳೆಯಲ್ಲಿ ರೈಲ್ವೆಗೆ ಸಾರಿಗೆ ವೆಚ್ಚ ಪಾವತಿಸದೇ ಇರುವ ಅಂಶ ಗಮನಕ್ಕೆ ಬಂತಂತೆ! ಕೂಡಲೆ ಸ್ವ-ಇಚ್ಛೆಯಿಂದ ರೈಲ್ವೆಗೆ 89 ಕೋಟಿಗಳನ್ನು ಪಾವತಿಸಲು ತೀರ್ಮಾನ ತೆಗೆದುಕೊಳ್ಳಲಾಯಿತಂತೆ.!

ಇಂಥಾ ಹಸಿ ಸುಳ್ಳುಗಳನ್ನು ಯಥಾವತ್ ಪ್ರಕಟಿಸುತ್ತಿರುವ ಮಾಧ್ಯಮಗಳಿಗೆ ಏನನ್ನಬೇಕು?

ಎಸ್ಸಾರ್ ಆಯಿಲ್ ತೆರಿಗೆ ಗೋಲ್‌ಮಾಲ್!!

ಕಾರ್ಪೊರೇಟ್ ಕುಳಗಳು ಮೋದಿಯನ್ನು ಹೊಗಳುವುದರ ಒಳಗುಟ್ಟನ್ನು ಅರ್ಥಮಾಡಿಕೊಳ್ಳಲು ಇಲ್ಲೊಂದು ಸಣ್ಣ ಸ್ಯಾಂಪಲ್ ಇದೆ.

ಎಸ್ಸಾರ್ ಆಯಿಲ್ ಕಂಪನಿ ರುಯ್ಯ ಕುಟುಂಬದ ಕಂಪನಿಗಳಲ್ಲಿ ಒಂದು ಪ್ರಮುಖ ಕಂಪನಿ. ಈ ಕಂಪನಿ ಗುಜರಾತ್ ಸರ್ಕಾರಕ್ಕೆ ಪಾವತಿಸಬೇಕಿದ್ದ 9100 ಕೋಟಿ ಮಾರಾಟ ತೆರಿಗೆಯನ್ನು ನುಂಗಿಹಾಕಿ, ನಂತರ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ನಂತರ ಹಣ ಕಟ್ಟಲು ಒಪ್ಪಿಕೊಂಡ ಪ್ರಕರಣ ಕಳೆದ ವರ್ಷ ಬೆಳಕಿಗೆ ಬಂದಿತ್ತು.

ಎಸ್ಸಾರ್ ಆಯಿಲ್ ಕಂಪನಿ ಗುಜರಾತ್‌ನಲ್ಲಿ ಬಂಡವಾಳ ಹೂಡಿದ್ದಕ್ಕೆ ಪ್ರತಿಯಾಗಿ ಸುಮಾರು 17 ವರ್ಷಗಳ ಮಾರಾಟ ತೆರಿಗೆಯ ರಿಯಾಯಿತಿ ನೀಡಲಾಗಿತ್ತು, ಆ ಒಪ್ಪಂದದಲ್ಲಿದ್ದ ನಿಬಂಧನೆಗಳನ್ನು ಕಂಪನಿ ಉಲ್ಲಂಘಿಸಿದ ಕಾರಣಕ್ಕೆ ಸದರಿ ಒಪ್ಪಂದದ ಪ್ರಕಾರ 2003ರಿಂದ ತೆರಿಗೆ ಪಾವತಿಸಬೇಕಿತ್ತು. ಆದರೆ ಎಸ್ಸಾರ್ ಕಂಪನಿಯಿಂದ ಒಂದು ನಯಾ ಪೈಸೆಯನ್ನೂ ವಸೂಲಿ ಮಾಡಲಿಲ್ಲ, ಯಾಕೆಂದರೆ ರವಿ ರುಯ್ಯ ಮತ್ತು ನರೇಂದ್ರ ಮೋದಿ ನಡುವಿನ ಬಾಂಧವ್ಯವೇ ಅಂಥಾದ್ದು.

ಮೋದಿ ಮತ್ತು ಎಸ್ಸಾರ್ ಶಾಮೀಲಾಗಿ ಈ ಕೇಸನ್ನು ಹೈಕೋರ್ಟ್‌ನಲ್ಲಿ ದಾವೆ ಹೂಡುವ ನಾಟಕ ಆಡಿಬಿಟ್ಟರು; ಸರ್ಕಾರದ ಪರ ಕೇಸನ್ನು ದುರ್ಬಲಗೊಳಿಸಿದರು. ಪರಿಣಾಮವಾಗಿ ಗುಜರಾತ್ ಹೈಕೋರ್ಟ್‌ನ ತೀರ್ಪು ಎಸ್ಸಾರ್ ಪರವಾಗಿ ಹೊರಬಿತ್ತು.

ಈ ಪ್ರಕರಣ ಅಸೆಂಬ್ಲಿಯಲ್ಲಿ ಕೋಲಾಹಲಕ್ಕೂ ಕಾರಣವಾಯಿತು. ಮೋದಿ ಸರ್ಕಾರ ರವಿ ರುಯ್ಯನೊಂದಿಗೆ ಷಾಮೀಲಾಗಿದ್ದಾನೆಂದು ವಿರೋಧ ಪಕ್ಷದ ನಾಯಕ ಶಕ್ತಿಸಿಂಗ್ ಗೋಯಿಲ್ ತರಾಟೆಗೆ ತೆಗೆದುಕೊಂಡರು. ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕೆಂಬ ಬೇಡಿಕೆ ದಿನೇದಿನೇ ಕಾವೇರತೊಡಗಿತು. ಇದು ರಾಜ್ಯಾದ್ಯಂತ ಚರ್ಚೆಯ ವಿಚಾರವಾಗಿ ತನ್ನ ಬಂಡವಾಳ ಬಯಲಾಗುತ್ತಿರುವುದನ್ನು ಕಂಡ ಮೋದಿ ಸರ್ಕಾರ ಅನಿವಾರ್ಯ ಒತ್ತಡದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತು. ಅಂತಿಮವಾಗಿ ಸುಪ್ರೀಂ ಕೋರ್ಟ್ ಸದರಿ ಮಾರಾಟ ತೆರಿಗೆ ಮೊತ್ತವನ್ನು ರಾಜ್ಯ ಸರ್ಕಾರ ವಸೂಲಿ ಮಾಡಿಕೊಳ್ಳುವಂತೆ ಆದೇಶಿಸಿತು.

ಹೀಗೆ ಎಸ್ಸಾರ್ ಕಂಪನಿಯಿಂದ ಸರ್ಕಾರಿ ಬೊಕ್ಕಸಕ್ಕೆ ಸುಮಾರು 8000 ಕೋಟಿ ಮೊತ್ತವನ್ನು ತುಂಬಿಸಲೇಬೇಕಾದ ಅನಿವಾರ್ಯತೆ ಮೋದಿಗೆ ಬಂದೊದಗಿತು. ಅಲ್ಲಿಂದಾಚೆಗೆ ಮೋದಿ ಸರ್ಕಾರ ತನ್ನ ವರಸೆಯನ್ನೇ ಬದಲಾಯಿಸಿ, ಈ ಪ್ರಕರಣದ ಕ್ರೆಡಿಟ್ ಪಡೆದುಕೊಳ್ಳಲು ಸ್ಕೆಚ್ ಹಾಕಿಬಿಟ್ಟಿತು. ಕಂಪನಿಯ ಮೂರು ಬ್ಯಾಂಕ್ ಖಾತೆಗಳನ್ನು ತೆರಿಗೆ ಮೊತ್ತಕ್ಕೆ ಅಟ್ಯಾಚ್ ಮಾಡಿ, ಇಷ್ಟು ದೊಡ್ಡ ಮೊತ್ತದ ತೆರಿಗೆಯನ್ನು ಯಶಸ್ವಿಯಾಗಿ ವಸೂಲಿ ಮಾಡಿದ್ದೇನೆಂದು ಬಡಾಯಿ ಕೊಚ್ಚಿಕೊಂಡಿತು. ಮೋದಿಯ ಕೈಚಳಕದಿಂದಾಗಿ ಇಂಥಾ ಸುದ್ದಿಗಳು ಮಾಧ್ಯಮಗಳಲ್ಲಿ ಯಶಸ್ವಿಯಾಗಿ ಬಿಂಬಿತವಾದವು.

ಹೇಗಿದೆ ವರಸೆ?

ಮಾಡಿಕೊಂಡಿರುವ ದ್ವಿಪಕ್ಷೀಯ ಆರ್ಥಿಕ ಒಪ್ಪಂದದ ಪ್ರಕಾರ ಮಾರಿಷಸ್‌ನಿಂದ ಹೂಡಿಕೆಯಾಗುವ ಬಂಡವಾಳಕ್ಕೆ ಹಲವಾರು ತೆರಿಗೆ ವಿನಾಯ್ತಿಗಳನ್ನು ಘೋಷಿಸಲಾಗಿದೆ. ಎಸ್ಸಾರ್‌ನಂಥ ಖದೀಮರು ಇದನ್ನೇ ಹೇಗೆ ದುರ್ಬಳಕೆ ಮಾಡಿಕೊಂಡಿವೆ ನೋಡಿ. ಎಸ್ಸಾರ್ ಸಮೂಹದಲ್ಲಿ ವಿದ್ಯುತ್ ಮತ್ತು ಪೆಟ್ರೋಲಿಯಂ ಉತ್ಪಾದನೆಯಲ್ಲಿ ತೊಡಗಿರುವ ಎಸ್ಸಾರ್ ಎನರ್ಜಿ ಎಂಬ ಕಂಪನಿಯ ವಹಿವಾಟು ಕೇಂದ್ರೀಕೃತವಾಗಿರುವುದು ನಮ್ಮ ಭಾರತ ಭೂಮಿಯಲ್ಲೇ. ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಎಸ್ಸಾರ್‌ನ ಬಹುಪಾಲು ಉದ್ಯಮಗಳು ಗುಜರಾತ್‌ನಲ್ಲೇ ಕೇಂದ್ರೀಕೃತಗೊಂಡಿವೆ.

ಆದರೆ ತಾಂತ್ರಿಕವಾಗಿ ಈ ಕಂಪನಿ ಭಾರತದ್ದಲ್ಲ. ಯಾಕೆಂದರೆ ಇದು ನೋಂದಾಯಿಸಲ್ಪಟ್ಟಿರುವುದು ಮಾರಿಷಸ್‌ನಲ್ಲಿ. ಇದರ ಕೇಂದ್ರ ಕಚೇರಿ ಇರುವುದು ಮಾರಿಷಸ್ ದ್ವೀಪದ ಪೋರ್ಟ್ ಲೂಯಿಸ್‌ನಲ್ಲಿ. ಅಲ್ಲಿಂದಲೇ ಭಾರತದ ಹಾಗು ಇಡೀ ಜಗತ್ತಿನ ವಹಿವಾಟನ್ನೆಲ್ಲ ನಿಯಂತ್ರಿಸುತ್ತಿದೆ. ಇಷ್ಟೆಲ್ಲ ಕಸರತ್ತು ಯಾಕೆಂದರೆ ನಮ್ಮ ಬೊಕ್ಕಸಕ್ಕೆ ಕನ್ನ ಕೊರೆಯಲು ಮಾತ್ರ. ಈ ಬಗ್ಗೆ ಸಮಗ್ರ ತನಿಖೆ ನಡೆಯಬೇಕಾದ ತುರ್ತು ಅಗತ್ಯ ಇದೆ.

ಎಸ್ಸಾರ್ ಎನರ್ಜಿ ಮಾತ್ರವಲ್ಲದೆ ಮಾರಿಷಸ್‌ನಲ್ಲಿ ಅದೆಷ್ಟು ಕಂಪನಿಗಳನ್ನು ತೆರೆದು, ಅದೆಷ್ಟು ಕಂಪನಿಗಳನ್ನು ಮುಚ್ಚಿಹಾಕಿದೆಯೆಂಬ ಲೆಕ್ಕ ಬಹುಶಃ ಮಾಲೀಕರಿಗೂ ಸಿಗಲಿಕ್ಕಿಲ್ಲ; ಹಾಗಿದೆ ಅವರ (ಅ)ವ್ಯವಹಾರ. ಈಗಲೂ ದೆಹಲಿಯಲ್ಲಿರುವ ಎಸ್ಸಾರ್ ಗ್ಲೋಬಲ್ ಕ್ಯಾಪಿಟಲ್ ಎಂಬ ಕಂಪನಿಯ ಹೆಸರಿನಲ್ಲಿ ಅಪಾರ ಪ್ರಮಾಣದ ಕಪ್ಪುಹಣವನ್ನು ಚಲಾವಣೆ ಮಾಡುತ್ತಿರಬಹುದೆಂಬ ಗುಮಾನಿಯನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಅಂದಹಾಗೆ ಈ ಗ್ಲೋಬಲ್ ಕ್ಯಾಪಿಟಲ್‌ನ ವಾರ್ಷಿಕ ವಹಿವಾಟು 20 ಬಿಲಿಯನ್ ಡಾಲರ್‌ಗಳು, ಅಂದರೆ ಸುಮಾರು ಒಂದು ಲಕ್ಷದ 24 ಸಾವಿರ ಕೋಟಿಗಳು!

ನಮ್ಮ ಬೊಕ್ಕಸಕ್ಕೆ ಸೇರಬೇಕಿದ್ದ ಭಾರೀ ಮೊತ್ತವನ್ನು ಗುಳುಂ ಮಾಡಿ ಕೊಬ್ಬಿರುವ ಎಸ್ಸಾರ್ ಸಮೂಹ ತನ್ನ ಜಾಗತಿಕ ವಹಿವಾಟನ್ನು ವಿಸ್ತರಿಸುತ್ತಲೇ ಇದೆ. ನರೇಂದ್ರ ಮೋದಿ ಗುಜರಾತ್‌ನಲ್ಲಿ ಅಧಿಕಾರಕ್ಕೆ ಬಂದ ನಂತರ ಇನ್ನಷ್ಟು ವೇಗವಾಗಿ ಬೆಳೆದ ಶಶಿ & ರವಿ ರುಯ್ಯ ಬ್ರದರ್ಸ್ ಜಾಗತಿಕ ಉದ್ಯಮದತ್ತ ಕೈಚಾಚಿದರು. ಎಸ್ಸಾರ್ ಸ್ಟೀಲ್ ಕಂಪನಿ 2008ರಲ್ಲಿ ಕೆನಡಾದ ಅಲ್ಗೋಮಾ ಸ್ಟೀಲ್ ಕಂಪನಿಯನ್ನು 1.63 ಡಾಲರ್(ಇಂದಿನ ರೂಪಾಯಿ ಮೌಲ್ಯ ಸುಮಾರು 10,100 ಕೋಟಿ) ಮೊತ್ತಕ್ಕೆ ಸ್ವಾಧೀನಪಡಿಸಿಕೊಂಡು 'ಎಸ್ಸಾರ್ ಸ್ಟೀಲ್ ಆಲ್ಗೋಮಾ' ಎಂಬ ಹೆಸರಿನಲ್ಲಿ ವ್ಯವಹರಿಸುತ್ತಿದೆ. 2007ರಲ್ಲಿ ಉತ್ತರ ಅಮೆರಿಕಾದ ಮಿನ್ನೆಸೊಟದಲ್ಲಿ ಉಕ್ಕು ಕೈಗಾರಿಕೆ ಸ್ಥಾಪಿಸಲು ಸುಮಾರು 1.65 ಬಿಲಿಯನ್ ಡಾಲರ್ (ಸುಮಾರು 10,200 ಕೋಟಿ ರೂ) ಹೂಡಿಕೆ ಮಾಡಿದೆ.

ಎಸ್ಸಾರ್ ಸಮೂಹ ಈಗ ಉಕ್ಕು, ಪೆಟ್ರೋಲಿಯಂ ಮತ್ತು ಗ್ಯಾಸ್, ವಿದ್ಯುತ್‌ಶಕ್ತಿ, ದೂರಸಂಪರ್ಕ, ಗಣಿಗಾರಿಕೆ, ಮೂಲಸೌಕರ್ಯಗಳ ಗುತ್ತಿಗೆ, ಶಿಪ್ಪಿಂಗ್, ಬಂದರು, ರಿಯಲ್ ಎಸ್ಟೇಟ್, ಚಿಲ್ಲರೆ ವ್ಯಾಪಾರ ಹೀಗೆ ನಾನಾ ಕ್ಷೇತ್ರಗಳಲ್ಲಿ ಭಾರೀ ವ್ಯವಹಾರ ನಡೆಸುತ್ತಿದೆ. ಎಸ್ಸಾರ್ ಸ್ಟೀಲ್, ಎಸ್ಸಾರ್ ಆಯಿಲ್, ಎಸ್ಸಾರ್ ಶಿಪ್ಪಿಂಗ್, ಎಸ್ಸಾರ್ ಎನರ್ಜಿ, ಎಸ್ಸಾರ್ ಸೂಪರ್ ಮಾರ್ಟ್, ದಿ ಮೊಬೈಲ್ ಸ್ಟೋರ್ ಮುಂತಾದ ಕಂಪನಿಗಳು ಈ ಸಮೂಹದಲ್ಲಿವೆ. ಕಳೆದ ಆರ್ಥಿಕ ವರ್ಷದಲ್ಲಿ ಅಧಿಕೃತವಾಗಿ ಘೋಷಣೆಯಾದ ಈ ಸಮೂಹದ ವರಮಾನ 2,42,000 ಕೋಟಿಗಳು!

ಇಂಥಾ ಎಸ್ಸಾರ್ ಸಮೂಹಕ್ಕೆ ಮೋದಿ ಸರ್ಕಾರ ಕೊಟ್ಟಿರುವ ರಿಯಾಯಿತಿಗಳ ಒಂದೆರಡಲ್ಲ; ತೆರಿಗೆ ವಿನಾಯಿತಿಯಿಂದ ಹಿಡಿದು ಪುಕ್ಕಟೆ ಭೂಮಿ, ನೀರು ಒದಗಿಸುವವರೆಗೂ ಮೋದಿ ತನ್ನ ಗೆಳೆಯರಿಗೆ ಅನುಕೂಲ ಮಾಡಿಕೊಟ್ಟಿದ್ದಾನೆ. ಎಸ್ಸಾರ್ ಭೂಸ್ವಾಧೀನದ ಬಗ್ಗೆ ರೈತರ ವಿರೋಧಕ್ಕೆ ಗುಜರಾತ್‌ನಲ್ಲಿ ಯಾವ ಬೆಲೆಯೂ ಇಲ್ಲ. ಎಸ್ಸಾರ್ ಸಮೂಹ ಲಕ್ಷಾಂತರ ಕೋಟಿ ಗಳಿಸಲು ಬೆವರು ಹರಿಸಿದ ಕಾರ್ಮಿಕರಿಗೆ ಮಾತ್ರ ಊಟಕ್ಕೂ ತತ್ವಾರ. ಎಸ್ಸಾರ್ ಸಮೂಹದ ಕೈಗಾರಿಕೆಗಳಲ್ಲಿ ಹತ್ತು ಹಲವು ಮುಷ್ಕರಗಳೇ ಇದಕ್ಕೆ ಸಾಕ್ಷಿ. ಇತ್ತೀಚೆಗೆ ಎಸ್ಸಾರ್ ಪೋರ್ಟ್‌ನ ಕಾರ್ಮಿಕರು ಉಪವಾಸ ಮುಷ್ಕರ ನಡೆಸಿದ್ದರು.

ಈ ಶಶಿರುಯ್ಯ ಮತ್ತು ರವಿ ರುಯ್ಯರ ಸಾಮ್ರಾಜ್ಯದ ವಿಸ್ತರಣೆಯಲ್ಲಿ ನರೇಂದ್ರ ಮೋದಿಯ ಸರ್ಕಾರದ ಕೊಡುಗೆ ಬಲವಿತ್ತು, ಈಗ ಮೋದಿಯನ್ನು ಪ್ರಧಾನಿ ಮಾಡಲು ಎಸ್ಸಾರ್ ಕಂಪನಿಯೂ ಹಣ ಹರಿಸುತ್ತಿದೆ. ಇದು 'ನೀ ನನಗಿದ್ದರೆ ನಾ ನಿನಗೆ' ಎಂಬಂತಿಲ್ಲವೆ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ಹಲ್ಲೆಗೊಳಗಾದ ಮಹಿಳೆ ಆಸ್ಪತ್ರೆಯಲ್ಲಿ ಮತ್ತು ಆಕೆಯ ಗಂಡನನ್ನು ಸಂತೈಸುತ್ತಿರುವ ಸಮುದಾಯದ ನಾಯಕರು

ಚಾಮರಾಜನಗರದ 'ಮತಾಂತರ ಗದ್ದಲ' ಅಮಾಯಕ ಹೆಂಗಸಿನ ಮೇಲೆ 'ಗಣೇಶನ ಗಲಾಟೆ'

ಚಾಮರಾಜನಗರದ ಕೋಳಿಪಾಳ್ಯದಲ್ಲಿ ಇತ್ತೀಚೆಗೆ ಅಮಾನುಷ ಘಟನೆಯೊಂದು ನಡೆಯಿತು. 'ಮತಾಂತರ ಮಾಡುತ್ತಾಳೆ' ಎನ್ನುವ ಹುರುಳಿಲ್ಲದ ಆರೋಪ ಹೊರಿಸಿ ಇಳಿವಯಸ್ಸಿನ ಅಮಾಯಕ ಹೆಂಗಸೊಬ್ಬಳನ್ನು ಮರಕ್ಕೆ ಕಟ್ಟಿ ಹಾಕಿ ಬೆಳಗ್ಗಿನಿಂದ ಸಂಜೆಯವರೆಗೆ ಸುಮಾರು ಐವತ್ತು ಜನರ ತಂಡ ಹಿಗ್ಗಾ-ಮುಗ್ಗಾ ಬಡಿದಿದ್ದರು. ಕಣ್ಣೆದುರಿಗೇ ಇಂತಹ ದೌರ್ಜನ್ಯ ನಡೆಯುತ್ತಿದ್ದರೂ ಸ್ವತಃ ತಹಶೀಲ್ದಾರ ಸಾಹೇಬರು ಮತ್ತು ಪೊಲೀಸರ ತಂಡ ಮೂಕಪ್ರೇಕ್ಷಕರಂತೆ ನಿಂತಿದ್ದರು. ದಾಳಿಗೆ ತುತ್ತಾದ ಹೆಂಗಸಿಗೆ ಸಹಾಯ ಮಾಡುವ ಬದಲು, ಆಕೆಯನ್ನು ಥಳಿಸುತ್ತಿದ್ದ ಜನರ ಗುಂಪಿಗೆ ಬೆದರಿದ ತಹಶೀಲ್ದಾರ್ ಎಸ್.ಎಂ.ಮಹದೇವ್ 'ಆ ಹೆಂಗಸಿನ ಮೇಲೆಯೇ ಸೂಕ್ತ ಕ್ರಮ ಕೈಗೊಳ್ಳುವುದಾಗಿ' ದಾಳಿಕೋರರನ್ನು ಸಮಾಧಾನಪಡಿಸಲು ಹವಣಿಸುತ್ತಿದ್ದದ್ದು ಮಾತ್ರ 'ನ್ಯಾಯ ವ್ಯವಸ್ಥೆಯನ್ನು ಅಣಕಿಸುವಂತಿತ್ತು. ಪರಿಸ್ಥಿತಿ ಹೀಗಿದ್ದಾಗ ಆಕೆಗೆ ಪೊಲೀಸರಿಂದ ರಕ್ಷಣೆ ಸಿಗುವುದಂತೂ ದೂರದ ಮಾತು. ಇನ್ನು ಟಿ.ವಿ. ಚಾನಲ್‌ಗಳಂತು ಅಪರೂಪಕ್ಕೆ ಆಹಾರ ಸಿಕ್ಕ ಭರಾಟೆಯಲ್ಲಿ 'ಮತಾಂತರ ಮಾಡುತ್ತಿದ್ದ ಹೆಂಗಸನ್ನು ಥಳಿಸಿದ ಗ್ರಾಮಸ್ಥರು' ಎನ್ನುವ ಫ್ಲಾಶ್‌ನ್ಯೂಸ್ ಬಿತ್ತರಿಸುವ ಕಾಯಕದಲ್ಲೇ ಬ್ಯುಸಿಯಾಗಿದ್ದರು. ಆದರೆ ಆ ಘಟನೆಯ ಹಿಂದಿರುವ ಅಸಲಿಯತ್ತು ಮತ್ತು ಹಕೀಕತ್ತುಗಳೇ ಬೇರೆ.

ಗಣೇಶನಿಗೆ ಫಂಡು ಕೊಡಲಿಲ್ಲ

ದಾಳಿಗೆ ತುತ್ತಾದ ಹೆಂಗಸಿನ ಹೆಸರು ಸಣ್ಣಮ್ಮ (ಮಾಧ್ಯಮಗಳು ಬಿತ್ತರಿಸಿದಂತೆ ಮೇರಿ ಅಲ್ಲ). ಕೋಳಿಪಾಳ್ಯದ ಸಿದ್ದನಾಯ್ಕ ಎಂಬಾತನ ಹೆಂಡತಿ. ಇವರು ಮೂಲತಃ ಲಂಬಾಣಿ ಸಮುದಾಯಕ್ಕೆ ಸೇರಿದ ಜನ. ಹೊಟ್ಟೆಪಾಡಿಗಾಗಿ ಸಣ್ಣಮ್ಮ ಸರ್ಕಾರಿ ಶಾಲೆಯಲ್ಲಿ ಅಡುಗೆ ಸಹಾಯಕಿಯಾಗಿ ಕೆಲಸ ಮಾಡಿಕೊಂಡಿದ್ದಾಳೆ. ಜೊತೆಗೆ ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಮಕ್ಕಳನ್ನು ಕರೆದೊಯ್ಯುವ ಕಾಯಕದ ಮೂಲಕ ಹೆಚ್ಚುವರಿ ಆದಾಯಕ್ಕೂ ದಾರಿ ಮಾಡಿಕೊಂಡಿದ್ದಳು. ಈಗ್ಗೆ ಹತ್ತು ವರ್ಷದ ಹಿಂದೆ ಸಣ್ಣಮ್ಮ ಭಾರೀ ಅನಾರೋಗ್ಯಕ್ಕೆ ತುತ್ತಾಗಿ ಹಲವಾರು ಆಸ್ಪತ್ರೆಗಳಿಗೆ ಅಲೆದಾಡಿದರೂ ಕಾಯಿಲೆ ಗುಣವಾಗಿರಲಿಲ್ಲ. ಯಾರೋ ಹೇಳಿದರು ಅಂತ 'ಏಸು ಸ್ವಾಮಿಗೆ ಹರಕೆ'ಯನ್ನೂ ಹೊತ್ತುಕೊಂಡಿದ್ದಳು. ಆಸ್ಪತ್ರೆಗಳ ಔಷಧಿಯ ಪರಿಣಾಮವೋ, ಆಕೆಯ ಮನೋನಂಬಿಕೆಯ ಪ್ರಭಾವವೋ ಕಾಕತಾಳೀಯ ಎನ್ನುವಂತೆ ಅದೇ ಹೊತ್ತಿಗೆ ಕಾಯಿಲೆಯೂ ವಾಸಿಯಾಗಿತ್ತು. ಅಗಿನಿಂದ ಏಸುವೇ ತನ್ನನ್ನ ಬದುಕಿಸಿದ ಅಂತ ಜೀಸಸ್‌ನ ಅನುಯಾಯಿಯಾಗಿದ್ದಳು. ಆಗಿನಿಂದಲೂ ಚರ್ಚ್‌ಗೆ ಹೋಗಿಬರುವ ರೂಢಿ ಇಟ್ಟುಕೊಂಡಿದ್ದಳು.

ಸಹಜವಾಗಿಯೇ ಇದು 'ಕೋಮು ಸೈತಾನ' ಮನಸ್ಸುಗಳಿಗೆ ರುಚಿಸಿರಲಿಲ್ಲ. ಆಕೆ ಮತ್ತು ಆಕೆಯ ಕುಟುಂಬದ ಮೇಲೆ ವಿನಾಕಾರಣ ದ್ವೇಷ ಸಾಧಿಸಲಾಗುತ್ತಿತ್ತು. ಕೆಲದಿನಗಳ ಹಿಂದೆ ನಡೆದ ಗೌರಿ-ಗಣೇಶ ಹಬ್ಬದಂದು ಊರಿನಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಲು ನಿರ್ಧರಿಸಿದ ಗ್ರಾಮಸ್ಥರು ಯಥಾಪ್ರಕಾರ ಪ್ರತಿಯೊಬ್ಬರಿಂದ 'ಫಂಡ್' ಕಲೆಕ್ಷನ್‌ಗೆ ಮುಂದಾಗಿದ್ದರು. ಸಣ್ಣಮ್ಮನ ಬಳಿಯೂ ಬಂದ ಗ್ರಾಮಸ್ಥರು ಆಕೆಯ ಆದಾಯ, ಮನೆ ಸ್ಥಿತಿ-ಗತಿಯ ಅರಿವಿದ್ದೂ ಐದು ಸಾವಿರ ರೂಪಾಯಿ ಚಂದಾ ಕೊಡುವಂತೆ ಒತ್ತಾಯಿಸಿದ್ದರು. ಕೊಡಬಾರದೆನ್ನುವ ಉದ್ದೇಶ ಇರದಿದ್ದರೂ ಆಕೆಯ ಬಳಿ ಅಷ್ಟೊಂದು ಹಣವಿರಲಿಲ್ಲ. ಅದಕ್ಕೂ ಹೆಚ್ಚಾಗಿ ತನ್ನ ಬಳಿ ಇಷ್ಟೊಂದು ದೊಡ್ಡ ಮೊತ್ತ ಕೇಳುತ್ತಿರುವುದರ ಹಿಂದಿನ ಉದ್ದೇಶವನ್ನು ಅರಿತಿದ್ದ ಸಣ್ಣಮ್ಮ 'ಸದ್ಯಕ್ಕೆ ಹಣವಿಲ್ಲ, ಸಂಬಳ ಬಂದನಂತರ ಕೊಡುವುದಾಗಿ' ಹೇಳಿದ್ದಳು.

ಅವತ್ತು ದಾಳಿ ಮಾಡಿದವರು ರೊಚ್ಚಿಗೇಳಲು ಇದೇ ಮೂಲಕಾರಣ. ಅಲ್ಲದೆ ಚಾಮರಾಜನಗರ ಜಿಲ್ಲೆಯಲ್ಲಿ ದಲಿತ ಮತ್ತು ದಮನಿತರು ಜಾತಿ ವ್ಯವಸ್ಥೆಯಿಂದ ರೋಸತ್ತು ಕ್ರಿಶ್ಚಿಯನ್ ಧರ್ಮಕ್ಕೆ ಸ್ವಯಂಪ್ರೇರಿತರಾಗಿ ಮತಾಂತರಗೊಳ್ಳುತ್ತಿರುವುದು ಸಾಮಾನ್ಯವಾಗುತ್ತಿದೆ. ಇದಕ್ಕೆ ಕೋಳಿಪಾಳ್ಯವೇನು ಹೊರತಲ್ಲ. ಮತಾಂತರಗೊಂಡ ಸುಮಾರು ಹತ್ತರಿಂದ ಹದಿನೈದು ಕುಟುಂಬಗಳು ಆ ಊರಿನಲ್ಲಿವೆ. ಹೀಗೆ ಮತಾಂತರವಾಗಲು ಸಣ್ಣಮ್ಮನಿಗೆ ಇದ್ದಂತೆ ಅವರದೇ ನಂಬಿಕೆ ಮತ್ತು ಒಲವುಗಳು ಕಾರಣ. ಆದರೆ ಸಣ್ಣಮ್ಮನೇ ಅವರನ್ನೆಲ್ಲ ಮತಾಂತರ ಮಾಡಿಸಿದ್ದಾಳೆ ಅಂತ ಗುಲ್ಲೆಬ್ಬಿಸಲಾಗಿತ್ತು. ಊರ ಜನರ ಇಂತಹ ನಂಬಿಕೆಗೆ ಗಣೇಶ ಫಂಡ್ ಕಲೆಕ್ಷನ್ ನೆಪವಾದದ್ದೇ ತಡ ಈ ಘಟನೆ ನಡೆದಿದೆ.

ಆ ದಿನ ಸಣ್ಣಮ್ಮ ಯಥಾಪ್ರಕಾರ ಬೆಳಗ್ಗೆ 8.30ರ ಸುಮಾರಿಗೆ ಮಕ್ಕಳನ್ನೆಲ್ಲ ಶಾಲೆಗೆ ಕರೆದೊಯ್ಯಲು ಬಸ್ಸಿನಿಂದ ಇಳಿದು ಸ್ವಲ್ಪ ದೂರ ನಡೆದು ಬಂದಿದ್ದಳಷ್ಟೆ. ಐವತ್ತಕ್ಕೂ ಹೆಚ್ಚು ಜನರಿದ್ದ ಪೂರ್ವ ನಿಯೋಜಿತ ಗುಂಪೊಂದು ಆಕೆಯನ್ನು ಸುತ್ತುವರೆದು 'ಈ ಮಕ್ಕಳನ್ನೆಲ್ಲ ಮತಾಂತರ ಮಾಡಲು ಕರೆದೊಯ್ಯುತ್ತಿದ್ದೀಯಾ' ಎಂದು ನಿಂದಿಸಿದ್ದಲ್ಲದೆ ಪಕ್ಕದಲ್ಲಿದ್ದ ಮರಕ್ಕೆ ಬಿಗಿದು ಹೊಡೆದಿದ್ದರು. ಆ ಗುಂಪಿನಲ್ಲಿದ್ದ ಹೆಂಗಸರೂ ಮನುಷ್ಯತ್ವವನ್ನು ಮರೆತು ಸಣ್ಣಮ್ಮನನ್ನು ಥಳಿಸಿದ್ದರು. ಆಕೆಯ ವೈಯಕ್ತಿಕ ನಂಬಿಕೆ ಮತ್ತು ಆಚರಣೆಗಳನ್ನು ಅವಮಾನಿಸುವ ಸಲುವಾಗಿಯೇ ಬಲವಂತವಾಗಿ ಹಣೆಗೆ ಕುಂಕುಮ ಹಚ್ಚಲಾಗಿತ್ತು ಮತ್ತು ನೀರನ್ನು ಮೈಮೇಲೆ ಎರಚಲಾಗಿತ್ತು. ಮಧ್ಯಾಹ್ನ 12 ಗಂಟೆಯ ವೇಳೆಗೆ ಸುದ್ದಿ ತಿಳಿದ ತಹಸೀಲ್ದಾರರು ಸ್ಥಳಕ್ಕೆ ಆಗಮಿಸಿದಾಗಲೂ ಆಕೆ ಮರಕ್ಕೆ ಕಟ್ಟಿದ ಸ್ಥಿತಿಯಲ್ಲೇ ಇದ್ದಳು. ಅಲ್ಲಿಯವರೆಗೆ ನಿರಂತರವಾಗಿ ಆಕೆಯ ಮೇಲೆ ದಾಳಿ ನಡೆಸಲಾಗಿತ್ತು.

ಪೊಲೀಸರ ಸಮೇತ ತಹಶೀಲ್ದಾರರು ಬಂದರೂ ಪರಿಸ್ಥಿತಿಯೇನೂ ಸುಧಾರಿಸಲಿಲ್ಲ. ಅವರೆದುರೇ ದಾಳಿಕೋರರು ಆಕೆಯನ್ನು ಬಡಿಯುವ ಸಾಹಸ ತೋರಿದ್ದರು. ಆಕೆಯನ್ನು ಆಸ್ಪತ್ರೆಗೆ ದಾಖಲಿಸುವ ಸೌಜನ್ಯವನ್ನೂ ತೋರದ 'ಸರ್ಕಾರಿ ಯಂತ್ರ' ಸಣ್ಣಮ್ಮನ ಮೇಲೆ ಕ್ರಮಕೈಗೊಳ್ಳುವುದಾಗಿ ಗುಂಪನ್ನು ಸಮಾಧಾನ ಪಡಿಸಿ ಅಲ್ಲಿಂದ ಕಾಲ್ಕಿತ್ತಿದ್ದರು. ತಹಶೀಲ್ದಾರರ ಮಧ್ಯಪ್ರವೇಶ ಆದ ನಂತರವೂ ದಾಳಿಕೋರರು ಸಣ್ಣಮ್ಮನ ಗಂಡ ಸಿದ್ದನಾಯ್ಕನನ್ನು ಕರೆತಂದು 'ನಿನ್ನ ಹೆಂಡತಿ ಮತಾಂತರ ಮಾಡುವುದನ್ನು ಏಕೆ ತಡೆಯುತ್ತಿಲ್ಲ?' ಅಂತ ಆತನ ಮೇಲೂ ಹಲ್ಲೆ ನಡೆಸಿದ್ದರು.

ವಿಷಯ ತಿಳಿದ ದಲಿತ ಸಂಘಟನೆಗಳು, ಕ್ರಿಶ್ಚಿಯನ್ ಅಸೋಸಿಯೇಷನ್, ಪ್ರಗತಿಪರರು, ಕೆಲ ಮಹಿಳಾ ಸಂಘಟನೆಗಳು ಅಲ್ಲಿಗೆ ತಲುಪಿದ ನಂತರವಷ್ಟೇ ಆಕೆ ಆಸ್ಪತ್ರೆಗೆ ಸೇರಿದ್ದು ಮತ್ತು ದಾಳಿಯ ಕುರಿತು ಕೇಸೂ ದಾಖಲಾದದ್ದು. ವಿವಿಧ ಸಂಘಟನೆಗಳ ಆಶ್ರಯದಲ್ಲಿ ಇದೇ ಸೆಪ್ಟೆಂಬರ್ 26ರಂದು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿ ಕೂಡಲೇ ದಾಳಿಕೋರರನ್ನು ಬಂಧಿಸುವಂತೆ ಒತ್ತಾಯಿಸಲಾಯಿತಾದರು ಅವರೆಲ್ಲಾ ಆದಾಗಲೆ ಜಾಮೀನು ಪಡೆದು ನಿಶ್ಚಿಂತರಾಗಿ ಓಡಾಡಿಕೊಂಡಿದ್ದಾರೆ. ಆದರೆ ಅಮಾಯಕ ಸಣ್ಣಮ್ಮನನ್ನು ಅಡುಗೆ ಸಹಾಯಕಿ ಕೆಲಸದಿಂದ ಕಿತ್ತೆಸೆದು ಮತ್ತೊಂದು ಸುತ್ತಿನ ದೌರ್ಜನ್ಯ ನಡೆಸಲಾಗಿದೆ.

ಅವತ್ತಿನ ವಿಕೃತದ ಹಿಂದಿರುವ ಸತ್ಯ ಇದು!

● ವರದಿಗಾರ

ಈಕೆ ಭಾರತದಲ್ಲಿ ಸುಂದರಿಯಲ್ಲ!



ಇತ್ತೀಚೆಗೆ ನಿನಾ ದವುಲುರಿ ಎಂಬ ಭಾರತೀಯ ಮೂಲದ ಕೃಷ್ಣವರ್ಣದ ಸುಂದರಿ 'ಮಿಸ್ ಅಮೆರಿಕಾ' ಪಟ್ಟವನ್ನು ಅಲಂಕರಿಸಿದಾಗ ಹಲವು ಅಜ್ಞಾನಿ ಅಮೆರಿಕನ್ನರು 'ಅರಬ್ ಮೂಲದವಳು ಮಿಸ್ ಅಮೆರಿಕಾ ಆಗಿದ್ದು ಅಕ್ಷಮ್ಯ', 'ಈಕೆ ಮಿಸ್ ಅಮೆರಿಕಾ ಅಲ್ಲ, ಬದಲಾಗಿ ಮಿಸ್ ಅಲ್ ಕೈದಾ' ಎಂದೆಲ್ಲ ಕಿಡಿಕಾರಿದ್ದರು. ಅವರ ಈ ಜನಾಂಗೀಯ ನಿಂದನೆಯನ್ನು ನೋಡಿ ಕೆಲವು ಭಾರತೀಯರು ಆಘಾತಗೊಂಡಿದ್ದರು.

'ಆಕೆ ಬಿಳಿ ಮೈ ಬಣ್ಣ ಹೊಂದಿಲ್ಲ ಎಂಬ ಮಾತ್ರಕ್ಕೆ ಆಕೆಯನ್ನು ಹೀಗೆಲ್ಲ ನಿಂದಿಸುವುದೇ' ಎಂದು ಅಮೆರಿಕನ್ನರ ವಿರುದ್ಧ ಟೀಕಾಪ್ರಹಾರವನ್ನೇ ಮಾಡಿದ್ದರು. ಆದರೆ ವಾಸ್ತವವಾಗಿ ಮೈ ಬಣ್ಣದ ವಿಷಯಕ್ಕೆ ಬಂದಾಗ ಹೆಚ್ಚಿನ ಭಾರತೀಯರು ಆ ಅಜ್ಞಾನಿ ಅಮೆರಿಕನ್ನರಿಗಿಂತ ಹೇಗೆ ಭಿನ್ನರು? ಯಾಕೆಂದರೆ ನಮ್ಮ ಸಮಾಜದಲ್ಲಿ ಸೌಂದರ್ಯವನ್ನು ಬಿಳಿ ಚರ್ಮದೊಂದಿಗೆ ತಗುಲಿಹಾಕಿದ್ದೇವಲ್ಲವೇ?

ಭಾರತೀಯರ ವರ್ಣಭೇದದ ಬಗ್ಗೆ ಮಾಧವನ್‌ಕುಟ್ಟಿ ಪಿಳ್ಳೈ ಎಂಬುವವರು ಬರೆದಿರುವ ಲೇಖನದ ಹಲವು ಸಾಲುಗಳು ಹೀಗಿವೆ:

"ಅಮೆರಿಕನ್ನರಿಗೆ ಹೋಲಿಸಿದರೆ ಭಾರತೀಯರೇ ಹೆಚ್ಚು ಜನಾಂಗೀಯ ಭೇದಭಾವ ಮಾಡುವವರು. ಇತ್ತೀಚೆಗೆ ಸ್ವೀಡನ್ನಿನ ಇಬ್ಬರ ಅರ್ಥಶಾಸ್ತ್ರಜ್ಞರು ಮಾಡಿದ ಸಮೀಕ್ಷೆಯಲ್ಲಿ ಜಗತ್ತಿನಲ್ಲೇ ಅತಿ ಹೆಚ್ಚು ವರ್ಣಭೇದ ಮಾಡುವ ದೇಶಗಳ ಪಟ್ಟಿಯಲ್ಲಿ ಭಾರತ ಎರಡನೇ ಸ್ಥಾನ ಪಡೆದಿತ್ತು. ಯಾಕೆಂದರೆ ನಮ್ಮ ದೇಶದಲ್ಲಿ ಹೆಚ್ಚಿನ ಜನ ತಮ್ಮ ಅಕ್ಕಪಕ್ಕದ ಮನೆಗಳಲ್ಲಿ ಬೇರೆ ಧರ್ಮದವರು ವಾಸಿಸುವುದಿರಲಿ, ಬೇರೆ ಜಾತಿಯವರು ವಾಸಿಸುವುದನ್ನೂ ಸಹಿಸುವುದಿಲ್ಲ.

ಸಾವಿರಾರು ವರ್ಷಗಳ ಹಿಂದೆ ನಾವು ಕಾಡುಗಳಲ್ಲಿ ಮರದ ತುಂಡುಗಳು ಮತ್ತು ಕಂಚಿನ ಶಕ್ತಿಯಿಂದ ಅಣುಬಾಂಬ್ ಅನ್ನು ತಯಾರಿಸಲು ಯತ್ನಿಸುತ್ತಿದ್ದಾಗಲೇ ನಾವು ಜನಾಂಗೀಯ ದ್ವೇಷವನ್ನು ಹುಟ್ಟುಹಾಕಿದ್ದೆವು. ನಮ್ಮ ಅದೃಷ್ಟಕ್ಕೆ ಅದಕ್ಕೆ ಈಗ ಮೈ ಬಣ್ಣದ ಆಧಾರದ ಮೇಲೆ ಪ್ರತ್ಯೇಕತೆ ನೀತಿಯನ್ನು ಅನುಸರಿಸುವ 'ರೇಸಿಸಂ' ಎಂಬ ಪದವನ್ನು ಬಳಸಲಾಗುತ್ತಿದೆಯಷ್ಟೇ. ಮೈ ಬಣ್ಣದ ಜೊತೆಗೆ ಜಾತಿವ್ಯವಸ್ಥೆಯನ್ನು ಇಟ್ಟು ನೋಡಿದಾಗ ಐತಿಹಾಸಿಕವಾಗಿಯೂ ಭೇದಭಾವ ಮಾಡುವುದರಲ್ಲಿ ಭಾರತೀಯರು ಚಾಂಪಿಯನ್ಸ್ ಆಗಿದ್ದೆವು ಎಂದು ಅರ್ಥವಾಗುತ್ತದೆ. ಹಿಟ್ಲರ್ ಯಹೂದಿಯರನ್ನು ಗುಲಾಮರನ್ನಾಗಿಸಿದ್ದಿರಬಹುದು ಆದರೆ ಕಾಲನ ವೇಗದಲ್ಲಿ ಅದು ಕಣ್ಣರೆಪ್ಪೆ ಹೊಡೆದಷ್ಟು ಅಲ್ಪಾವಧಿಯ ದಮನವಾಗಿತ್ತು. ಯಾಕೆಂದರೆ ನಾವು ನಾಗರಿಕರಾಗಲಾರಂಭಿಸಿದ ಕಾಲದಿಂದಲೇ ಅಂತಹ ದಮನ ಧೋರಣೆಯನ್ನು ಅನುಸರಿಸುತ್ತಾ ಬಂದಿದ್ದೇವೆ. ಋಗ್ವೇದದಲ್ಲಿ ಆರ್ಯನ್ನರು ಹೇಗೆ ಕಪ್ಪು ಮೈ ಬಣ್ಣದ ಸ್ಥಳೀಯ ದಸ್ಯುಗಳನ್ನು ಸೋಲಿಸಿದರು ಎಂದು ದಾಖಲಿಸಲಾಗಿದೆ. ಮೂರು ಸಾವಿರ ವರ್ಷಗಳ ಹಿಂದೆ ಪ್ರಾರಂಭವಾದ ಈ 'ಮೈ ಬಣ್ಣದ ಗುಲಾಮಗಿರಿ'ಯನ್ನು ಇವತ್ತಿನತನಕ ಅನುಸರಿಸುತ್ತಾ ಬಂದಿದ್ದೇವೆ."

ಪಿಳ್ಳೈ ಅವರು ಹೇಳಿರುವುದನ್ನು ನಾವು ನಮ್ಮ ಸುತ್ತಲೂ ಪ್ರತಿ ದಿನ ಕಾಣುತ್ತಿರುತ್ತೇವೆ. ಉದಾಹರಣೆಗೆ ನಮ್ಮ ಸಿನಿಮಾ ನಟಿಯರಲ್ಲಿ ಅದೆಷ್ಟು ಜನ ಕಪ್ಪು ಮೈ ಬಣ್ಣವನ್ನು ಹೊಂದಿದ್ದಾರೆ? ನಮ್ಮ ಹತ್ತಾರು 'ಮಿಸ್ ಇಂಡಿಯಾ'ಗಳೆಲ್ಲರೂ ಯಾಕೆ ಬಿಳಿ ಚರ್ಮದವರಂತಿದ್ದಾರೆ? ವಧುವರರಿಗಾಗಿ ಕೊಡುವ ಜಾಹೀರಾತುಗಳಲ್ಲೂ ಯಾಕೆ 'ಗೋಧಿ ಬಣ್ಣ'ಕ್ಕೆ ಹೆಚ್ಚು ಒತ್ತುಕೊಡಲಾಗುತ್ತದೆ?

ಇಂತಹ ಪ್ರಶ್ನೆಗಳ ಹಿನ್ನೆಲೆಯಲ್ಲಿ ಲಕ್ಷ್ಮಿ ಚೌಧುರಿ ಎಂಬುವವರು ಬರೆದಿರುವ ಇನ್ನೊಂದು ಲೇಖನದಲ್ಲಿ ಹೀಗೆ ಹೇಳಿದ್ದಾರೆ:

"ನಿನಾ ದವುಲುರಿ ಪರವಾಗಿ ಭಾರತೀಯರು ಬಾಯಿ ಬಡಿದುಕೊಂಡಿರಬಹುದು. ಆದರೆ ವಾಸ್ತವವಾಗಿ ಆಕೆಯನ್ನು ನಮ್ಮವರು ಎಂದೂ ಸುಂದರಿ ಎಂದೋ, 'ಮಿಸ್ ಇಂಡಿಯಾ' ಪಟ್ಟಕ್ಕೆ ಅರ್ಹಳೆಂದೋ ಪರಿಗಣಿಸುವ ಸಾಧ್ಯತೆಯೇ ಇಲ್ಲ. ಅಕಸ್ಮಾತ್ತಾಗಿ ನಿನಾ ದವುಲುರಿ 'ವಿಶ್ವ ಸುಂದರಿ' ಪಟ್ಟವನ್ನು ಗೆದ್ದರೆ ನಮ್ಮವರು ಆಕೆಯನ್ನು ಭಾರತಕ್ಕೆ ಸ್ವಾಗತಿಸುತ್ತಾರೆ. ಹಾಗೆ ಸ್ವಾಗತಿಸುವಾಗ ಆಕೆಗೆ ಹಾರತುರಾಯಿಗಳೊಂದಿಗೆ ಬೇಕಾದ ಪರ್ಯಂತ ಬೇಕಾಗುವಷ್ಟು ಫೇರ್ ಅಂಡ್ ಲವ್ಲಿ ಕ್ರೀಮನ್ನೂ ಕೊಟ್ಟರೆ ಅಚ್ಚರಿ ಇಲ್ಲ!"

ಕೃಷ್ಣವರ್ಣದ ನಿನಾ ದವುಲುರಿಯನ್ನು ಸುಂದರಿ ಎಂದು ಪರಿಗಣಿಸದ ನಮ್ಮ ಸಮಾಜಕ್ಕೆ ಅಜ್ಞಾನಿ ಅಮೆರಿಕನ್ನರನ್ನು ಟೀಕಿಸುವ ನೈತಿಕತೆ ಇದೆಯೇ?! ■



ಆರತಿ ಎರಡನೆ ಮಗಳು ತಾರಾ....



ಆರತಿ ಮೊದಲ ಮಗಳು ಯಶಸ್ವಿನಿ



ಪತಿ ಚಂದ್ರಶೇಖರ್ ಮತ್ತು ಮಗಳು ಯಶಸ್ವಿನಿ ಜೊತೆ ಆರತಿ.... (ಚಿತ್ರಕೃಪೆ: ಕೆ.ಎಂ. ವೀರೇಶ್)

ನೀವರಿಯದ ಆರತಿ



ಮನೆ ಮಾರಿದ್ದು ಯಾಕೆ?

ಮಾಜಿ ನಟಿ ಆರತಿ ಬೆಂಗಳೂರಿನ ಜೆಪಿ ನಗರದ ಆರನೇ ಬಡಾವಣೆಯಲ್ಲಿರುವ ತಮ್ಮ ಮನೆಯನ್ನು ಮಾರಾಟಕ್ಕಿಟ್ಟಿದ್ದಾರಂತೆ ನಿಜವೇ?

ಜೆಪಿ ನಗರದಂತಹ ಪ್ರತಿಷ್ಠಿತ ಬಡಾವಣೆಯಲ್ಲಿ ಈಗ ಸತ್ತರೂ ಸೈಟು ಸಿಗದಿರುವ ಪರಿಸ್ಥಿತಿಯಲ್ಲಿ ಅವರು ಯಾಕೆ ಬರೋಬ್ಬರಿ 120x80 ಚದುರಡಿಯ ಈ ಆಸ್ತಿಯನ್ನು ಮಾರುತ್ತಿದ್ದಾರೆ? ಅವರಿಗೇನಾದರು ಆರ್ಥಿಕ ಬಿಕ್ಕಟ್ಟು ಎದುರಾಗಿದೆಯೇ? ಅಥವಾ ಶಾಶ್ವತವಾಗಿ ಅಮೆರಿಕೆಯಲ್ಲಿ ನೆಲೆಸಲು ಬೆಂಗಳೂರಿನ ಈ ಆಸ್ತಿಯ ಉಸಾಬರಿಯೇ ಬೇಡವೆಂದು ಮಾರುತ್ತಿದ್ದಾರೆಯೇ?

... ಆರತಿಯವರ ಮನೆ 'ಬೆಳ್ಳಿತೆರೆ'ಯ ಮುಂದೆ ಇತ್ತೀಚೆಗೆ "ಈ ಸೈಟಿಗೆ ಸಂಬಂಧಿಸಿದಂತೆ ಯಾವುದಾದರೂ ತಕರಾರಿದ್ದರೆ ನಮ್ಮ ಗಮನಕ್ಕೆ ತನ್ನಿ" ಎಂದು ವಕೀಲರ ಒಂದು ಬೋರ್ಡು ಬಿದ್ದಿದ್ದೇ ತಡ, ಬಹಳಷ್ಟು ಕನ್ನಡ ಚಿತ್ರ ಪ್ರೇಕ್ಷಕರಲ್ಲಿ ಇಂತಹ ಪ್ರಶ್ನೆಗಳು ಮೂಡಿದ್ದು ನಿಜ. ಆ ಪ್ರಶ್ನೆಗಳ ಹಿಂದೆ ಆರತಿ ಅವರ ಬಗೆಗಿನ ಕಾಳಜಿ, ಕುತೂಹಲ, ಅಭಿಮಾನ ಎಲ್ಲವೂ ಇದ್ದದ್ದೂ ಅಷ್ಟೇ ಸತ್ಯ.

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಾ ಹೋದ ಪತ್ರಿಕೆಗೆ ಆರತಿ ಅವರ ಈಗಿನ ಬದುಕಿನ ಬಗ್ಗೆ ಹಲವಾರು ಕುತೂಹಲಕರ ಅಂಶಗಳು ಗೊತ್ತಾದವು. ಅವುಗಳನ್ನು ಇಲ್ಲಿ ನಮ್ಮ ಓದುಗರಿಗೆ ನೀಡುತ್ತಿದ್ದೇವೆ.

1954ರಲ್ಲಿ ಮೈಸೂರಿನ ಹತ್ತಿರದ ಊರೊಂದರಲ್ಲಿ ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಆರತಿ ಅವರ ಬದುಕು ಹಲವಾರು ಆಕಸ್ಮಿಕಗಳಿಂದ ಕೂಡಿದೆ. ಅಂತಹ ಆಕಸ್ಮಿಕಗಳಲ್ಲಿ ಆಕೆ ನಟಿಯಾಗಿದ್ದೂ ಒಂದು. ಅವರಿಗೆ 15 ವರ್ಷ ವಯಸ್ಸಾಗಿದ್ದಾಗ (ಆಗತಾನೇ ಅವರು ಎಸ್‌ಎಸ್‌ಎಲ್‌ಸಿ ಮುಗಿಸಿದ್ದರು) ಅನಿರೀಕ್ಷಿತವಾಗಿ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಗೆಜ್ಜೆ ಪೂಜೆ' ಸಿನಿಮಾದಲ್ಲಿ ನಟಿಸುವ ಅವಕಾಶ ಅವರನ್ನು ಹುಡುಕಿಕೊಂಡು ಬಂದಿತ್ತು; ಅದೂ ತೆರೆಯ ಮೇಲೆ ಕೇವಲ ಐದು ನಿಮಿಷಗಳ ಕಾಲ ಕಾಣಿಸಿಕೊಳ್ಳುವ ಪಾತ್ರ. ಬೇರೆಯವರಾಗಿದ್ದರೆ ಅದೊಂದು ಸಿನಿಮಾದಲ್ಲಿ ನಟಿಸಿದ ನಂತರ ಜನರ ಮನಸ್ಸಿನಿಂದ ಕಣ್ಮರೆಯಾಗುತ್ತಿದ್ದರೇನೋ.

ಆದರೆ ಆರತಿಯವರಲ್ಲಿದ್ದ ಪ್ರತಿಭೆಯನ್ನು ಗುರುತಿಸಿದ ಕಣಗಾಲ್ ಅವರಿಗೆ ತಮ್ಮ ಮುಂದಿನ ಚಿತ್ರಗಳಲ್ಲೂ ಅವಕಾಶಗಳನ್ನು ಮಾಡಿಕೊಟ್ಟರು. ಪರಿಣಾಮವಾಗಿ ಆರತಿ 70 ಮತ್ತು 80ರ ದಶಕದಲ್ಲಿ ಕನ್ನಡ ಚಿತ್ರರಂಗದ ಪ್ರಮುಖ ನಟಿಯರಲ್ಲಿ ಒಬ್ಬರಾದರು. ರಾಜ್‌ಕುಮಾರ್ ಅವರಿಂದ ಹಿಡಿದು ಶಂಕರ್ ನಾಗ್ ತನಕ ಎಲ್ಲಾ ಪ್ರಮುಖ ನಟರೊಂದಿಗೆ ನಟಿಸಿದರು. ತಮ್ಮ ಪ್ರತಿಭೆಯಿಂದಾಗಿಯೇ ಹಲವಾರು ರಾಜ್ಯ ಪ್ರಶಸ್ತಿಗಳನ್ನು ಗೆದ್ದರು. ತೆಲುಗು ಮತ್ತು ತಮಿಳು ಚಿತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದರು.

ಕೊನೆಗೊಂದು ದಿನ ಪುಟ್ಟಣ್ಣ ಕಣಗಾಲ್ ಅವರನ್ನು ಮದುವೆಯಾಗಿ ಒಂದು ಹೆಣ್ಣು ಮಗುವಿಗೆ ತಾಯಿ ಆದರು. ಅಷ್ಟರಹೊತ್ತಿಗೆ ಹೊಸ ತಲೆಮಾರಿನ ಯುವತಿಯರು ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದ್ದರಿಂದ ಆರತಿ ಅವರಿಗೆ ನಟಿಸುವ ಅವಕಾಶಗಳು ಕಡಿಮೆ ಆಗಲಾರಂಭಿಸಿದ್ದವು. ಆಗ ಅವರ ಬದುಕಿನಲ್ಲಿ ಇನ್ನೊಂದು ಆಕಸ್ಮಿಕ ಘಟನೆ ಸಂಭವಿಸಿತು. ಆಗತಾನೇ ಕರ್ನಾಟಕದಲ್ಲಿ ಚಿಗುರೊಡೆಯುತ್ತಿದ್ದ ಭಾರತೀಯ ಜನತಾ ಪಕ್ಷಕ್ಕೆ ಗ್ಲಾಮರ್ ತರಬಲ್ಲ ವ್ಯಕ್ತಿಗಳ ಅಗತ್ಯತೆ ಇತ್ತು, ಆಗ ಬಿಜೆಪಿಯ ನಾಯಕರು ತಟ್ಟಿದ್ದು ಆರತಿಯವರ ಮನೆ ಬಾಗಿಲನ್ನು. ಆಗ ಬಿಜೆಪಿ ಸೇರಿದ ಆರತಿ ವಿಧಾನ ಪರಿಷತ್ತಿನ ಸದಸ್ಯೆಯೂ ಆದರು. ಹೀಗೆ ಚಿತ್ರರಂಗದಿಂದ ವಿಧಾನಸಭೆ ಪ್ರವೇಶಿಸಿದ ಎರಡನೆ ನಟಿ ಎಂಬ ಖ್ಯಾತಿ ಅವರದ್ದಾಗಿತ್ತು.

ಇತ್ತ ರಾಜಕೀಯದ ನಂಟು ಹೆಚ್ಚಾದಂತೆ ಅತ್ತ ಕಣಗಾಲ್ ಜೊತೆಗಿನ ಖಾಸಗಿ ಬದುಕಿನ ನಂಟು ಕಡಿಮೆ ಆಗುತ್ತಾ ಹೋಯಿತು. ಕೊನೆಗೊಂದು ದಿನ ಅವರಿಬ್ಬರ ದಾಂಪತ್ಯ ಜೀವನ ಮುರಿದು ಬಿತ್ತು.

ಆಗ ಕರ್ನಾಟಕದಲ್ಲಿ ಜನತಾ ಪಕ್ಷ ಅಧಿಕಾರದಲ್ಲಿದ್ದು ರಾಮಕೃಷ್ಣ ಹೆಗಡೆಯವರ ಸಂಪುಟದಲ್ಲಿ ಮಂತ್ರಿಯಾಗಿದ್ದ 'ಬ್ಯಾಚುಲರ್' ರಘುಪತಿ ಹಲವಾರು ಕಾರಣಗಳಿಗೆ ಮಿಂಚುತ್ತಿದ್ದರು. ಆಗ ಕೆಲಕಾಲ ರಘುಪತಿಯವರ ಹೆಸರಿನೊಂದಿಗೆ ಆರತಿ ಅವರ ಹೆಸರೂ ತಳುಕುಹಾಕಿಕೊಂಡಿತ್ತು, ಆಕಸ್ಮಿಕವಾಗಿ ರಾಜಕೀಯವನ್ನು ಪ್ರವೇಶಿಸಿದ್ದ ಆರತಿ ಅವರಿಗೆ ಅದರಿಂದ ಹೆಚ್ಚೇನು ಲಾಭವಾಗಲಿಲ್ಲ, ಹಾಗೆಯೇ ಆರತಿ ಅವರಿಂದಾಗಿ ಬಿಜೆಪಿಗೂ ಹೆಚ್ಚಿನ ಪ್ರಚಾರವೇನು ಸಿಗಲಿಲ್ಲ.

1987ರಲ್ಲಿ 'ಹಾಳಿಯ ಆಣೆ' ಎಂಬ ತಮ್ಮ 125ನೇ ಮತ್ತು ಕೊನೇ ಚಿತ್ರದಲ್ಲಿ ನಟಿಸಿದ ಆರತಿ ಆನಂತರ ಚಿತ್ರರಂಗದಿಂದ ಮಾತ್ರವಲ್ಲ, ಕರ್ನಾಟಕದಿಂದಲೇ ಮರೆಯಾದರು. ಅವರು ಎಲ್ಲಿಗೆ ಹೋದರು, ಏನು ಮಾಡುತ್ತಿದ್ದಾರೆ ಎಂಬೆಲ್ಲ ಪ್ರಶ್ನೆಗಳಿಗೆ ಯಾರಿಗೂ ಉತ್ತರಗಳು ಗೊತ್ತಿರಲಿಲ್ಲ.

ಅವರೀಗ ಅಮೆರಿಕದಲ್ಲಿದ್ದಾರಂತೆ, ಅಲ್ಲಿ ಓರ್ವ ಎನ್‌ಆರ್‌ಐನನ್ನು ಮದುವೆಯಾಗಿದ್ದಾರಂತೆ ಎಂದು ಅಲ್ಲಲ್ಲಿ ಮಾತುಗಳು ಕೇಳಿಬಂದಿದ್ದವು. ಹಲವು ವರ್ಷಗಳ ಹಿಂದೆ ಆರತಿ ಅವರ ಗಂಡ ಯಾವುದೋ ಹಗರಣದಲ್ಲಿ ಸಿಕ್ಕಿಹಾಕಿಕೊಂಡು ಜೈಲಿನ ಕಂಬಿ ಎಣಿಸುತ್ತಿದ್ದಾರಂತೆ ಎಂಬ ಕಟ್ಟುಕತೆಗಳೂ ಗಾಂಧಿನಗರದಲ್ಲಿ ಹಾರಾಡಿದ್ದವು. ಆದರೆ ಆತ ಯಾರು, ಅವರಿಬ್ಬರು ಅಮೆರಿಕದ ಯಾವ ನಗರದಲ್ಲಿ ವಾಸವಾಗಿದ್ದಾರೆ, ಆರತಿ ಅಲ್ಲಿ ಏನು ಮಾಡುತ್ತಿದ್ದಾರೆ ಎಂಬೆಲ್ಲ ವಿವರಗಳು ಯಾರಿಗೂ ಗೊತ್ತಿರಲಿಲ್ಲ.

ಆರತಿ ಅವರ ಪತಿಯ ಹೆಸರು ಚಂದ್ರಶೇಖರ್ ದೇಸಾಯಿ ಗೌಡರ್. ಮೂಲತಃ ಉತ್ತರ ಕರ್ನಾಟಕದವರಾದ ಚಂದ್ರಶೇಖರ್ ಲಿಂಗರಾಜು ಕಾಲೇಜಿನಲ್ಲಿ ಇಂಜಿನಿಯರ್ ಪದವಿ ಪಡೆದ ನಂತರ ಅಮೆರಿಕದ ಪ್ರತಿಷ್ಠಿತ ಸ್ಟಾನ್‌ಫರ್ಡ್ ಕಾಲೇಜಿನಲ್ಲಿ ಸೀಟು ಪಡೆದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು.

ಆಗ ಒಮ್ಮೆ ಅವರಿಗೆ ಆರ್ಥಿಕ ಬಿಕ್ಕಟ್ಟು ಎದುರಾಯಿತು. ಕಾಲೇಜಿನ ಫೀಸ್ ಕಟ್ಟಲು ಪರದಾಡುತ್ತಿದ್ದ ಚಂದ್ರಶೇಖರ್ ಅವರ ನೆರವಿಗೆ ಬಂದದ್ದು ಓರ್ವ ಅನಾಮಿಕ. ಆತ ಅವರಿಗೆ ಅಗತ್ಯವಾಗಿದ್ದ ಹಣವನ್ನು ಕೊಟ್ಟರಲ್ಲದೆ ಅದರೊಂದಿಗೆ ಒಂದು ಚೀಟಿಯನ್ನು ಇಟ್ಟಿದ್ದರಂತೆ. ಆ ಚೀಟಿಯಲ್ಲಿ "ನಾನು ಯಾರೆಂದು ನಿನಗೆ ಗೊತ್ತಾಗುವ ಅಗತ್ಯವಿಲ್ಲ, ಹಾಗೆಯೇ ಈ ಹಣವನ್ನು ನೀನು ನನಗೆ ವಾಪಸ್ ಮಾಡುವ ಅಗತ್ಯವೂ ಇಲ್ಲ, ಬದಲಾಗಿ ನೀನು ಓದು ಮುಗಿಸಿದನಂತರ ನೀನು ನಿನ್ನ ಕಾಲ ಮೇಲೆ ನಿಂತಾಗ ನೀನೂ ಈಗ ನೀನಿರುವ ಪರಿಸ್ಥಿತಿಯಲ್ಲಿರುವ ವಿದ್ಯಾರ್ಥಿಗಳಿಗೆ ನೆರವಾದರೆ ನೀನು ನನ್ನ ಹಣವನ್ನು ತೀರಿಸಿದ್ದಕ್ಕೆ ಸಮವಾಗುತ್ತದೆ" ಎಂದು ಬರೆದಿದ್ದರಂತೆ.

ಅದನ್ನು ಚಂದ್ರಶೇಖರ್ ಎಂದೂ ಮರೆಯಲಿಲ್ಲ.

ಆನಂತರ ತಮ್ಮ ಓದು ಮುಗಿಸಿದ ಚಂದ್ರಶೇಖರ್ ಇಂಜಿನಿಯರ್ ಆಗಿ ಕೆಲಸ ಪ್ರಾರಂಭಿಸಿದರಲ್ಲದೆ ಮದುವೆಯೂ ಆಗಿ ತಮ್ಮ ಬದುಕನ್ನು ಸಾಗಿಸಿದ್ದರು. ಆದರೆ ಅದೇನಾಯಿತೋ ಏನೋ ಅವರ ದಾಂಪತ್ಯ ಜೀವನದಲ್ಲಿ ಬಿರುಕು ಮೂಡಿ ತಮ್ಮ ಪತ್ನಿಯಿಂದ ವಿಚ್ಛೇದನ ಪಡೆದರು. ಅಷ್ಟು ಹೊತ್ತಿಗೆ ಅವರು ಒಂದು ಕಂಪನಿಯನ್ನೂ ಸ್ಥಾಪಿಸಿದ್ದರಿಂದ ಕೈಯಲ್ಲಿ ಹೇರಳವಾಗಿ ದುಡ್ಡು ಹರಿದಾಡುತ್ತಿತ್ತು, ಆಗ ಅವರು ಆರ್ಥಿಕ ಬಿಕ್ಕಟ್ಟಿನಲ್ಲಿರುವ ಜನರಿಗೆ ನೆರವಾಗುವ ಮೂಲಕ ಹಿಂದೊಮ್ಮೆ ತಮಗೆ ನೆರವಾಗಿದ್ದ ಅನಾಮಿಕನ ಕೆಲಸವನ್ನು ಮುಂದುವರೆಸಲು ಸಜ್ಜಾದರು.

ಚಂದ್ರಶೇಖರ್ ಅವರು ಅಮೆರಿಕದ ಕ್ಯಾಲಿಫೋರ್ನಿಯಾ ನಗರದಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ದಾಂಪತ್ಯ ಹಿಂಸೆಗೆ ಗುರಿಯಾಗಿರುವ ಮಹಿಳೆಯರಿಗೆ, ಬೀದಿ ಪಾಲಾಗಿರುವ ಮಕ್ಕಳಿಗೆ, ನಿರಾಶ್ರಿತ ವಲಸಿಗರಿಗೆ ಆರ್ಥಿಕ, ಮಾನಸಿಕ ಮತ್ತು ಕಾನೂನಿನ ನೆರವು ನೀಡಲು ಶುರು ಮಾಡಿದರು.

ಕಾಕತಾಳೀಯವೆಂಬಂತೆ ಅದೇ ಹೊತ್ತಿಗೆ ಆರತಿ ಕೂಡ ತಮ್ಮ ಮಗಳು ಯಶಸ್ವಿನಿಯೊಂದಿಗೆ ಅಮೆರಿಕಕ್ಕೆ ವಲಸೆ ಹೋಗಿದ್ದರು. ಅಲ್ಲಿಯತನಕದ ತಮ್ಮ ಬದುಕನ್ನು ತಳುಕುಬಳುಕಿನ ಚಿತ್ರಲೋಕದಲ್ಲಿ ಆರತಿ ಅವರು ಕಳೆದಿದ್ದರೂ ಅವರಲ್ಲಿ ಸಮಾಜದ ಒಳಿತಿಗಾಗಿ ಏನನ್ನಾದರೂ ಕೆಲಸ ಮಾಡಬೇಕೆಂಬ ಆಶೆ ಇತ್ತು, ಆಕಸ್ಮಿಕವಾಗಿ ಆರತಿ ಮತ್ತು ಚಂದ್ರಶೇಖರ್ ಭೇಟಿಯಾದಾಗ ಚಂದ್ರಶೇಖರ್ ತಮ್ಮ ಸಮಾಜ ಸೇವೆಯ ಬಗ್ಗೆ ಆರತಿಯವರಿಗೆ ಹೇಳಿದರು. ಮಾತ್ರವಲ್ಲ ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತೀರಾ ಎಂದೂ ಆರತಿಯವರನ್ನು ಕೇಳಿದರು. ಅದಕ್ಕೆ ಆರತಿ ಕೂಡಲೆ ಒಪ್ಪಿ ಕೆಲಸ ಮಾಡಲು ಶುರು ಮಾಡಿದರು.

ಸಮಾಜದಲ್ಲಿನ ಅಸಮಾನತೆ ಮತ್ತು ಅನ್ಯಾಯದ ವಿರುದ್ಧ ಇಬ್ಬರಲ್ಲೂ ಅಪಾರ ಕಾಳಜಿ ಇದ್ದಿದ್ದರಿಂದಲೋ ಏನೋ ಅವರಿಬ್ಬರು ಪರಸ್ಪರ ಹತ್ತಿರವಾಗಿ ಕೊನೆಗೊಂದು ದಿನ ಮದುವೆಯಾದರು. ಕೆಲವೇ ವರ್ಷಗಳಲ್ಲಿ ಅವರಿಬ್ಬರಿಗೆ ತಾರಾ ಎಂಬ ಮಗಳೂ ಜನಿಸಿದಳು. ಅವಳನ್ನು ಮನೆಯಲ್ಲಿ ಪ್ರೀತಿಯಿಂದ 'ಪ್ರೀತಿ' ಎಂದೇ ಎಲ್ಲರು ಕರೆಯುತ್ತಾರೆ.

ಹೀಗೆ ಅಮೆರಿಕದಲ್ಲಿರುವ ಬಡಬಗ್ಗರಿಗೆ ಸಹಾಯ ಮಾಡುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದ ಆರತಿ-ಚಂದ್ರಶೇಖರ್ ದಂಪತಿಗಳಿಗೆ ಕರ್ನಾಟಕದಲ್ಲಿರುವ ಬಡವರಿಗೂ ನೆರವಾಗಬೇಕೆನಿಸಿತು. ಆಗ ಅವರು ಹಲವಾರು ಬಾರಿ ಈ ರಾಜ್ಯಕ್ಕೆ ಬಂದು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿದ್ದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ನೆರವು ಕೊಡಲು ಪ್ರಾರಂಭಿಸಿದರು. ಆದರೆ ಅವರು ಎಂದೂ ತಮ್ಮ ಈ ಸಮಾಜ ಸೇವೆಗೆ ಪ್ರಚಾರವನ್ನು ಬಯಸಲೇ ಇಲ್ಲ. (ಇದೆಲ್ಲದರ ಮಧ್ಯೆ ಒಮ್ಮೆ ಇದ್ದಕ್ಕಿದ್ದಂತೆ ಮಗಳು ಯಶಸ್ವಿನಿಯೊಂದಿಗೆ ಬೆಂಗಳೂರಿನಲ್ಲಿ ಪ್ರತ್ಯಕ್ಷವಾದ ಆರತಿ 'ಮಿಠಾಯಿ ಮನೆ' ಎಂಬ ಮಕ್ಕಳ ಚಿತ್ರವನ್ನು ನಿರ್ದೇಶಿಸಿದರು. ಮದಿಯುವ ಮಕ್ಕಳನ್ನು ಕುರಿತ ಆ ಕತೆಯನ್ನು ಬರೆದದ್ದು ಮಗಳು ಯಶಸ್ವಿನಿಯಾದರೆ ಅದನ್ನು ನಿರ್ಮಿಸಿದ್ದು ಪತಿ ಚಂದ್ರಶೇಖರ್. ಆ ಚಿತ್ರಕ್ಕೆ



ಆರತಿಯ ಜೆ.ಪಿ.ನಗರದ ಮನೆ... 'ಬೆಳ್ಳಿತೆರೆ'



ದೀನಬಂಧು ಆಶ್ರಯಮದಲ್ಲಿ ಮಕ್ಕಳೊಂದಿಗೆ ಜಯದೇವ್

...ಮ ಮಕ್ಕಳ ಚಿತ್ರ ಎಂಬ ರಾಜ್ಯ ಪ್ರಶಸ್ತಿಯೂ ...ತ್ತು. ಅದಾದನಂತರ ಆರತಿ ಮತ್ತೊಮ್ಮೆ ...ಯಾಗಿದ್ದರು.

...ಮಾಜಸೇವೆಯಲ್ಲಿ ತೊಡಗಿದ್ದ ಆರತಿ ಮತ್ತು ...ೇಖರ್ ಅವರಿಗೆ ಒಮ್ಮೆ ಜಯದೇವ್ ಎಂಬುವವರ ...ಚಯವಾಯಿತು. ಜಯದೇವ್ ಅವರು ...ಾಜನಗರದಲ್ಲಿ ದೀನಬಂಧು ಆಶ್ರಮವನ್ನು ಸ್ಥಾಪಿಸಿ ಸುತ್ತಮುತ್ತಲಿನ ಬಡಮಕ್ಕಳಿಗೆ ಶಾಲೆಗಳನ್ನು ತೆರೆದು ...ವಾಗಿ ಶಿಕ್ಷಣವನ್ನು ನೀಡುತ್ತಿದ್ದಾರೆ. ಅಂದಹಾಗೆ ಈ ...ದೇವ್ ಬೇರೆ ಯಾರೂ ಅಲ್ಲ, ನಮ್ಮ ರಾಷ್ಟ್ರಕವಿಯಾದ ...ಶಿವರುದ್ರಪ್ಪನವರ ಹಿರಿಯ ಮಗ.

...ಜಯದೇವ್ ಅವರ ಸಮಾಜ ಸೇವೆಯನ್ನು ಆಧಾರವಾಗಿ ...ಆರತಿ-ಚಂದ್ರಶೇಖರ್ ದಂಪತಿಗಳು ಜಯದೇವ್ ...ಸಂಸ್ಥೆಗೆ ಹೆಚ್ಚು ಕಡಿಮೆ ಒಂದು ಕೋಟಿ 30 ಲಕ್ಷ ...ಯಿಗಳನ್ನು ದೇಣಿಗೆಯಾಗಿ ಕೊಟ್ಟಿದ್ದಾರೆ. ಆ ಹಣದ ... ಪ್ರತಿ ವರ್ಷ ಸಿಗುವ ಒಂಭತ್ತು ಲಕ್ಷ ...ಯಿಗಳನ್ನು ಬಡ ಆದರೆ ಪ್ರತಿಭಾವಂತ ಗ್ರಾಮೀಣ ...ಗೆ ಸ್ಕಾಲರ್‌ಶಿಪ್ ಆಗಿ ನೀಡಲಾಗುತ್ತಿದೆ. ಅಷ್ಟೇ ...ನ ಬಂಧು ಆಶ್ರಮದಲ್ಲಿ ಹಲವಾರು ಕಟ್ಟಡಗಳನ್ನು ...ಸಲೂ ಅವರಿಬ್ಬರು ಸಾಕಷ್ಟು ಹಣವನ್ನು ದಾನ ...ದ್ದಾರೆ.

...ದರೆ ಆರತಿ ಅವರನ್ನು ಯಾವ ವೈಯಕ್ತಿಕ ಸಂಕಟವೂ ...ಲ್ಲ, ಆರ್ಥಿಕ ಬಿಕ್ಕಟ್ಟೂ ಎದುರಾಗಿಲ್ಲ. ಆದರೂ ಅವರು ತಮ್ಮ ಜೆಪಿ ನಗರದ ಮನೆಯನ್ನು ...ಟ್ಟಿದ್ದಾರೆ?

...ದಕ್ಕೆ ಉತ್ತರ ತುಂಬಾ ಸರಳವಾಗಿದೆ. ಆರತಿ ಅವರ ...ನೆ ಮಗಳು ಯಶಸ್ವಿನಿ ಈಗ ಮದುವೆಯಾಗಿ ...ಹೆಯಲ್ಲಿ ಸೆಟಲ್ ಆಗಿದ್ದಾಳೆ. ಹಾಗೆಯೇ ಅವರ ಮಗಳು ತಾರಾ ಈಗ ಪ್ರತಿಷ್ಠಿತ ಆಕ್ಸ್‌ಫರ್ಡ್ ...ವ್ಯಾಲಯದಲ್ಲಿ ಓದುತ್ತಿರುವುದರಿಂದ ಆಕೆಯೂ



ಹಾಸ್ಟೆಲ್‌ನಲ್ಲಿ ತಂಗಿದ್ದಾಳೆ. ಈಗ ಆರತಿ ಮತ್ತು ...ಖರ್ ಅವರು ಹಲವು ತಿಂಗಳು ಅಮೆರಿಕಾದಲ್ಲೂ ಸಮಯವನ್ನು ಬೆಂಗಳೂರಿನಲ್ಲೂ ಕಳೆಯಲು ...ಮಾಡಿದ್ದಾರೆ. ಅಷ್ಟೇ ಮುಖ್ಯವಾಗಿ ಅವರು ಮೈಸೂರು ...ರುವ ಈಗಲ್‌ಟನ್ ಎಂಬಲ್ಲಿ ಒಂದು ಐಶಾರಾಮಿ ...ಮನ್ನು ಖರೀದಿಸಿದ್ದಾರೆ. ಅದಕ್ಕೆ ಮುಖ್ಯ ಕಾರಣ ...ಖರ್ ಅವರು ಗಾಲ್ಫ್ ಕ್ರೀಡೆಯಲ್ಲಿ ಅಪಾರ ಆಸಕ್ತಿ ...ದ್ದು ಈಗಲ್‌ಟನ್ ಪಕ್ಕದಲ್ಲೇ ಒಂದು ಗಾಲ್ಫ್ ... ಇರುವುದು.

...ಜತೆಗೆ ಆರತಿ ಅವರು ಕಳೆದ 15 ವರ್ಷಗಳಿಂದ ಜೆಪಿ ನಗರದ ಮನೆಯನ್ನು ಖಾಲಿ ಇಟ್ಟಿದ್ದರು. ಅದರ ಎದುರೇ ಅಂಡರ್‌ಪಾಸ್ ಹಾದು ...ವುದರಿಂದ ಮತ್ತು ಸುತ್ತಮುತ್ತಲು ಕಮರ್ಷಿಯಲ್ ...ಗಳು ತಲೆ ಎತ್ತಿರುವುದರಿಂದ ಆ ಮನೆಯಲ್ಲಿ ...ಮುಂದ ಒಂದು ಕುಟುಂಬ ವಾಸ ಮಾಡುವುದು ...ತ್ತದೆ.

... ಕಾರಣಕ್ಕೇ ಆರತಿ ಆ ಮನೆಯನ್ನು ಮಾರುವ ...ಕ್ಕೆ ಬಂದಿದ್ದಾರಷ್ಟೇ.

...ದಹಾಗೆ, ಆರತಿ ಮತ್ತು ಚಂದ್ರಶೇಖರ್ ಅವರು ...ದಾರಿ ಮನಸ್ಸಿನವರೆಂದರೆ ಮನೆಯನ್ನು ಮಾರುವ ...ಅದರಲ್ಲಿರುವ ಯಾವ ವಸ್ತುಗಳನ್ನು ಬೇಕಾದರೂ ...ಧು ಆಶ್ರಮಕ್ಕೆ ಅಗತ್ಯವಾಗಿದ್ದಲ್ಲಿ ತೆಗೆದುಕೊಂಡು ...ಂದು ಜಯದೇವ್ ಅವರಿಗೆ ಸೂಚಿಸಿದ್ದಾರೆ. ... ತಮ್ಮಲ್ಲಿರುವ ಮಕ್ಕಳ ಪುಸ್ತಕಗಳನ್ನೂ ದಾನ ... ಮುಂದಾಗಿದ್ದಾರೆ.

...ತಿ ಎಂಬ ಸಿನಿಮಾ ತಾರೆ ತನ್ನ ಜೀವನದಲ್ಲಿ ...ಕಷ್ಟನಷ್ಟಗಳನ್ನು, ಸವಾಲುಗಳನ್ನು, ಸಂತೋಷ ...ಗಳನ್ನು ಅನುಭವಿಸಿ ಈಗ ತನ್ನ ಸಾಮಾಜಿಕ ...ಂದಾಗಿ ರಾಜ್ಯದ ಹಲವಾರು ಪ್ರತಿಭಾವಂತ ಬಡ ...ದುಕಿನಲ್ಲಿ ನಿಜವಾದ ನಕ್ಷತ್ರವಾಗಿ ಮಿನುಗುತ್ತಿದ್ದಾರೆ ...ತ್ಪಡೆಯಬಹುದೇ.

...ದಿಯ, ಸಾರ್ಥಕ ಬದುಕು ಸಾಗಿಸುತ್ತಿರುವ ಆರತಿ ...ವರ ಪತಿ ಚಂದ್ರಶೇಖರ್ ದೇಸಾಯಿಗೌಡರ್ ...ರಿಬ್ಬರಿಗೂ ಅಭಿನಂದನೆಗಳು.

● ಗೌರಿ

ರಾಜ್ಯದ ಹಿಂದೂ ಟೆರರಿಸ್ಟ್

ಜಯಪ್ರಕಾಶ್‌ಗಾಗಿ ಪೊಲೀಸರ ಬೇಟೆ

ಕರ್ನಾಟಕದ ಹಿಂದೂ ಕೋಮುವಾದಿ ಸಂಘಟನೆಗಳು ಭಯೋತ್ಪಾದಕ ಚಟುವಟಿಕೆಗಳಲ್ಲೂ ಇರುವುದು ಈಗ ದಾಖಲೆ ಸಮೇತ ಮತ್ತೊಮ್ಮೆ ಬಯಲಿಗೆ ಬಂದಿದೆ.

ಈ ಸಮಾಜದ್ರೋಹಿಗಳ ಗುಂಪು ಕೇವಲ ಹಿಂದೂ-ಮುಸ್ಲಿಂ ಗಲಾಟೆಗೆ ಪ್ರಚೋದನೆ ನೀಡುವ ಕೆಲಸ ಮಾಡುತ್ತಾರೆ ಎಂದು ಭಾವಿಸಿದ್ದವರೇ ಬೆದರುವಂತೆ ಬಾಂಬ್ ಸ್ಫೋಟದ ಪ್ರಕರಣ ಒಂದರಲ್ಲಿ ಈಗ ಕರಾವಳಿಯ ಜಯಪ್ರಕಾಶ್ ಎಂಬುವನಿಗಾಗಿ ರಾಷ್ಟ್ರೀಯ ತನಿಖಾ ದಳದವರು ತಲಾಶ್ ಆರಂಭಿಸಿದ್ದಾರೆ.

ಜೀನ್ಸ್ ಪ್ಯಾಂಟ್ ಹಾಕುವ ಹುಡುಗಿಯರಿಗೆ ಹೊಡೆಯುವ, ಪ್ರೇಮಿಗಳ ದಿನಾಚರಣೆಗೆ ಅಡ್ಡಿ ಮಾಡುವ ಕೃತ್ಯಗಳನ್ನು ದಾಟಿ ಬಾಂಬ್ ಸ್ಫೋಟಗಳತನಕ ಹಬ್ಬಿಕೊಂಡಿರುವ ಹಿಂದೂ ಭಯೋತ್ಪಾದಕರ ಜಾಲದ ಬಗ್ಗೆ ಕನ್ನಡದ ಟಿವಿ ಚಾನಲ್ಲುಗಳು ಹಾಗೂ ಪ್ರಮುಖ ದಿನಪತ್ರಿಕೆಗಳು ಎಂದಿನಂತೆ ಸುದ್ದಿ ಮಾಡಲಿಲ್ಲ.

ಆದರೆ ಕರಾವಳಿಯಲ್ಲೀಗ ಇದೇ ದೊಡ್ಡ ಸುದ್ದಿಯಾಗಿದೆ. 2006 ಹಾಗೂ 2008ರಲ್ಲಿ ನಡೆದ ಮಾಲೇಗಾಂವ್ ಬಾಂಬ್ ಸ್ಫೋಟದ ಪ್ರಕರಣಕ್ಕೆ ಸಂಬಂಧಿಸಿರುವ ಘಟನೆ ಇದು.

ಸ್ವಾಮಿ ಅಸೀಮಾನಂದ, ಕರ್ನಲ್ ಪುರೋಹಿತ, ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಮುಂತಾದ ಹಿಂದೂ ಟೆರರಿಸ್ಟರು ಇಂಡಿಯಾ ದೇಶದ ನಾನಾ ಭಾಗಗಳಲ್ಲಿ 2006ರಿಂದಲೂ ಬಾಂಬ್ ಸ್ಫೋಟಿಸುತ್ತಾ ನೂರಾರು ಅಮಾಯಕರ ಸಾವಿಗೆ ಕಾರಣವಾಗಿದ್ದಲ್ಲದೇ ಈ ದುಷ್ಕೃತ್ಯಗಳ ಆರೋಪವು ಮುಸ್ಲಿಂರ ಮೇಲೆ ಬರುವಂತೆಯೂ ಸಂಚು ರೂಪಿಸಿದ್ದರು.

ಜಯಪ್ರಕಾಶ್ ಯಾನೆ ಜಯಣ್ಣ ಈ ಗುಂಪಿನ ಸಕ್ರಿಯ ಸದಸ್ಯನಾಗಿದ್ದ ಇವನು ಪುತ್ತೂರಿನ ಕಡಬ ಗ್ರಾಮದವನು!

ಹಿಂದೂ ಸಂಘದೊಂದಿಗೆ ಜಯಪ್ರಕಾಶ್ ನಂಟು

ಜಯಪ್ರಕಾಶ್‌ಗೆ ಈಗ ಅಂದಾಜು ನಲವತ್ತೆರಡರ ವಯಸ್ಸು, ಪುತ್ತೂರಿನ ನೂಜಿಬಾಳ್ತಿಲ ಗ್ರಾಮದ ಕಟ್ಟತಡ್ಕ ಸೋಮರಾಜನ್ ಎಂಬುವರ ಮಗನೀತ. ಅಲ್ಲೇ ಹತ್ತಿರದ ನೆರಿಯಾ ಗ್ರಾಮದ ಅಣೆಯೂರಿನಲ್ಲಿರುವ ಷಣ್ಮುಖನ್ ಎಂಬುವರ ಅಕ್ಕನ ಮಗಳನ್ನು ಜಯಪ್ರಕಾಶ್ ಮದುವೆಯಾಗಿದ್ದ. ಈ ಷಣ್ಮುಖನ್ ಎಂಬಾತ ಹಿಂದೂ ಸನಾತನ ಸಂಸ್ಥೆಯ ಸಕ್ರಿಯ ಸದಸ್ಯನಾಗಿದ್ದು ಈ ನಿಗೂಢ ಸಂಘಟನೆಯ ಕೇಂದ್ರ ಸ್ಥಾನವೂ ಆತನ ಮನೆಯೇ ಆಗಿತ್ತು. ಷಣ್ಮುಖನ್‌ನ ಸಂಪರ್ಕ ಸಿಕ್ಕನಂತರ ಸನಾತನ ಸಂಸ್ಥೆಯಲ್ಲೇ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದ ಜಯಪ್ರಕಾಶ್ ಕೆಲತಿಂಗಳ ನಂತರ ಕಣ್ಮರೆಯಾಗಿದ್ದ. ಅವನಿಗೆ ಮುಂಬೈನಲ್ಲಿ ಕೆಲಸ ಸಿಕ್ಕಿದೆ ಎಂದು ಷಣ್ಮುಖನ್ ಹೇಳಿಕೊಂಡಿದ್ದ.

ಆದರೆ ಇತ್ತೀಚೆಗೆ ರಾಷ್ಟ್ರೀಯ ತನಿಖಾ ಸಂಸ್ಥೆಯವರು (NIA) ಜಯಪ್ರಕಾಶ್‌ನನ್ನು ಹುಡುಕಿಕೊಂಡು ಕಡಬಕ್ಕೆ ಬಂದಾಗ 2008ರ ಮಾಲೇಗಾಂವ್ ಬಾಂಬ್ ಸ್ಫೋಟದಲ್ಲಿ ಈ ಜಯಪ್ರಕಾಶ್‌ನ ಕೈವಾಡವಿದ್ದದ್ದು ಈಗ ಬೆಳಕಿಗೆ ಬಂದಿದೆ.

ಈಗ ಗೊತ್ತಾಗಿರುವ ಸಂಗತಿ ಏನೆಂದರೆ, ಈ ಜಯಪ್ರಕಾಶ್ ತನ್ನ ಸೋದರ ಸಂಬಂಧಿಗಳಾದ ವಿನಯ್ ಹಾಗೂ ಉದಯ್ ಎಂಬುವರೊಂದಿಗೆ ಗೋವಾದಲ್ಲಿ ಇದ್ದ ಎಂಬುದು.

ಈ ಉದಯ್-ವಿನಯ್ ಜೋಡಿ ಸಾಧ್ವಿ ಪ್ರಜ್ಞಾ ಸಿಂಗ್ ಜೊತೆ ಇದ್ದರು.

ಈ ಸಾಧ್ವಿಮಣಿಯು ಹಿಂದೂ ಟೆರರಿಸ್ಟ್ ಗುಂಪಿನಲ್ಲಿದ್ದಳು.


ಮಾಲೇಗಾಂವ್ ಬಾಂಬ್ ಸ್ಫೋಟ

2006ರ ಸೆಪ್ಟೆಂಬರ್ 8 ರಂದು ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಪವರ್ ಲೂಂಗಳ ನಗರ ಮಾಲೇಗಾಂವ್‌ನಲ್ಲಿ ಮುಸ್ಲಿಮರ ಸಬ್-ಎ-ಬಾರಾತ್ ದಿನದ ಆಚರಣೆಯ ಸಮಯದಲ್ಲಿ ಈ ಬಾಂಬ್ ಸ್ಫೋಟ ನಡೆದಿತ್ತು. ಇಪ್ಪತ್ತೇಳು ಜನರನ್ನು ಬಲಿ ತೆಗೆದುಕೊಂಡ ಈ ದುರ್ಘಟನೆಯ ಬಗ್ಗೆ ಮೊದಲು ತನಿಖೆ ಆರಂಭಿಸಿದ್ದ ಮಹಾರಾಷ್ಟ್ರದ ಪೊಲೀಸರ ತಂಡ ತಮ್ಮ ಹಳೆಯ ಅಭ್ಯಾಸದಂತೆ ಮುಸ್ಲಿಂ ಸಮುದಾಯದಲ್ಲಿ ಅಪರಾಧಿಗಳನ್ನು ಹುಡುಕಲು ಹೊರಟರು. ಅವರ ತನಿಖೆಗೆ ತಕ್ಷಣ ಯಶಸ್ಸು ಸಿಕ್ಕಿಬಿಟ್ಟಿತು. ಅಪರಾಧಿಗಳೂ ಸಿಕ್ಕಿಬಿದ್ದರು.

ನೂರುಲ್ ಹೂದಾ ಸಂಸ ಮೋಬಾ, ಶಬ್ಬೀರ್ ಅಹ್ಮದ್ ಮಸಿಯುಲ್ಲಾ, ರಾಯಿಸ್ ಅಹಮದ್ ರಜಬ್ ಅಲಿ ಮನ್ಸುರಿ, ಸಲ್ಮಾನ್ ಫಾರ್ಸಿ ಅಬ್ದುಲ್ ಲತೀಫ್, ಫರೋಕ್ ಇಕ್ಬಾಲ್ ಅಹಮದ್ ಮಗದುಮಿ, ಮೊಹಮದ್ ಅಲಿ ಆಲಂ ಶೇಖ್, ಆಸಿಫ್ ಖಾನ್, ಬಶೀರ ಖಾನ್, ಮಹಮದ್ ಶಾಹೀದ್, ಅಬ್ದುಲ್ ಮಜೀದ್ ಅನ್ಸಾರಿ ಹಾಗೂ ಅಬ್ರ್ ಅಹಮದ್ ಗುಲಾಂ ಅಹಮದ್ ಎಂಬ ಯುವಕರನ್ನು ಹಿಡಿದು ತನಿಖಾ ದಳದವರು ಅವರಿಗೆಲ್ಲಾ ಜಾಮೀನು ಸಿಗದಂತೆ ಮಾಡಿ ಜೈಲಿಗಟ್ಟಿದ್ದರು. ಈ ತನಿಖೆಯು ಆ ನಂತರ ಸಿಬಿಐ ಕೈಗೆ ಹೋಯಿತು. ಅಷ್ಟರಲ್ಲಿ ಈ ಶಂಕಿತ ಆರೋಪಿಗಳು ಜೈಲು ಸೇರಿ ಐದು ವರ್ಷಗಳಾಗಿತ್ತು. ಈ ಅವಧಿಯಲ್ಲೇ 2007ರಲ್ಲಿ ಹೈದರಾಬಾದ್‌ನ ಮೆಕ್ಕಾ ಮಸೀದಿ ಬಳಿ ಬಾಂಬ್ ಸ್ಫೋಟ ಘಟನೆ ಆಯಿತು. 2007ರ ಫೆಬ್ರವರಿಯಲ್ಲಿ ಸಂಜೋತಾ ಎಕ್ಸ್‌ಪ್ರೆಸ್ ರೈಲಿನಲ್ಲೂ ಸ್ಫೋಟಗಳಾಗಿ 68 ಜನ ಸತ್ತರು. 2007ರ ಅಕ್ಟೋಬರ್ 11ರಂದು ರಾಜಸ್ತಾನದ ಅಜ್ಮೀರ್ ದರ್ಗಾದಲ್ಲಿ ಬಾಂಬ್ ಸ್ಫೋಟಗಳಾಗಿ ಹಲವರು ಸತ್ತರು.

ಮಾಲೇಗಾಂವ್‌ನಲ್ಲಿ ಪುನಃ 2008ರ ಸೆಪ್ಟೆಂಬರ್ 29ರಂದು ಬಾಂಬ್ ಸ್ಫೋಟಗಳಾಗಿ ಏಳು ಜನ ಪ್ರಾಣ ಕಳೆದುಕೊಂಡರು. ಈ ಪ್ರತೀ ಸ್ಫೋಟ ಪ್ರಕರಣಗಳಲ್ಲೂ ಪೊಲೀಸರು ಮುಸ್ಲಿಂ ಯುವಕರನ್ನೇ ಹುಡುಕಿ ಹುಡುಕಿ ಆರೋಪಿಗಳೆಂದು ಬಿಂಬಿಸುತ್ತಾ ಹೋದರು.

ಆದರೆ ಇದಾದನಂತರ ಮಹಾರಾಷ್ಟ್ರದ ಸರ್ಕಾರ ತನಿಖೆಯನ್ನು ಸ್ಪೆಷಲ್ ಇನ್ವೆಸ್ಟಿಗೇಶನ್ ಟೀಮಿಗೆ ವರ್ಗಾಯಿಸಿತು. ಅದರ ನೇತೃತ್ವವನ್ನು ವಹಿಸಿಕೊಂಡಿದ್ದು ಹೇಮಂತ್ ಕರ್ಕರೆ ಎಂಬ ಧೀಮಂತ ಪೊಲೀಸ್ ಅಧಿಕಾರಿ. ಕರ್ಕರೆ ಅವರು ಮುಸಲ್ಮಾನರ ಬಗ್ಗೆ ಪೂರ್ವಾಗ್ರಹಪೀಡಿತರಾಗದೆ ನಿಷ್ಠುರವಾಗಿ ತನಿಖೆ ಮಾಡಿದ್ದರಿಂದ ಪ್ರಜ್ಞಾ ಸಿಂಗ್ ಎಂಬ ಢೋಂಗಿ ಸನ್ಯಾಸಿನಿಯನ್ನು, ಶ್ರೀಕಾಂತ್ ಪುರೋಹಿತ್ ಎಂಬ ಕಳ್ಳ ಸೈನ್ಯಾಧಿಕಾರಿಯನ್ನು ಹಾಗು ಇತರೆ ಹಿಂದೂತ್ವವಾದಿ ಭಯೋತ್ಪಾದಕರನ್ನು ಬಂಧಿಸಿದ್ದರು. ಆ ಮೂಲಕ ಈ



ಸ್ಫೋಟಗಳ ಹಿಂದಿದ್ದ ವ್ಯಕ್ತಿಗಳ ಮತ್ತು ಸಂಘಟನೆಗಳ ನಿಜ ಬಣ್ಣ ಬಯಲು ಮಾಡಿದ್ದರು.

ದುರದೃಷ್ಟವಶಾತ್ ಇದಾದ ಕಲವು ಸಮಯದ ನಂತರ ಮುಂಬೈ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಕರ್ಕರೆ ಅವರು ಸಾವನ್ನಪ್ಪಿದರು.

ಆದರೂ ತನಿಖೆಯನ್ನು ಮುಂದುವರೆಸಿದ್ದ ಎಸ್‌ಐಟಿ ತಂಡಕ್ಕೆ 2011ರ ಜನವರಿ 8 ರಂದು ಜತೀನ್ ಚಟರ್ಜಿ ಅಲಿಯಾಸ್ ಸ್ವಾಮಿ ಅಸೀಮಾನಂದ ಎಂಬುವವನು ಸಿಕ್ಕಿಬಿದ್ದ. ಆತ ನ್ಯಾಯಾಲಯದ ಮುಂದೆ ತಪ್ಪೊಪ್ಪಿಗೆ ಹೇಳಿಕೆ ನೀಡುತ್ತಾ, ಮಾಲೇಗಾಂವ್, ಅಜ್ಮೀರ್ ದರ್ಗಾ, ಸಂಜೋತಾ ಎಕ್ಸ್‌ಪ್ರೆಸ್ ಹಾಗೂ ಮೆಕ್ಕಾ ಮಸೀದಿ ಸ್ಫೋಟಗಳನ್ನು ನಡೆಸಿದವರು 'ಅಭಿನವ ಭಾರತ' ಎಂಬ ಹಿಂದೂ ಟೆರರಿಸ್ಟ್ ಗ್ಯಾಂಗ್‌ನವರೆಂತಲೂ, ತಾನು ಆ ಗುಂಪಿನ ಸದಸ್ಯನೆಂದೂ ಒಪ್ಪಿಕೊಂಡ.


ಆಗ ತನಿಖೆಯ ಜಾಡು ಬದಲಾಯಿತು. ರಾಷ್ಟ್ರೀಯ ತನಿಖಾ ದಳ ಅಖಾಡಕ್ಕಿಳಿಯಿತು.

2008ರಲ್ಲಿ ನಡೆದ ಮುಂಬೈ ದಾಳಿಯ ನಂತರ ಭಾರತದ ಸಂಸತ್ತು ಒಂದು ಹೊಸ ಕಾಯ್ದೆ ರಚಿಸಿ National Investigative Agency ಯನ್ನು ಅಸ್ತಿತ್ವಕ್ಕೆ ತಂದಿತ್ತು. ದೇಶದ ಭದ್ರತೆಗೆ ಅಪಾಯ ತರುವ ಗುಂಪುಗಳ ಹಾಗೂ ವ್ಯಕ್ತಿಗಳ ಬಗ್ಗೆ ತನಿಖೆ ನಡೆಸುವ ವಿಶೇಷ ಜವಾಬ್ದಾರಿ ಹೊತ್ತಿದ್ದ NIA ಅಸೀಮಾನಂದನ ತಪ್ಪೊಪ್ಪಿಗೆಯ ಜಾಡು ಹಿಡಿದು ಇನ್ನೂ ಇತರರನ್ನು ಬಂಧಿಸಿತು. ಈಗ ಅದು ಕರ್ನಾಟಕದ ಹಿಂದೂ ಭಯೋತ್ಪಾದಕ ಜಯಪ್ರಕಾಶನಿಗೆ ಬೇಟೆ ಆಡುತ್ತಿದೆ.

ಈ ಎಲ್ಲಾ ಹಿಂದೂ ಪಾತಕಿಗಳು ಹಿಂದೂ ಕೋಮುವಾದಿ ದೇಶ ಕಟ್ಟುವ ನೀಚ ಉದ್ದೇಶವಿಟ್ಟುಕೊಂಡು ಹಾಗೂ ದೇಶಾದ್ಯಂತ ಮುಸ್ಲಿಮರ ವಿರುದ್ಧ ಜನರನ್ನು ಎತ್ತಿಕಟ್ಟುವ ದುರುದ್ದೇಶದೊಂದಿಗೆ ಈ ತರದ ದುಷ್ಕೃತ್ಯಗಳನ್ನು ನಡೆಸುತ್ತಿದ್ದರೆಂಬುದು ಈಗ ಸಾಬೀತಾಗಿದೆ.

ಇದಕ್ಕೆ ಪೂರಕವಾಗಿ ಸಾಕ್ಷಿಪುರಾವೆಗಳನ್ನು ಸಂಗ್ರಹಿಸಿದ NIA ಈ ಮೊದಲು ಅರೆಸ್ಟ್ ಆಗಿದ್ದ ಒಂಬತ್ತು ಮುಸ್ಲಿಂ ತರುಣರು ಶಂಕಿತ ಆರೋಪಿಗಳಲ್ಲವೆಂದು ಕೋರ್ಟ್‌ಗೆ ತಿಳಿಸಿದ ನಂತರ ಅವರೆಲ್ಲರ ಬಿಡುಗಡೆಯಾಯಿತು.

ನಂತರ ಈ ಕುರಿತಂತೆ NIA ತನಿಖೆಯು ಮುಂದುವರೆದಂತೆ ಹಿಂದೂ ಭಯೋತ್ಪಾದಕರ ಜಾಲದಲ್ಲಿ ಕರ್ನಾಟಕದ ಕರಾವಳಿ ಭಾಗದ ಕೆಲವರು ಸೇರಿಕೊಂಡಿರುವುದು ಪತ್ತೆಯಾಗಿದೆ. ಜಯಪ್ರಕಾಶ್, ಉದಯ್ ಹಾಗೂ ವಿನಯ್ ಇವರಲ್ಲಿ ಪ್ರಮುಖರಾಗಿದ್ದಾರೆ.



ಇವರೆಲ್ಲಾ ಕರಾವಳಿಯಲ್ಲಿ ಆರ್ಭಟಿಸುತ್ತಿದ್ದ ಹಿಂದೂ ಸನಾತನ ಸಂಸ್ಥೆಯ ಕಾರ್ಯಕರ್ತರಾಗಿದ್ದವರು.

ಜಯಪ್ರಕಾಶ್ ಈಗಲೂ ತಲೆಮರೆಸಿಕೊಂಡಿದ್ದಾನೆ. ಅವನು ಯಾವಾಗ ಸಿಕ್ಕಿಬೀಳುತ್ತಾನೆಂಬುದು ಕೇವಲ ಊಹೆಯ ಸಂಗತಿ. ಅದು ಒಂದೆಡೆ ಇರಲಿ,

ಆದರೆ

ಇಲ್ಲಿ ಕರಾವಳಿ ಪೊಲೀಸರ ಕಾರ್ಯದಕ್ಷತೆಯ ಬಗ್ಗೆಯೇ ಕೆಲವು ಅನುಮಾನಗಳು ಬರುವಂತಿದೆ.

ಉದಾಹರಣೆಗೆ ಬೆಳ್ತಂಗಡಿ, ಪುತ್ತೂರು, ಉಪ್ಪಿನಂಗಡಿ, ಮಂಗಳೂರು, ಹುಬ್ಬಳ್ಳಿ, ಬಾಗಲಕೋಟೆ, ಬೆಳಗಾಂಗಳಲ್ಲಿ ಕಳೆದ ಆರೆಂಟು ವರ್ಷಗಳಿಂದಲೂ ಹಿಂದೂ ಧರ್ಮ ರಕ್ಷಣೆಯ ಹೆಸರಿನಲ್ಲಿ ಅನೇಕ ಹಿಂಸಾಚಾರ, ಬಾಂಬ್ ಸ್ಫೋಟ, ಖಡ್ಗ ದೀಕ್ಷೆಯಂತಹ ಘಟನೆಗಳು ನಡೆಯುತ್ತಲೇ ಬಂದಿದ್ದರೂ ಕರ್ನಾಟಕ ಪೊಲೀಸರು ಅದರ ತೀವ್ರತೆ ಹಾಗೂ ಪರಿಣಾಮಗಳ ಬಗ್ಗೆ ನಿಗಾ ಇಟ್ಟರಲಿಲ್ಲ. 2011ರಲ್ಲೇ NIA ಮೂಲಕ ಮಾಲೇಗಾಂವ್ ಸ್ಫೋಟದಲ್ಲಿ ಪುತ್ತೂರಿನ ಜಯಪ್ರಕಾಶ ಭಾಗಿಯಾಗಿದ್ದಾನೆಂಬ ಮಾಹಿತಿ ಸಿಕ್ಕ ನಂತರವೂ ಕರಾವಳಿ ಪೊಲೀಸರು ಎಚ್ಚೆತ್ತುಕೊಳ್ಳಲಿಲ್ಲ. ಕೆಲವು ಮೂಲಗಳ ಪ್ರಕಾರ ಮಾಲೇಗಾಂವ್ ಬಾಂಬ್ ಸ್ಫೋಟದಲ್ಲಿ ಈ ಜಯಪ್ರಕಾಶ್ ಗಾಯಗೊಂಡು ಕೆಲದಿನ ಚಿಕಿತ್ಸೆಗಾಗಿ ಬೆಳ್ತಂಗಡಿಗೆ ಬಂದು ಉಳಿದುಕೊಂಡಿದ್ದ ಎನ್ನಲಾಗಿದೆ. ಆದರೆ ಪೊಲೀಸರು ಇವತ್ತಿಗೂ ಸಹ ಆಗ ಜಯಪ್ರಕಾಶ್‌ನಿಗೆ ಆಶ್ರಯವಿತ್ತರ್‍ಯಾರು, ಚಿಕಿತ್ಸೆ ನೀಡಿದವರ್‍ಯಾರೆಂದು ತನಿಖೆಯನ್ನೇ ಮಾಡುತ್ತಿಲ್ಲ. ಕರಾವಳಿಯ ಹಿಂದೂ ಸಂಘಟನೆಗಳ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟನನ್ನು ನೆಪಮಾತ್ರಕ್ಕೂ ಕರೆಸಿ ತನಿಖೆ ನಡೆಸಿಲ್ಲ. ಈ ಜಯಪ್ರಕಾಶನ ಪಾತಕ ಕೃತ್ಯ ಹೊರಬಿದ್ದ ನಂತರ ಅವನಿದ್ದ ಹಿಂದೂ ಸನಾತನ ಸಂಸ್ಥೆಯವರು ಈಗ ಬೋರ್ಡ್ ಬದಲಾಯಿಸಿಕೊಂಡು 'ಹಿಂದೂ ಜನಜಾಗೃತಿ ಸಮಿತಿ' ಎಂಬ ಹೊಸ ಹೆಸರಿನಲ್ಲಿ ಈಗಲೂ ಸಕ್ರಿಯರಾಗಿದ್ದಾರೆ.

ಉಜಿರೆಯ ಮೋಹನ್ ಗೌಡ ಎಂಬುವನು ಇದರ ನಾಯಕನಾಗಿದ್ದಾನೆ.

ಮುಸ್ಲಿಮರ ವಿರುದ್ಧ ದ್ವೇಷ ಕಾರುವ ಪ್ರಚಾರ ಹಾಗೂ ಹಿಂದೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಈ ಸಂಸ್ಥೆಯ ಪ್ರಚಾರಾಂದೋಲನವನ್ನು ಅದು ಕಾನೂನುಬಾಹಿರವಾಗಿದ್ದಾಗಲೂ ಕರಾವಳಿ ಪೊಲೀಸರು ಪ್ರಶ್ನಿಸುತ್ತಿಲ್ಲ.

ಈ ಸಂಸ್ಥೆಯ ವೆಬ್‌ಸೈಟ್ ಅಂತೂ ಕೋಮು ದ್ವೇಷ ಕಾರಿಕೊಳ್ಳುವ ವಿಷದ ಮಡಿಕೆಯಂತಿದ್ದರೂ ಕರ್ನಾಟಕದ ಸೈಬರ್ ಕ್ರೈಂ ಪೊಲೀಸರು ಗಮನಕ್ಕೇ ತಂದುಕೊಂಡಂತಿಲ್ಲ. ಈ ಗುಂಪಿನ ಕಾರ್ಯಚಟುವಟಿಕೆಗಳು ನಿಗೂಢವಾಗಿದ್ದು ಅವರ ಸಭೆಗಳೆಲ್ಲಾ ಈಗಲೂ ರಹಸ್ಯವಾಗಿಯೇ ನಡೆಯುತ್ತಿವೆ. ಅಪರಿಚಿತ ವ್ಯಕ್ತಿಗಳು ಇವರಲ್ಲಿಗೆ ಬಂದುಹೋಗುತ್ತಿರುವ ಬಗ್ಗೆ ಸುದ್ದಿಗಳಿವೆ.

ಕರ್ನಾಟಕ ಪೊಲೀಸರು ದೇಶರಕ್ಷಣೆಯ ಜವಾಬ್ದಾರಿಯನ್ನಷ್ಟೇ ಅಲ್ಲ, ಸರಳ ಕಾಯ್ದೆ ಕಾನೂನಿನ ಹೊಣೆಯನ್ನು ಮರೆತವರಂತೆ ವರ್ತಿಸುತ್ತಿರುವುದು ಆಶ್ಚರ್ಯವಾಗಿದೆ.

ಪುತ್ತೂರು, ಬೆಳ್ತಂಗಡಿ ಏರಿಯಾದಲ್ಲಿ ಓರ್ವ ಮಾಮೂಲಿ ಹಿಂದೂ ಸಂಘಟನೆಯ ಕಾರ್ಯಕರ್ತನಂತೆ ಓಡಾಡಿಕೊಂಡಿದ್ದ ಜಯಪ್ರಕಾಶ, ಉದಯ್ ಹಾಗೂ ವಿನಯ್ ಎಂಬುವರು ಅಭಿನವ ಭಾರತದಂತಹ ಹಿಂದೂ ಟೆರರಿಸ್ಟರ ಗುಂಪು ಸೇರುವತನಕ ಬೆಳೆದರೆಂದರೆ ಅದು ಆಕಸ್ಮಿಕವಿರಲಾರದು. ಕರ್ನಾಟಕದಲ್ಲೂ ಹರಡಿರಬಹುದಾದ ಹಿಂದೂ ಟೆರರಿಸಂ ನೆಟ್‌ವರ್ಕ್‌ನ ಒಂದು ಕೊಂಡಿಯಾಗಿಯೇ ಅವರಿಗೆ ದೇಶಾದ್ಯಂತ ಬಾಂಬ್ ಸ್ಫೋಟಿಸುವ ಸಂಚಿನ ಪಾತ್ರಧಾರಿಗಳಾಗಲು ಅವಕಾಶ ಸಿಕ್ಕಿರುವುದು ಸ್ಪಷ್ಟವಾಗಿದೆ.

ಕರ್ನಾಟಕ ಪೊಲೀಸರು ಈಗಲಾದರೂ ಈ ಜಯಪ್ರಕಾಶನೆಂಬುವನ ಹಿನ್ನೆಲೆ, ಹಿಂದೂ ಸಂಘಟನೆಗಳೊಂದಿಗಿನ ಒಡನಾಟ, ಕರಾವಳಿ ಪ್ರದೇಶದಲ್ಲಿ ಯಾರ್‍ಯಾರೊಂದಿಗೆ ಅವನ ಒಡನಾಟವಿತ್ತೆಂಬ ಬಗ್ಗೆ ಪ್ರತ್ಯೇಕ ತನಿಖೆ ನಡೆಸಬೇಕಿದೆ.

ಈ ಹಿಂದೂ ಟೆರರಿಸ್ಟರ ಗುಂಪು ಭಾರತದ ಉಪರಾಷ್ಟ್ರಪತಿ ಹಮೀದ್ ಅನ್ಸಾರಿಯವರ ಹತ್ಯೆಗೂ ಸಂಚು ರೂಪಿಸಿತ್ತೆಂದು NIA ಹೇಳಿದೆ.

ರಾಜ್ಯ ಪೊಲೀಸರು ಎಚ್ಚೆತ್ತುಕೊಳ್ಳಲು ಇದು ಸಾಲು.

● ಪಾರ್ವತೀಶ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗಣಗಳು, ಗಣಪತಿಗಳು ಮತ್ತು ಗೋತ್ರಗಳು

ಆರ್ಯರಾಗಲಿ, ಇತರ ಬುಡಕಟ್ಟುಗಳಾಗಲಿ, ಪ್ರಾರಂಭದಲ್ಲಿ ತಮಗೆ ತೀರಾ ಪರಿಚಿತವಾದಂತಹ, ನೇರವಾಗಿ ಸಂಪರ್ಕ ಇದ್ದಂತಹ ಪ್ರಕೃತಿಯನ್ನೇ ಲಕ್ಷ್ಯ ಕೊಟ್ಟು ತಮ್ಮ ಸಿದ್ಧಾಂತಗಳನ್ನಾಗಲಿ, ಕಾವ್ಯಗಳನ್ನಾಗಲಿ ಹೊಮ್ಮಿಸಿದವರು. ಆದರೆ ಅವರಿಗೆ ಅದು ಸಿದ್ಧಾಂತವೆಂದು ಕರೆಯುವುದಾಗಲಿ, ಕಾವ್ಯಗಳೆಂದು ಒಂದು ಪ್ರಕಾರಕ್ಕೆ ಹೆಸರಿಸುವುದಾಗಲಿ ಖಂಡಿತ ತಿಳಿದಿರಲಿಲ್ಲ. ಅದು ಹಾಗೆ, ತಂತಾನೇ ಓತಪ್ರೋತವಾಗಿ ಹರಿದಿದ್ದಿತು. ನಿತ್ಯ ಕಾಣುತ್ತಿದ್ದ ಪ್ರಕೃತಿಯ ಸತ್ಯಗಳನ್ನು ತಮ್ಮ ಭಯದಿಂದಲೋ, ಆನಂದದಿಂದಲೋ ಉಂಟಾಗುತ್ತಿದ್ದ ಅನುಭವಗಳನ್ನು ತಮಗೆ ತೋಚಿದ ರೀತಿಯಲ್ಲಿ ವ್ಯಕ್ತಪಡಿಸುತ್ತಿದ್ದರು. ಭೂಸ್ವಾಧೀನದ ಪರಿಕಲ್ಪನೆಯೂ ಇಲ್ಲದಿದ್ದಂತಹ ಸಮಯದಲ್ಲಿ ತಮ್ಮ ಸಿದ್ಧಾಂತಗಳಿಗೆ ಹೋರಾಡುವಂತಹ ವಿಷಯವೂ ಬಲುದೂರ. ಅವರೇನೇ ಹೋರಾಟಗಳನ್ನು ಮಾಡಿದ್ದರೂ, ಆಹಾರಕ್ಕಾಗಿ, ಆಹಾರ ಮತ್ತು ತಮ್ಮ ಜೀವನ ನಿರ್ವಹಣೆಗೆ ಅನುಕೂಲವಾಗುವಂತಹ ಪಶುಗಳಿಗಾಗಿ ಹೋರಾಡುತ್ತಿದ್ದರು. ಇದು ಆರ್ಯರಿಗಾದರೂ, ದ್ರಾವಿಡರಿಗಾದರೂ ಅಥವಾ ಇನ್ನಾವುದೇ ಬುಡಕಟ್ಟಿನವರಿಗಾದರೂ ಪ್ರಸ್ತುತವೇ. ಕಾಲಕ್ರಮೇಣ ಕೃಷಿ ಮಾಡುವುದನ್ನು ಕಂಡುಕೊಂಡ ಮೇಲೆ ಒಂದು ಕಡೆ ನೆಲೆ ನಿಲ್ಲುವುದು ಅನಿವಾರ್ಯವೂ, ಅಗತ್ಯವೂ ಆಯಿತು.

ಕೃಷಿಯೂ ಹೆಣ್ಣಿನ ಆವಿಷ್ಕಾರವೆಂಬುದು ನೆನಪಿರಲಿ.

ಬಸುರು, ಹೆರಿಗೆ, ಎಳೆಯ ಮಕ್ಕಳನ್ನು ಪಾಲನೆ ಮಾಡುವಂತಹ ತನ್ನ ಪ್ರಾಕೃತಿಕವಾದಂತಹ ವಿಷಯಗಳಿಗೆ ಅನಿವಾರ್ಯವಾಗಿ ಒಂದು ಕಡೆ ನಿಲ್ಲಲೇ ಬೇಕಾದಾಗ, ಹೆಣ್ಣು ಬೆಂಕಿಯಲ್ಲಿ ಆಹಾರವನ್ನು ಬೇಯಿಸುವುದಾಗಲಿ, ತಿಂದ ಹಣ್ಣಿನ ಬೀಜಗಳನ್ನು ಮಣ್ಣಿಗೆಸೆದು ಅವು ಮೊಳೆಯುವುದನ್ನೂ, ಬೆಳೆಯುವುದನ್ನೂ ಕಂಡುಕೊಂಡಂತಹ ಹೆಣ್ಣುಗಳು ಕೃಷಿಯನ್ನೂ ಆವಿಷ್ಕಾರ ಮಾಡಿದ್ದಾಳೆಂಬ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ. ಒಟ್ಟಿನಲ್ಲಿ ಪುರುಷ ಬೇಟೆಯಾಡುವಂತಹ ವಿಷಯಗಳಲ್ಲಿ ತನ್ನನ್ನು ತೊಡಗಿಸಿಕೊಂಡರೆ, ಹೆಣ್ಣು ಒಂದೆಡೆ ನೆಲೆನಿಲ್ಲುವ, ಬೆಂಕಿ ಮತ್ತು ನೀರನ್ನು ಉಪಯೋಗಿಸಿಕೊಂಡು ಅಡುಗೆ ಬೇಯಿಸಿ ಹಾಕುವ, ಕೃಷಿಯನ್ನು ಆವಿಷ್ಕಾರ ಮಾಡುವ, ಹುಟ್ಟಿದ ಮಕ್ಕಳನ್ನು ನೋಡಿಕೊಳ್ಳುವ ಅಗತ್ಯತೆ ಮತ್ತು ಅನಿವಾರ್ಯತೆಯಿಂದ ಕುಟುಂಬ ವ್ಯವಸ್ಥೆಯನ್ನು ನೋಡಿಕೊಳ್ಳುವ ಯಜಮಾನಿಯಾಗಿ ಹೊಮ್ಮಿದ್ದು ಆಶ್ಚರ್ಯವೇನಲ್ಲ. ಹೀಗೇ ಮಾತೃಪ್ರಧಾನ ಸಮಾಜದಿಂದಲೇ ವ್ಯಕ್ತಿಗಳು ಗುರುತಿಸಿಕೊಳ್ಳುವಂತಾಗಿದ್ದು. ಗಂಗೆಯ ಮಗ ಭೀಷ್ಮ ಗಾಂಗೇಯನಾಗುವುದು, ರಾಧೆಯ ಮಗ ಕರ್ಣ ರಾಧೇಯನಾಗುವುದು, ಕುಂತಿಯ ಮಕ್ಕಳು ಕೌಂತೇಯರಾಗುವುದು ಮಾತೃ ಪ್ರಧಾನ ಸಮಾಜವನ್ನೇ ಸೂಚಿಸುವುದು.

ತಮ್ಮ ಜೊತೆಗೆ ತಾಯಿಯನ್ನೂ, ಸ್ವಂತ ಬುದ್ಧಿಯ ಅರಿವು ಕೊನರಿ ತಾವು ಬೆಳೆದು ನಿಲ್ಲುವವರೆಗೂ ತಾಯಿಯನ್ನೂ, ತಾಯಿಯೊಂದಿಗೆ ತಮ್ಮ ಸುತ್ತಮುತ್ತಲಿನ ಪ್ರಕೃತಿಯನ್ನೂ ನೋಡುತ್ತಾ, ನಿಸರ್ಗದ ಒಡನಾಡಿಯಾಗಿದ್ದ ಗಂಡು ಮಕ್ಕಳಾಗಲಿ, ಹೆಣ್ಣು ಮಕ್ಕಳಾಗಲಿ, ಪ್ರಕೃತಿಯನ್ನು ಹೆಣ್ತನಕ್ಕೆ ಅಥವಾ ಪೊರೆಯುವ ತಾಯ್ತನಕ್ಕೆ ಸಮೀಕರಿಸಿದ್ದು ಏನೂ ಆಶ್ಚರ್ಯವಿಲ್ಲ. ಆ ವ್ಯಕ್ತಿಗಳ ಸಮೂಹವು ಮುಂದೆ ಗುಂಪುಗಳಾದಾಗ, ಆಯಾ ಗುಂಪುಗಳನ್ನು ಗುರುತಿಸಿಕೊಂಡಿದ್ದೂ ಅವರ ನೆಚ್ಚಿನ ಯಾವುದೋ ಒಂದು ಪ್ರಕೃತಿಯಲ್ಲಿರುವ ವಸ್ತು, ಪಶು ಅಥವಾ ಪಕ್ಷಿಗಳನ್ನು ಲಾಂಛನವಾಗಿಟ್ಟುಕೊಳ್ಳುವ ಮೂಲಕವೇ.

ಆರ್ಯರ ಮೂಲದ ಬ್ರಾಹ್ಮಣರಿಗಾಗಲಿ, ದ್ರಾವಿಡ ಅಥವಾ ಇನ್ನಿತರ ಬುಡುಕಟ್ಟುಗಳ ಮೂಲದ ಪಂಗಡಗಳಾಗಲಿ ಈ ಮೇಲ್ಕಂಡ ರೀತಿಯಲ್ಲಿಯೇ ಬಂದಿರುವುದರಿಂದ ಗಣಗಳ ಲಾಂಛನಗಳು ಪ್ರಾಣಿಗಳು, ವೃಕ್ಷಗಳು ಅಥವಾ ಪಕ್ಷಿಗಳೇ ಆದವು. ಬ್ರಾಹ್ಮಣ ಜಾತಿಯ ಸದಸ್ಯರ ಸಮುದಾಯಗಳೂ ಸಣ್ಣ ಭಾಗಗಳಾಗಿ ಗೋತ್ರ ಗಳಾಗಿದ್ದು ಇದೇ ಬಗೆಯ ಮೂಲಗಳಿಂದಲೇ. ಕಶ್ಯಪ ಗೋತ್ರದ ಉದಾಹರಣೆಯನ್ನು ಗಮನಿಸಿದರೆ, ಕಚ್ಛಪ ಅಂದರೆ ಆಮೆಯನ್ನು ಲಾಂಛನವಾಗಿಟ್ಟುಕೊಂಡಿದ್ದ ಪೂರ್ವಿಕರ ಮೂಲದಿಂದ ಬಂದಿರುವಂತಹದು. ಕೌಶಿಕ ಸೂತ್ರ (4.2)ದಲ್ಲಿ ಹೇಳುವಂತೆ, ಒಂದು ಮೂಲದಿಂದ (ಪ್ರಾಯಶಃ ರಕ್ತ ಸಂಬಂಧದ) ಬಂದಿರುವಂತಹ ವ್ಯಕ್ತಿಗಳ ಒಂದು ಸಮೂಹ. ಗೌತಮದ ಮೂಲ ಗೋ-ಲಾಂಛನದ್ದಾದರೆ, ಶುನಕವೆಂಬುದು ನಾಯಿ, ಮುದ್ಗಲವು ಒಂದು ಬಗೆಯ ಮೀನು, ಭಾರದ್ವಾಜ, ಶಾಂಡಿಲ್ಯ ಒಂದು ಬಗೆಯ ಪಕ್ಷಿಗಳಾದರೆ, ಕೌಶಿಕವು ಗೂಬೆ; ಈ ಬಗೆಯ ಉದಾಹರಣೆಗಳನ್ನು ಗಮನಿಸಿದರೆ, ಬ್ರಾಹ್ಮಣರೂ ಪಶು ಅಥವಾ ಪ್ರಕೃತಿಯ ಲಾಂಛನವುಳ್ಳ ಬುಡಕಟ್ಟುಗಳ ಸಮೂಹದಿಂದಲೇ ಬಂದವರೆಂದು ಸ್ಪಷ್ಟವಾಗುತ್ತದೆ. ಆಯಾ ಪಶು ಲಾಂಛನಗಳ ಮೂಲದಿಂದ ಬಂದಂತಹ ಋಷಿಗಳ ಹೆಸರುಗಳೂ ಮುಂದೆ ಗೋತ್ರಕ್ಕೆ ನಾಮಧೇಯವಾಯಿತು.

ಅಂತಹ ಸಮೂಹಗಳು ಗಣಗಳು ಎನಿಸಿಕೊಂಡವು. ಆ ಗಣಗಳ ಒಡೆಯರು ಯಾರಾದರೂ ಅವರೆಲ್ಲರೂ ಗಣಪತಿಗಳಾದರು. ಆರ್ಯರ ದೇವತೆಗಳೆಂದು ಕರೆಯಿಸಿಕೊಳ್ಳಲ್ಪಟ್ಟ ಗಣದ ಒಡೆಯ ಇಂದ್ರನೂ ಗಣಪತಿಯೇ, ಬೃಹಸ್ಪತಿಯೂ ಗಣಪತಿಯೇ. ನಿಷಾಧರ ಗಣದ ಒಡೆಯ ರುದ್ರನೂ ಗಣಪತಿಯೇ. ಎಷ್ಟೆಷ್ಟು ಗಣಗಳಿದ್ದವೋ ಅಷ್ಟೆಲ್ಲಾ ಗಣಪತಿಯರಿದ್ದರು. ಗಣಗಳು ಒಡೆದು ಸಣ್ಣಸಣ್ಣ ಗಣಗಳಾದ ಅವುಗಳ ನಾಯಕರು ಹೊಮ್ಮಿದಂತೆ ಗಣಪತಿಯರು ಹುಟ್ಟಿಕೊಂಡರು. ಬೇರೆ ಬೇರೆ ಗಣಗಳು ಸಂಘರ್ಷದ ಫಲವಾಗಿಯೋ, ಸಂಧಾನದ ಫಲವಾಗಿಯೂ ಒಂದು ದೊಡ್ಡ ಗಣವಾಗಿ ಹೊಮ್ಮಿದಾಗ ಮಹಾಗಣಪತಿಗಳೂ ಹೊಮ್ಮಿರುವ ಸಾಧ್ಯತೆಗಳುಂಟು.

ಭಾರತದಲ್ಲಿ ರಾಜ್ಯ ವ್ಯವಸ್ಥೆಯು ನಿಂತದ್ದೇ ಬುಡಕಟ್ಟುಗಳ ಅವಶೇಷಗಳ ಮೇಲೆ. ಆಗ ಇದ್ದಂತಹ ಬುಡಕಟ್ಟುಗಳ ಬಣಗಳು ಗಣಗಳೆಂದು ಕರೆಯಿಸಿಕೊಳ್ಳುತ್ತಿದ್ದವು. ನಾಗರಿಕತೆ ಮತ್ತು ರಾಜ್ಯ ವ್ಯವಸ್ಥೆಯೂ ಎಲ್ಲೆಡೆಯೂ ಸಮವಾಗಿ ಬೆಳೆದು ಅಭಿವೃದ್ಧಿ ಹೊಂದಿರುವುದೇನಲ್ಲ, ಆರ್ಯರೆಂಬುವರು ಅವರೂ ಏನೂ ಒಮ್ಮೆಂದೊಮ್ಮೆಲೆ ಇತರರಿಗಿಂತ ಶಿಷ್ಟರೆಂಬಂತೆ ತೋರುವ ತಮ್ಮ ಪದ್ಧತಿಯನ್ನು ರೂಢಿಸಿಕೊಂಡೇ ಹುಟ್ಟಿಬಂದವರಲ್ಲ. ಅವರೂ ಆಗಿನ ಇತರ ಬುಡಕಟ್ಟುಗಳಿದ್ದಂತೆ ಇದ್ದವರೇ. ಅವರ ಸಂಪತ್ತನ್ನು ಪಶುಗಳಲ್ಲಿ ಅಳೆಯಲಾಗುತ್ತಿತ್ತು. ಈ ಪಶುಸಂಪತ್ತಿಗಾಗಿ ಅವರವರ ಬಣಗಳಲ್ಲಿ ಮತ್ತು ಇತರರ ಅಂದರೆ, ಆರ್ಯರಲ್ಲದ ಬಣಗಳೊಡನೆಯೂ ಹೋರಾಟಗಳಾಗುತ್ತಿದ್ದವು. ಇಂತಹ ಹೋರಾಟಗಳಲ್ಲಿ ಸೋಲು ಮತ್ತು ಗೆಲುವು ಎಲ್ಲವೂ ಇದ್ದಂತಹುದ್ದೇ.

ಭಾರತದಲ್ಲಿ ಕಾಲಕಾಲಕ್ಕೆ ಬಂದು ನೆಲೆಸಿದ ಜನಾಂಗಗಳು ಇಲ್ಲಿಯ ಮೂಲ ನಿವಾಸಿಗಳೊಂದಿಗೆ ಐತಿಹಾಸಿಕವಾಗಿ ಹೋರಾಡಿ ಗೆದ್ದರೂ ಕೊನೆಗೂ ಸಾಂಸ್ಕೃತಿಕವಾಗಿ ಅವರಿಗೇ ಸೋತು ಬಾಳಿದ ಸಂದರ್ಭದಲ್ಲಿ ಕೆಲವೊಂದು ಒಡಂಬಡಿಕೆ, ಹೊಂದಾಣಿಕೆ ಮಾಡಿಕೊಂಡಾಗ ಗೆದ್ದವರ ದೇವತೆಗಳಿಗೆ ಸೋತವರ ದೇವತೆಗಳು ವಾಹನಗಳಾದವು. (ಅಧೀನ ಎಂಬರ್ಥದಲ್ಲಿ) ಒಬ್ಬರ ವಾಹನ (ಗಣಗಳ ಲಾಂಛನ) ಇನ್ನೊಬ್ಬರ ವಾಹನವೂ ಆಯಿತು. ಒಬ್ಬರಿಗಿದ್ದಷ್ಟೇ ಭುಜಗಳು ಇನ್ನೊಬ್ಬರಿಗೂ ಆದವು. ವೈದಿಕ ದೇವತೆಗಳು ಹಿಂದೆ ಬಿದ್ದು ಪೌರಾಣಿಕ ವ್ಯಕ್ತಿತ್ವಗಳು ದೇವತ್ವವನ್ನು ಪಡೆದವು. ಅಲ್ಲಲ್ಲಿಯ ಪ್ರಾದೇಶಿಕ ದೇವರುಗಳು ಭಾರತೀಯ ಪ್ರಾಶಸ್ತ್ಯವನ್ನೂ ಪಡೆದರು. ಇಂದ್ರನಿಗೂ ಗೌಣನಾದ ಉಪೇಂದ್ರನು ವಿಷ್ಣುವಾದನು. ಸರಸ್ವತಿಯ ಮಯೂರವು ಸುಬ್ರಹ್ಮಣ್ಯನದಾಯಿತು. ದುರ್ಗೆಯ ಸಿಂಹವು ಕೃತಯುಗದ ಗಣಪತಿಯ ವಾಹನವೂ ಆಯಿತು. ದೇವರ ಸಹಸ್ರನಾಮಗಳಲ್ಲಿಯೂ ಹಲವಷ್ಟು ಸ್ವತಃ ಬೇರೆ ಬೇರೆ ದೇವತೆಗಳ ಹೆಸರುಗಳಾದವು. ಪ್ರತಿಯೊಂದಕ್ಕೂ ಒಂದೊಂದು ಕಥೆ, ಅದು ಬೆಳೆದು ಒಂದೊಂದು ಪುರಾಣ ಕಟ್ಟಿಕೊಂಡಿತು- ಎಂದು ಗೌರೀಶ ಕಾಯ್ಕಿಣಿಯವರು ತಮ್ಮ "ಗಣಪತಿ ಮತ್ತು ಮಾರುತಿ" ಎಂಬ ಒಂದು ಲೇಖನವೊಂದರಲ್ಲಿ ವಿವರಿಸುತ್ತಾ, ಗಣಪತಿಯೊಬ್ಬ ಕೃಷಿದೇವತೆಯಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಏಕದಂತ ಒಂದೇ ಹಲ್ಲಿನ ನೇಗಿಲನ್ನು ನೆನಪಿಸುತ್ತದೆ. ಭಾದ್ರಪದದ ಜಡಿಮಳೆಗೆ ಆಕಾಶ ಮೋಡ ಕವಿದಿರಬೇಕು. ಆಗ ನಿರಭ್ರ ಶುಭ್ರವಾಗಿ ಚಂದ್ರ ನಗುತ್ತಿದ್ದರೆ, ಅದು ಕೃಷಿದೇವತೆಗೆ ಹೇಗೆ ಸಹನವಾಗಬೇಕು ಎಂದು ಗೌರೀಶ ಕಾಯ್ಕಿಣಿಯವರು ಪ್ರಶ್ನಿಸುತ್ತಾರೆ. ಹಾಗೆಯೇ ಮುಂದುವರಿದು, "ಈತ ಗಣಪತಿ, ಈ ಗಣಗಳು ಯಾವುವು? ಸಂಸ್ಕೃತದಲ್ಲಿ ಧಾತುಗಳ ಗಣಗಳಿವೆ, ಛಂದಸ್ಸಿನ ಮಾತ್ರಾಗಣಗಳಿವೆ, ಮರುತ್ ಗಣಗಳಿವೆ, ಪ್ರಮಥಗಣಗಳಿವೆ. ಯಾವ ಗಣಗಳಿಗೆ ಈತ ಪತಿ? ಮೂಲತಃ ಪ್ರಾದೇಶಿಕ, ಜಾನಪದವಾದ ಕೃಷಿ ದೇವತೆಯನ್ನು ಬ್ರಾಹ್ಮಣೀಕರಣದ ಯುಗದಲ್ಲಿ ವೈದಿಕದೇವತೆಯನ್ನಾಗಿ ಪುನರ್ಘಟಿಸಲಾಗಿದೆ.

ವೈದಿಕವಾಗಿ ಗಣಪತಿಯವೆನ್ನುವ ವರ್ಣನೆಗಳಲ್ಲಿ ಆತ ಗಜಾನನನೆಂಬುದೇ ಇಲ್ಲ, ಒಂದೆಡೆಗೆ 'ಮಹಾಹಸ್ತೀ ದಕ್ಷಿಣೇನ' ಎಂಬ ಉಲ್ಲೇಖ ಬರುತ್ತದೆ. ಆದರೆ ಅಲ್ಲಿ ಅದರ ಅರ್ಥ ಬಲಬದಿಗೆ ಒಲಿದ ಸೊಂಡಿಲಿನ ಆನೆಯೆಂದು ಅಲ್ಲವೇ ಅಲ್ಲ, ಇದು ಇಂದ್ರನ ಹೊಗಳಿಕೆ. ಆತ ಮಹಾಹಸ್ತೀ ಅಂದರೆ ದೊಡ್ಡ ಹಸ್ತ ಉಳ್ಳವ, ದಕ್ಷಿಣೆ (ದಾನ) ನೀಡುವುದರಲ್ಲಿ, ಕನ್ನಡದಲ್ಲಿ 'ಕೊಡುಗೈ ದೊರೆ' ಎನ್ನುವಂತೆ. ಇಲ್ಲಿ ಬರುವ ಹಸ್ತೀ ಎಂಬುದನ್ನು ಕೈಯುಳ್ಳವನೆನ್ನುವ ಬದಲು ಸೊಂಡಿಲುಳ್ಳವನೆಂದು ಅರ್ಥಮಾಡಿಕೊಂಡು ಗಣಪತಿಯ ಗಜಮುಖಕ್ಕೆ ವೈದಿಕ ಆಧಾರ ಕಲ್ಪಿಸುವ ಪ್ರಯತ್ನವಾಗಿದೆ ಎಂದು ಗೌರೀಶ ಕಾಯ್ಕಿಣಿಯವರು ತಮ್ಮ ಉಪಪತ್ತಿಯಲ್ಲಿ (ಇಂಟರ್‌ಪ್ರಿಟೇಶನ್) ಹೇಳುತ್ತಾರೆ.


ಶ್ರೀ ಭಗವಾನ್ ದಾಸರು ತಮ್ಮ ಮಾನವಧರ್ಮ ಸಾರದಲ್ಲಿ "ಪ್ರಾಚೀನೇನಾರ್ಯವೈದಿಕ ಸಮಾಜೇನ ಪರಾಜಿತ ಬರ್ಬರ ನಿಷಾದ ಆದಿ ಜಾತೀಃ ಸ್ವಸಮಾಜವ್ಯವಸ್ಥಾಯಾಂ ಯಥಾ ಸ್ಥಾನಂ ನಿವೇಶಯಿತು, ಮೈತ್ರೀ ಬುದ್ಧ್ಯಾಂಚ ಸಾನ್ವಯಿತುಂ ತಾಸಾಂ ಕಾಶ್ಚಿದ್ಬಹು ಪೂಜಿತಾ ದೇವತಾಃ ತದರ್ಚನ ಪ್ರಕಾರಾಣಾಮಾಂಶಾಂಶ್ಚ ಕಾಂಶ್ಚಿತ್ ಯಥಾ ಶಕ್ಯಂ ಪರಿಷ್ಕೃತ್ಯಾನುಮೇನಿರೆ । ಆಧ್ಯಾತ್ಮಿಕೈ ರರ್ಥೈಶ್ಚಾಪಿ ತಾಸಾಂ ಜಾತೀನಾಂ ಕ್ರಮಶಃ ಉದ್ಬೋಧನಾಯ ಚೋತ್ಕರ್ಷಣಾಯ ಚ ತಾ ದೇವತಾಶ್ಚ ತಾನರ್ಚಪ್ರಕಾರಂಶ್ಚ ಯುಯುಜಿರೆ ।" ಎಂದು ಹೇಳಿರುವುದನ್ನು ಆಧರಿಸಿ, "ಪ್ರಾಚೀನ ಆರ್ಯ ವೈದಿಕ ಸಮಾಜವು ತಮ್ಮಿಂದ ಸೋತ ಬರ್ಬರ ಮ
ನಿಷಾದಾದಿಗಳ ಸಾಮಾಜಿಕ ಸ್ಥಿತಿಗಳನ್ನು ಯಥಾಸ್ಥಾನದಲ್ಲಿ
ಮತ್ತು ಸ್ನೇಹಬುದ್ಧಿಯಿಂದ ಅವರನ್ನು ಸಮಾಧಾನಪಡಿಸ
ಅವರಲ್ಲಿಯ ಬಹುಪೂಜಿತ ದೇವತೆಗಳನ್ನು ಮ
ಮುಖ್ಯವಾದ ಪೂಜಾಂಶಗಳನ್ನು ತಮ್ಮ ಶಕ್ತ್ಯಾನುಸಾ
ಪರಿಷ್ಕರಿಸಿ ಅವುಗಳನ್ನು ಒಪ್ಪಿಕೊಂಡರು. ಆ ಜಾತಿಗ
ಉದ್ಬೋಧನೆ ಮತ್ತು ಉತ್ಕರ್ಷಣಕ್ಕಾಗಿ ಆ ದೇವತೆಗಳಿಗ
ಹಾಗೂ ಪೂಜಾವಿಧಾನಗಳಿಗೂ ಆಧ್ಯಾತ್ಮಿಕ ಅರ್ಥವ
ಕಲ್ಪಿಸಿದರು. ಹಾಗಾಗಿ, ಆರ್ಯ ವೈದಿಕ ಸಮಾಜ
ಬುದ್ಧಿಪೂರ್ವಕವಾಗಿಯೇ ತಮ್ಮ ದೇವತೆಗಳ ಸಾಲಿನ
ಗಣಪತಿಯನ್ನು ಸೇರಿಸಿದರು, ಆದರೆ ಪ್ರಾರಂಭದ
ಆರ್ಯರು ಅನಾರ್ಯರ ಸಹವಾಸದಿಂದ ವಿನಾಯ
ರೂಪದಲ್ಲಿ ಗಣಪತಿಯನ್ನು ಬಲಾತ್ಕಾರವಾ
ಸೇರಿಸಿದರು. ಅನಂತರ ಅವನನ್ನು ಪರಿಷ್ಕರಿಸಬೇಕಾ
ಬಂದಿತೆಂಬುದು ಡಾ. ಸಂಪೂರ್ಣಾನಂ
ಅ. ಮರಿಬಸವಾರಾಧ್ಯರವರು ಅಭಿಪ್ರಾ
ಪಡುತ್ತಾರೆ. (ಗಣಪತಿ ತತ್ವ: ವಿಶ್ವವಾ
ಗಣೇಶ).


ಇವುಗಳಾದದ್ದು ಬಹುಕಾಲ
ನಂತರ. ಹಲವಾರು ಕಾಲಘಟ್ಟಗ
ಈ ಬೆಳವಣಿಗೆಗೆ ಸಾಕ್ಷಿಯಾಗಿ
ಆದಿರಲಿ, ಮತ್ತೆ ಈ ಮೊದ
ಪ್ರಾರಂಭಿಸಿದ ವಿಷಯಕ
ಮರಳೋಣ. ಆರ್ಯರೇ ಆಗ
ಇತರರೇ ಆಗಲಿ, ಪ್ರಕೃತಿಯ
ತಮ್ಮ ಅನುಭವವ
ಅಭಿವ್ಯಕ್ತಪಡಿಸುತ್ತಾ ಬಂದ
ಕವಿತ್ವಗಳಾದವು, ಸಿದ್ಧಾಂತಗಳಾದ
ಬರವಣಿಗೆ ಇಲ್ಲದ ಆ ಕಾಲಘಟ್ಟದಲ್ಲಿ ಬಾಯಿಂದಬಾ
ಹರಿಯುತ್ತಾ ಬಂದಂತೆ, ವ್ಯಕ್ತಿಗಳ ಅನುಭವದ ಬೆಳವಣಿ
ತಕ್ಕಂತೆ ಸಿದ್ಧಾಂತಗಳೂ ಬದಲಾಗುತ್ತಾ ಬಂದವು. ಅ
ಕೆಲವು ವಿಷಯಗಳನ್ನು ಈಗಿರುವ ವಸ್ತು ಸ್ಥಿತಿ, ಸಿದ್ಧಾಂತ
ಅವಲೋಕಿಸಿದರೆ ಆಶ್ಚರ್ಯವೆನಿಸುತ್ತದೆ. ಆಗಿನ ಆಯ
ವೈದಿಕರ ಅಭಿವ್ಯಕ್ತಿಯಲ್ಲಿ ಮೋಕ್ಷವೆಂಬುದೇ ಇರ
ಎಲ್ಲವೂ ಲೌಕಿಕವಾದ ಫಲಾಪೇಕ್ಷೆಗಳೇ ಆಗಿದ್ದ
ಅತಿಭೌತಿಕವಾದ ವಿಷಯಗಳಿಗೆ ಪ್ರಾಮುಖ್ಯತೆ ನೀಡ
ದೈನಂದಿನ ಸುಖಕ್ಕಾಗಿ, ಆಗಿನ ಸಮಯ ಮತ್ತು ಸಂದರ್
ಅನುಗುಣವಾಗಿ ಬೇಕಾದ ವಸ್ತುಗಳಿಗೆ, ಸವಲತ್ತುಗ
ಹಾತೊರೆಯುತ್ತಿದ್ದರು. ಅದನ್ನೇ ಬಯಸಿ ತ
ಪ್ರಾರ್ಥನೆಗಳಲ್ಲಿ ಹೇಳುತ್ತಿದ್ದರು. ಗಾಳಿ, ಬೆಳಕು, ನ
ಆಹಾರ ಇತ್ಯಾದಿಗಳಿಗೆ ತಮ್ಮ ಕಾಲ್ಪನಿಕ ಅಧಿಪತಿಗ
ರೂಪಿಸಿಕೊಂಡು ಅವರಲ್ಲಿ ಸದಾ ಲೌಕಿಕ ಕೋರಿಕೆಗ
ಮುಂದಿಡುತ್ತಿದ್ದರು, ಹಾಗೆಯೇ ಆಸೆ, ಅಚ್ಚರಿ, ಆ
ಮತ್ತು ಭಯಗಳ ಮೂಲದಿಂದಲೇ ದ್ರಾವಿಡರೇ ಮೊದ
ಅರಣ್ಯಕರೂ ತಮ್ಮ ಕಾಲ್ಪನಿಕ ಮೂರ್ತಿಗಳನ್ನು ರೂ
ಕೊಂಡು ಅವುಗಳನ್ನು ನಂಬುತ್ತಿದ್ದರು. ಆದರೆ, ಅ
ಪ್ರಾರ್ಥನೆಯೆಂಬುದು ಇರಲಿಲ್ಲ, ಬದಲಾಗಿ ಆದೇಶ
ತ್ತಿತ್ತು, ತಮಗೆ ಬೇಕಾದ ವಿಷಯವನ್ನು ಪ್ರಕೃತಿಗೆ ಆಜ್ಞಾ
ತ್ತಿದ್ದರು. ಅದು ಈಡೇರುವಂತೆ ಅಬ್ಬರದ ನಾಟಕ
ತ್ತಿದ್ದರು. ಮಾಂತ್ರಿಕತೆ ಮೂಲವಾಗಿರುವುದು ಇ
ಆಚರಣೆಗಳೇ ಎಂಬ ಜಿಜ್ಞಾಸೆಗಳಿವೆ.


ಏನೇ ಆಗಲಿ, ಪ್ರಕೃತಿ ಮೂಲದಿಂದ ಬಲು ಸರಳ
ಬಹು ಸಹಜವಾಗಿ ಬಂದಂತಹ ಸಿದ್ಧಾಂತಗಳು ಮ
ಜೀವನಕ್ಕೆ ನಿಕಟವಾಗಿದ್ದು, ದೈನಂದಿನ ಬದುಕಿಗೆ ಹತ್ತಿ
ದ್ದು, ಅತಿ ಭೌತಿಕವಾದಂತಹ ಪುರಾಣಗಳು
ಹುಟ್ಟಿಕೊಂಡು ಬಂದವು ಎಂಬುದು ಅತ್ಯಂತ ಆಶ್ಚ
ವಿಷಯ. ಸಹಜವಾದಂತಹ, ಸರಳವಾದಂತಹ ವಿಷಯ
ಮಹಾ ರಹಸ್ಯ ವಿಷಯಗಳೆಂಬಂತೆ ತೋರ್ಪಡಿ
ಬಹುದೊಡ್ಡ ಸಿದ್ಧಾಂತಗಳೆಂಬಂತೆ ಸಾಧಿಸುತ್ತಾ
ಮಾನುಷವಾದ ಅಭಿವ್ಯಕ್ತಿಯ ಹಿಂದೆ ಬಹು
ರಾಜಕೀಯ ಪ್ರೇರಣೆ ಮತ್ತು ಸ್ವಾರ್ಥಸಾಧನೆಗಳು ಇರು
ಆಶ್ಚರ್ಯವೇನೂ ಅಲ್ಲ, ಆಗಿನ ಒಂದು ಸಮುದಾ
ಅಥವಾ ಹಲವು ವರ್ಗಗಳ ಜೀವನ ಕ್ರಮ
ಪದ್ಧತಿಗಳನ್ನು, ಅನುಭವ ಮತ್ತು ಅನುಭಾವ ಸಿದ್ಧಾಂತ
ಉಲ್ಲೇಖಿಸಿದ ದಾಖಲೆಗಳಾದ ವೇದಗಳ ಹ
ಕೆಲವೊಮ್ಮೆ ವೈದಿಕ ಪದ್ಧತಿಗಳನ್ನು ಅಲ್ಲಗಳೆಯ
ಮುಕ್ತವಾದ ವಿಚಾರ, ವಿವೇಚನೆಗಳಿಂದ, ವ್ಯಕ್ತಿಯ
ಮತ್ತು ಹೊರಗಿನ ಅನುಭವ ಮತ್ತು ಅನುಭೂತಿ
ನಿಷ್ಪಕ್ಷಪಾತವಾಗಿ, ನಿರ್ವಂಚನೆಯಿಂದ ಜಿಜ್ಞಾಸೆ ಮಾ
ಬಂದ ಉಪನಿಷತ್ತುಗಳ ಕಾಲಗಳ ನಂತರ ಅಥವಾ
ಜೊತೆಜೊತೆಯಾಗಿಯೇ ಪುರಾಣಗಳು ಹೇಗೆ
ಬಂದವು ಎಂಬುದೇ ಒಂದು ಕುತೂಹಲಕರವಾದ
ಅದರಲ್ಲೂ

ಈ ಪುರಾಣಗಳಲ್ಲಿ ರಾಜಕೀಯ, ಸ್ವಜನ ಪ
ಸಿದ್ಧಾಂತಗಳ ವೈಭವೀಕರಣವಾಗಿದ್ದು ಇನ್ನೂ ಆಸಕ್ತಿ
ಪುರಾಣಗಳಲ್ಲಿ ಪಕ್ಷಪರ ರಾಜಕೀಯಗಳು ಹೇ
ಎಂಬುದನ್ನು ಮುಂದೆ ನೋಡೋಣ.

(ಮುಂದುವರೆಯು







ವಿವಾಹೋದ್ಯಮ

...ಂಡಹೆಂಡತಿ ಜೊತೆ ಕೂಡಿ ಬಾಳಬೇಕಾದರೆ ... ಹಣ, ಅಂತಸ್ತು ಆಸ್ತಿ ಇವಕ್ಕೆಲ್ಲ ಅಷ್ಟೊಂದು ಮಹತ್ವ ...ವಿಲ್ಲ. ಆದರೆ ಅವರೇನಾದರೂ ಬೇರೆ ... ಮಾಡಿದರೆ ಇದೇ ಹಣ, ಆಸ್ತಿ ಧುತ್ತೆಂದು ... ಬಂದು ನಿಲ್ಲುತ್ತವೆ. ಬಹಳಷ್ಟು ಸಂದರ್ಭಗಳಲ್ಲಿ ...ರಿಗೆ ನಿಜವಾಗಿಯೂ ಹಣದ ಅಗತ್ಯವಿರುತ್ತದೆ. ...ದೆ ಸಂಸಾರದ ಪಾಲನೆಗೆಂದು ಅವರು ತಮ್ಮ ಕೆಲಸಕ್ಕೆ ...ಜಾಮ ನೀಡಿರಬಹುದು. ಇಲ್ಲ ಮನೆ ನೋಡಿಕೊಳ್ಳಲು ... ಹೊರಗೆ ಕೆಲಸಕ್ಕೆ ಹೋಗದ ಹೆಣ್ಣುಮಗಳನ್ನು ...ವೆ ಆಗಿರಬಹುದು. ಅಂತಹ ಹೊತ್ತಿನಲ್ಲಿ ಸಂಸಾರಗಳು ...ಮುಬಿದ್ದರೆ, ಅಲ್ಲಿಯವರೆಗೂ ಗಂಡನ್ನನ್ನೇ ನಂಬಿಕೊಂಡು ...ಚಿಷ್ಟ ಹೆಂಗಸರು ಬೀದಿಪಾಲಾಗಬೇಕಾಗುತ್ತದೆ. ...ಂದಲೇ ಕಾನೂನಿನಲ್ಲಿ ನಿರ್ವಹಣಾ ವೆಚ್ಚ (...iintenance) ಹಾಗೂ ಪರಿಹಾರಧನ (...mpensation) ದ ಅವಕಾಶವನ್ನು ಕಲ್ಪಿಸಲಾಗಿದೆ. ... ಮನೆ, ಮಕ್ಕಳು ಎಂದು ತಮ್ಮ ಅರ್ಧ ಜೀವನವನ್ನೇ ...ಸ ಹೆಂಡತಿಗೆ ಅವಳ ಜೀವನೋಪಾಯಕ್ಕೆಂದು ಹಣ ...ವಾಗ ಗಂಡಸರು ಎಂತೆಂಥದೋ ದಾರಿ ...ಕೊಂಡು ಅದರಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಾರೆ. ... ನಾವು ದಿನನಿತ್ಯ ನೋಡುತ್ತಿರುವ ಹಾಗೂ ಎಲ್ಲ ... ಕಂಡುಬರುತ್ತಿರುವ ಸಂಗತಿಗಳು. ಆದರೆ ಇದಕ್ಕೆ ...ತ್ತವಾಗಿ ಇದರಿಂದ ಸಂಪೂರ್ಣವಾಗಿ ಭಿನ್ನವಾದ ಚಿತ್ರಣ ...ಷ್ಟು ಸಂದರ್ಭಗಳಲ್ಲಿ ಜನರೆದುರು ತಲುಪುವುದೇ ... ಅದೇನೆಂದರೆ ಕೇವಲ ಪರಿಹಾರ ಧನ ಹಾಗೂ ...ಗಿ ಮದುವೆ ಎಂಬ ವ್ಯವಸ್ಥೆಯನ್ನು ದಂಧೆ ಅಥವಾ ...ಗಿ ಬಳಸಿಕೊಳ್ಳುತ್ತಿರುವ ಹೆಂಗಸರ ಉದಾಹರಣೆಗಳು.

...ನಾನು ಆಗತಾನೆ ಡಿಗ್ರಿ ಮುಗಿಸಿ ನಮ್ಮ ಸೀನಿಯರ್ ...ರ್ ಆಫೀಸ್ ಸೇರಿದ್ದ ಹೊಸತರಲ್ಲಿ ಒಂದು ದಿನ ...ವೆಲ್ಲ ಸಹೋದ್ಯೋಗಿಗಳು ಕೋರ್ಟಿಗೆ ಹೋಗಲು ... ಉತ್ಸುಕತೆಯಿಂದ ತಯಾರಾಗುತ್ತಿದ್ದರು. 'ಯಾವ ... ಇದೆ ಇವತ್ತು' ಎಂದಾಗ 'ಅರೇ ನೀವು ಸುಮ್ಮನೇ ...ಕೋರ್ಟಿನಲ್ಲೇ ಹೇಳ್ತೀವಿ' ಎಂದು ಕರೆದುಕೊಂಡು ...ದರು. ಅವತ್ತು ಶಿವಶಂಕರ್ ಎಂಬ ವ್ಯಕ್ತಿಯ ಕೇಸ್ ... ಹಿನ್ನೆಲೆ ಅಂದರೆ ಶಿವಶಂಕರ್‌ಗೆ ಮೊದಲೊಂದು ...ವೆ ಆಗಿತ್ತು. ಆದರೆ ಆ ಹುಡುಗಿ ಸಿಕ್ಕಾಪಟ್ಟೆ ಹಠಮಾರಿ ... ಸಿಡುಕಿನ ಸ್ವಭಾವದವಳಾಗಿದ್ದು ಪ್ರತಿಯೊಂದು ...ಲೂ ತಾನು ಅಂದಿದಂತೆಯೇ ಆಗಬೇಕು. ಎಲ್ಲದರಲ್ಲೂ ... ಹೇಳಿದಂತೆಯೇ ನಡೆಯಬೇಕು ಎಂಬ ...ವದವಳಾಗಿದ್ದಳು. ಗಂಡಹೆಂಡತಿ ಮಧ್ಯೆ ಅದೇನೋ ...ಕ್ಷುಲ್ಲಕ ವಿಚಾರಕ್ಕೆ ಮಾತುಕತೆ ಬೆಳೆದು ಕೋಪಗೊಂಡ ... ಆತ್ಮಹತ್ಯೆ ಮಾಡಿಕೊಂಡಿದ್ದಳು. ಮದುವೆ ಆದ ...ಸದಾಗಿದ್ದರಿಂದ ಸಹಜವಾಗಿ ಸಂದೇಹ ಶಿವಶಂಕರ್‌ನ ... ಬರುವುದರಿಂದ ಪೊಲೀಸರು ತನಿಖೆ ಕೂಡ ...ಆರಂಭಿಸಿದ್ದರು. ಆದರೆ ಅವನ ಅತ್ತೆ ಮಾವಂದಿರಿಗೆ ತಮ್ಮ ಮಗಳ ಸ್ವಭಾವ ಹಾಗೂ ಜಗಳದ ಹಿನ್ನೆಲೆ ಗೊತ್ತಿದ್ದುದರಿಂದ ಅವರು ಶಿವಶಂಕರ್‌ನ ಪರವಾಗಿ ನಿಂತು ಆತ ಅನ್ಯಾಯವಾಗಿ ಪೊಲೀಸ್ ಕೇಸಿನಲ್ಲಿ ಸಿಲುಕದಂತೆ ನೋಡಿಕೊಂಡರು. ಅದೃಷ್ಟವಶಾತ್ ಆತ ಪಾರಾದ. ಆದರೆ ಈ ಘಟನೆಯಿಂದ ಬಹಳ ನೊಂದುಕೊಂಡಿದ್ದ ಆತ ಬಹಳ ಮಂಕಾಗಿಹೋಗಿದ್ದ. ಅದೇ ಸಮಯಕ್ಕೆ ಅವನ ಮನೆಯವರೆಲ್ಲ ಸೇರಿ ಶಿವಶಂಕರನ ಮರುವಿವಾಹಕ್ಕೆ ಹೆಣ್ಣು ನೋಡಲು ಶುರು ಮಾಡಿದರು.


ತಮ್ಮ ಜಾತಿಯ ವಧುವರರ ಕೇಂದ್ರದಲ್ಲಿ ಹೆಣ್ಣುಗಳ ಪಟ್ಟಿ ಪರಿಶೀಲಿಸುವಾಗ ಒಬ್ಬ ಹೆಣ್ಣು ಅವರೆಲ್ಲರಿಗೂ ಬಹಳ ಹಿಡಿಸಿತು. ಸುಧಾ ಡಿಗ್ರಿ ಮುಗಿಸಿದ್ದು ನೋಡಲು ಸುಂದರವಾಗಿದ್ದರೂ ಬಹಳ ಸಿಂಪಲ್ಲಾಗಿ ಕಾಣಿಸಿದಳು. ತಂದೆತಾಯಿ ಇಲ್ಲದ ಹುಡುಗಿ, ಮದುವೆ ಆಗಿ ದೂರದ ಊರಲ್ಲಿರುವ ಅಕ್ಕನನ್ನು ಬಿಟ್ಟರೆ ಸದ್ಯಕ್ಕೆ ನೋಡಿಕೊಳ್ಳುತ್ತಿರುವ ಚಿಕ್ಕಪ್ಪ ಮಾತ್ರ ಅವಳ ಜಗತ್ತು. ಮನ ಕರಗಿದ ಶಿವಶಂಕರ್‌ನ ಕುಟುಂಬ ಮಾತುಕತೆ ಮುಂದುವರೆಸಿ ಸುಧಾ ಹಾಗೂ ಶಿವಶಂಕರ್ ಮದುವೆ ಮಾಡಿ ಮುಗಿಸಿತು. ಅನುಕೂಲಸ್ಥರ ಮನೆಯಾದ್ದರಿಂದ ಶಿವಶಂಕರ್‌ನ ಕುಟುಂಬ ಅವರಿಬ್ಬರ ಹನಿಮೂನಿಗೆ ವಿದೇಶಕ್ಕೆ ಟಿಕೆಟ್ ಮಾಡಿಸಿತ್ತು. ಇಬ್ಬರೂ 15 ದಿನ ವಿದೇಶ ಪ್ರವಾಸ ಮುಗಿಸಿಬರುವಷ್ಟರಲ್ಲಿ ಆತನ ಮನಸ್ಥಿತಿ ಸ್ವಲ್ಪ ಸುಧಾರಿಸಿತ್ತು. ಚೇತರಿಕೆಗೊಂಡಿದ್ದ ಆತ ಸಂತೋಷದಿಂದ ಇರಲು ಪ್ರಾರಂಭಿಸಿ ಇನ್ನೂ ಎರಡು ತಿಂಗಳು ಕಳೆದಿರಲಿಲ್ಲ, ಅಷ್ಟರಲ್ಲಿ ಸುಧಾ ವಿನಾಕಾರಣ ದಿನಬೆಳಗಾದರೆ ಜಗಳ, ಕಿರುಚಾಟ ಶುರು ಮಾಡಿದಳು. ಆತನಿಗೆ ಕಾರಣವೇ ತಿಳಿಯಲಿಲ್ಲ. ಕಾರಣವಿಲ್ಲದೆ ಅವನನ್ನು ಬಾಯಿಗೆಬಂದಂತೆ ಬೈಯ್ಯುವುದು ಹಾಗೂ ಮನೆಯ ಹೊರಗೆ ಸುಮ್ಮಸುಮ್ಮನೆ ಕಿರುಚಾಡುತ್ತ ಓಡಿಹೋಗುವುದು, ಬೊಬ್ಬೆ ಹೊಡೆಯುವುದು ಮಾಡತೊಡಗಿದಳು. ಅವಳ ಉದ್ದೇಶ ಅರಿಯದ ಶಿವಶಂಕರ್ ಕಂಗಾಲಾಗಿ ಹೋದ. ಕೆಲದಿನಗಳಲ್ಲೇ ಅವಳು ಶಿವಶಂಕರ ಹಾಗೂ ಅವನ ಕುಟುಂಬದ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಪ್ರಾಣಭಯದ ಕಂಪ್ಲೇಂಟ್ ಕೊಟ್ಟಾಗ ಆತ ನಡುಗಿಹೋದ. ಎಷ್ಟೋ ದೂರದಲ್ಲಿರುವ ಅವನ ತಂದೆ ತಾಯಿಯ ಮೇಲೂ ಅವಳು ದೂರು ಕೊಟ್ಟಾಗ ಆತನ ಕೆಳಗಿನ ಭೂಮಿ ಕುಸಿದಂತಾಗಿತ್ತು. ಏನೂ ಮಾಡುವ ಸ್ಥಿತಿಯಲ್ಲಿ ಇಲ್ಲದ ಆತ ಅನಿವಾರ್ಯವಾಗಿ ಜಾಮೀನು ಪಡೆದು ಕೇಸ್ ನಡೆಸಲು ನಮ್ಮ ಆಫೀಸಿಗೆ ಬಂದಿದ್ದ. ಆತನ ಮಾತು ಕೇಳಿ ಹುಡುಗಿಯ ಹಿನ್ನೆಲೆಯ ಬಗ್ಗೆ ಸಂದೇಹಗೊಂಡಿದ್ದ ನಮ್ಮ ಸೀನಿಯರ್ ತಮ್ಮ ಎಲ್ಲ ಮೂಲಗಳನ್ನು ಬಳಸಿ ಕೆಲದಿನ ಅವಳ ಹಿನ್ನೆಲೆಯನ್ನು ಕಂಡುಹಿಡಿಯಲು ಪ್ರಯತ್ನ ಪಟ್ಟರು. ಅದರಲ್ಲಿ ನಮ್ಮ ಸಹೋದ್ಯೋಗಿಗಳೂ ಸಕ್ರಿಯವಾಗಿ ಪಾಲ್ಗೊಂಡಿದ್ದರಿಂದ ಅವರಿಗೆ ಆ ಕೇಸಿನಲ್ಲಿ ವಿಶೇಷ ಆಸಕ್ತಿ. ಅವರೆಲ್ಲರ ತನಿಖೆಯಿಂದ ತಿಳಿದು ಬಂದದ್ದೆಂದರೆ ಸುಧಾ ಈ ಮೊದಲು ಒರಿಸ್ಸಾದಲ್ಲಿದ್ದು ಅಲ್ಲಿ ಅಮಾಯಕನೊಬ್ಬನನ್ನು ಮದುವೆ ಆಗಿ ಆತನ ಮೇಲೆ ವರದಕ್ಷಿಣೆ ಕಿರುಕುಳದ ಕೇಸು ಹಾಕಿ ನಂತರ ರಾಜಿ ಮಾಡಿಕೊಳ್ಳಲು 10-15 ಲಕ್ಷ ರೂಪಾಯಿ ಪಡೆದು ಆತನಿಗೆ ಡೈವೋರ್ಸ್‌ನ್ನೂ ನೀಡದೆ ಓಡಿಹೋಗಿದ್ದಾಳೆ ಎಂಬುದು. ಅಲ್ಲಿಂದ ಹೋದ ಸುಧಾ ತನ್ನ ಚಿಕ್ಕಪ್ಪನ ಮೂಲಕ ದೆಹಲಿಯಲ್ಲಿ ನೆಲೆಸಿರುವ ಕರ್ನಾಟಕ ಮೂಲದ ಮತ್ತೊಬ್ಬನ ಜೊತೆ ಮದುವೆ ಆಗಿ ಆತನ ಮೇಲೂ ಕೇಸ್ ದಾಖಲಿಸಿ 12 ಲಕ್ಷ ಹಣ ಪಡೆದು ಡೈವೋರ್ಸ್ ಕೊಡದೆ ಜಾಗ ಖಾಲಿ ಮಾಡಿದ್ದಳು. ಆ ಎರಡೂ ಕಡೆಯಿಂದಲೂ ಡೈವೋರ್ಸ್ ಕೇಸ್ ಇನ್ನೂ ಚಾಲ್ತಿ ಇರುವ ಬಗ್ಗೆ ದಾಖಲೆಗಳನ್ನು ಪಡೆದನಂತರ ಅಂದು ನಾವು ಕೋರ್ಟಿಗೆ ಹೋಗುತ್ತಿದ್ದರಿಂದ ಸಹಜವಾಗಿಯೇ ಎಲ್ಲರಿಗೂ ಕುತೂಹಲ ಜಾಸ್ತಿ ಇತ್ತು. ದಾಖಲೆಗಳ ಸಹಾಯದಿಂದ ಅವಳನ್ನು ಎದುರಿಸಿದಾಗ ಯಾವುದೇ ಪರಿಹಾರಧನ ಇಲ್ಲದೆ ಕೇಸನ್ನು ಹಿಂದಕ್ಕೆ ಪಡೆದುಕೊಂಡಳು. ಕೇಸಿನಿಂದ ಹೊರಬಂದದ್ದನ್ನು ಸಂಭ್ರಮಿಸುವ ಸ್ಥಿತಿಯಲ್ಲಿ ಶಿವಶಂಕರ ಇರಲಿಲ್ಲ. ಮದುವೆ ಎಂಬ ವ್ಯವಸ್ಥೆಯಿಂದಲೇ ರೋಸಿ ಹೋದಂತೆ, ಭ್ರಮನಿರಸನಗೊಂಡಂತೆ ಆತ ಕಾಣುತ್ತಿದ್ದ. ಸುಧಾಳಂತಹ ಹೆಂಗಸರ ಬಗ್ಗೆ ಬರೀ ಕೇಳಿದ್ದ ನನಗೆ ಅವಳ ಮುಖ ನೋಡಿದಾಗ ಇಷ್ಟೊಂದು ಅಮಾಯಕವಾಗಿ ಕಾಣುವ ಮುಖದ ಹಿಂದೆ ಇಂತಹ ಕ್ರೂರ ಮನಸ್ಸು ಇದೆಯಾ ಎಂದು ಆಶ್ಚರ್ಯವಾಗಿತ್ತು.



ಅವಳ ಮುಖ ತಲೆಯಲ್ಲಿ ಅಚ್ಚೊತ್ತಿದಂತೆ ಮೂಡಿತ್ತು.


ಈ ಕೇಸು ಮುಗಿದು ಸುಮಾರು 5-6 ವರ್ಷಗಳ ನಂತರ ಒಮ್ಮೆ ಫ್ಯಾಮಿಲಿ ಕೋರ್ಟಿನಲ್ಲಿ ನನ್ನ ಕೇಸು ಮುಗಿಸಿ ಹೊರಗೆ ಹೋಗುತ್ತಿದ್ದಾಗ ನನ್ನ ಪರಿಚಯದ ವಕೀಲರೊಬ್ಬರು ಎದುರಿಗೆ ಸಿಕ್ಕರು. 'ಅದೇನು ಪ್ರಮೋದ್ ಇವತ್ತು ಕೋಟ್ ಹಾಕಿಕೊಳ್ಳದೆ ಕೋರ್ಟಿಗೆ ಬಂದಿದ್ದೀರಲ್ಲಾ' ಎಂದು ಸುಮ್ಮನೆ ಕೇಳಿದೆ. 'ಪರ್ಸನಲ್ ಕೇಸ್ ಮೇಡಂ' ಎಂದರು. 'ಓಹೋ ಯಾಕೆ ಏನಾಯ್ತು' ಎಂದು ಕೇಳಿದಾಗ, ಅವರ ಹೆಂಡತಿ ಅವರ ಮೇಲೆ ವರದಕ್ಷಿಣೆ ಕೇಸು ಹಾಕಿದ್ದಾಳೆ ಹಾಗೂ ಡೈವೋರ್ಸ್‌ನ್ನೂ ಕೊಡದೆ ಸತಾಯಿಸುತ್ತಿದ್ದಾಳೆ ಎಂದರು. 'ಏನು ಮಾಡುವುದು ಸರ್, ವಕೀಲರಾದರೂ ಕಾನೂನಿನ ಎದುರು ಕೆಲವೊಮ್ಮೆ ಎಷ್ಟೊಂದು ಹೆಲ್ಪಲೆಸ್ ಅನಿಸುತ್ತದಲ್ವಾ' ಎಂದು ಅವರಿಗೆ ಸಮಾಧಾನ ಹೇಳಿ ಹೊರಗೆ ಹೋದೆ. ಅಲ್ಲಿ ಮೆಟ್ಟಿಲಿಳಿಯುವಾಗ ಅದ್ಯಾಕೊ ಅಚಾನಕ್ಕಾಗಿ ಬಲಗಡೆ ಕುಳಿತಿರುವ ಇಬ್ಬರು ಹೆಂಗಸರತ್ತ ದೃಷ್ಟಿ ಹೋಯಿತು. ನೋಡಿದರೆ ಸುಧಾ ಮತ್ತು ಅವಳ ಅಕ್ಕ! ಅವರ ಕೈಯಲ್ಲಿ ಮಗುವೊಂದಿತ್ತು ಯಾರದೆಂದು ಗೊತ್ತಿಲ್ಲ. ಆದರೆ ಆಗಷ್ಟೇ ಪ್ರಮೋದ್ ಹೇಳಿದ ಕೇಸಿನ ಹಿನ್ನೆಲೆ ನೆನಪಾಗಿ ವಾಪಸು ಅವರ ಬಳಿ ಓಡಿದೆ. 'ನಿಮ್ಮ ಹೆಂಡತಿಯ ಹೆಸರೇನು' ಎಂದಾಗ ಅವರು 'ಸುಧಾ' ಎಂದದ್ದು ಕೇಳಿ ಒಂದುಕ್ಷಣ ಸಾವರಿಸಿಕೊಂಡೆ. ಅವಳ ಹಿನ್ನೆಲೆ ಹಾಗೂ ಹೇಗೆ ಅವಳ ಪರಿಚಯ ಆಯ್ತು ಎಂದು ಕೇಳಿದಾಗ, 'ವಧುವರರ ಕೇಂದ್ರದಲ್ಲಿ ಅವಳ ಫೋಟೋ ಹಾಗೂ ಡಿಟೇಲ್ಸ್ ಇತ್ತು, ಅಲ್ಲಿಂದ ಮಾತುಕತೆ ಮುಂದುವರೆಸಿ ಮದುವೆ ಆದೆ' ಎಂದು ಪ್ರಮೋದ್ ಹೇಳಿದಾಗ, 'ಇವತ್ತು ಸಾಯಂಕಾಲ ನಿಮಗೆ ಫೋನ್ ಮಾಡ್ತೀನಿ. ನಮ್ಮ ಆಫೀಸಿಗೆ ಬಂದುಹೋಗಿ' ಎಂದು ಹೇಳಿ ಅಲ್ಲಿಂದ ಹೊರಟೆ. ಆಫೀಸಿಗೆ ಬಂದು ನನ್ನ ಎಲ್ಲ ಹಿರಿಯ ಸಹೋದ್ಯೋಗಿಗಳಿಗೆ ಈ ಬಗ್ಗೆ ಹೇಳಿದಾಗ ಅವಳ ಭಂಡತನ ಹಾಗೂ ಜೀವನಶೈಲಿಯ ಬಗ್ಗೆ ಜಿಗುಪ್ಸೆ ಪಟ್ಟರು. ನಮ್ಮ ಆಫೀಸಿಗೆ ಬಂದ ಪ್ರಮೋದ್‌ಗೆ ಆಫೀಸಿನಲ್ಲಿ ಹಳೆಯ ಕೇಸನ್ನು ನಡೆಸಿದ ಸಹೋದ್ಯೋಗಿಗಳು ಸುಧಾ ಬಗ್ಗೆ ಎಲ್ಲ ಮಾಹಿತಿ ಹಾಗು ದಾಖಲೆಗಳನ್ನು ನೀಡಿದರು. ಅವಳ ಕಥೆ ಕೇಳುತ್ತಿದ್ದ ಪ್ರಮೋದ್ ಆಶ್ಚರ್ಯ ಹಾಗು ಗಾಬರಿಯಿಂದ ಬಾಯಿ ತೆಗೆದು ಕುಳಿತಿದ್ದ. ಎಲ್ಲರಿಗೂ ಧನ್ಯವಾದ ಹೇಳಿ ಅಲ್ಲಿಂದ ಹೋದ ಪ್ರಮೋದ್ ಎಷ್ಟೋ ದಿನದ ಮೇಲೆ ಮತ್ತೆ ಕೋರ್ಟಿನಲ್ಲಿ ಸಿಕ್ಕಾಗ 'ಮೇಡಂ ನಿಮಗೆ ಹಾಗೂ ನಿಮ್ಮ ಆಫೀಸ್‌ನವರಿಗೆ ಎಷ್ಟು ಥ್ಯಾಂಕ್ಸ್ ಹೇಳಿದರೂ ಸಾಕಾಗುವುದಿಲ್ಲ. ನೀವು ಕೊಟ್ಟ ದಾಖಲೆಗಳನ್ನು ಇಟ್ಟುಕೊಂಡು ನಾನೂ ಸ್ವಲ್ಪ ತನಿಖೆ ಮಾಡಿದೆ. ನಿಮ್ಮ ಆಫೀಸಿನ ಕೇಸ್ ಮುಗಿದನಂತರ ಸುಧಾ ಸ್ವಲ್ಪ ದಿನ ತನ್ನ ಚಟುವಟಿಕೆ ಕಡಿಮೆ ಮಾಡಿದ್ದಳು. ಆದರೆ ಅವಳ ಅಕ್ಕ 'ರಾಧಾ' ಎರಡನೆ ಮದುವೆ ಆಗಿ ಆತನ ಮೇಲೆ ವರದಕ್ಷಿಣೆ ಕೇಸ್ ಹಾಕಿ 6 ಲಕ್ಷ ರೂಪಾಯಿ ಪಡೆದಿದ್ದಾಳೆ. ಅವಳಿಗೆ ಒಂದು ಮಗುವೂ ಇದೆ. ಇಬ್ಬರೂ ಕೂಡಿ ಮದುವೆಯನ್ನು ಒಂದು ದಂಧೆ ಮಾಡಿಕೊಂಡು ಅಮಾಯಕರ ಜೀವನ ಹಾಳು ಮಾಡುತ್ತಿದ್ದಾಳೆ ಎಂದು ಸ್ವತಃ ನಾನೇ ವಾದಿಸಿ ಕೇಸ್ ಗೆದ್ದೆ ಮೇಡಂ' ಎಂದು ಪ್ರಮೋದ್ ಹೇಳಿದಾಗ ಖುಷಿ ಆಯಿತು.

ಅದೆಷ್ಟು ದಿನ ಹೀಗೆ ಮುಗ್ಧ ಜನರಿಗೆ ಮೋಸ ಮಾಡಿ ಬದುಕಬಹುದು. ಒಂದಲ್ಲ ಒಂದು ದಿನ ಸಿಕ್ಕಿ ಬೀಳುವುದು ಖಂಡಿತ. ಬೇಗ ಬೇಗ ಹಣಗಳಿಸಲು ಇಷ್ಟೊಂದು ಹೀನಮಟ್ಟಕ್ಕೆ ಇಳಿಯುವುದು ಅದೆಷ್ಟು ಸರಿ. ಅವರ ಆತ್ಮಸಾಕ್ಷಿ ಅವರಿಗೆ ಚುಚ್ಚುವುದಿಲ್ಲವಾ ಎಂಬ ಎಲ್ಲ ಮಾತುಗಳು ಇಲ್ಲಿ ಅರ್ಥ ಕಳೆದುಕೊಳ್ಳುತ್ತವೆ. ಏಕೆಂದರೆ ಯಾವುದೋ ಒಂದು ದಾರಿಯಿಂದ ಹಣ ಗಳಿಸಿ ಮೇಲೆ ಬರಬೇಕು ಎಂಬುದು ಮನುಷ್ಯ ಸಹಜ ಗುಣ. ಕೆಲವರು ತಮ್ಮ ಬುದ್ಧಿಯಿಂದ ಮೇಲೆ ಬಂದರೆ ಇನ್ನು ಕೆಲವರು ಮತ್ತೊಬ್ಬರಿಗೆ ಮೋಸ ಮಾಡಿ ಬರುತ್ತಾರೆ. ಎಲ್ಲಿಯವರೆಗೆ ಕಾನೂನಿನಲ್ಲಿ ಲೋಪದೋಷಗಳು ಇರುತ್ತವೋ, ಎಲ್ಲಿಯವರೆಗೆ ಪೊಲೀಸ್ ಹಾಗೂ ಸಂಬಂಧಿಸಿದ ಇಲಾಖೆಗಳು ಸ್ವಲ್ಪ ನಿಷ್ಪಕ್ಷಪಾತ ಹಾಗೂ ಸಂವೇದನಾ ಶೀಲವಾಗಿ ನಡೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಪ್ರಮೋದ್‌ನಂತಹ ಜನರು ಬಲಿಪಶುಗಳಾಗುತ್ತಲೇ ಇರುತ್ತಾರೆ. ■



● ರಾಜಲಕ್ಷ್ಮೀ ಅಂಕಲಗಿ

ಉಪೇಂದ್ರ ಉಪ್ಪಿಟ್ಟು ಅಂತಾ ಸಿನಿಮಾ ಮಾಡ್ತಿದ್ದಾನೆ ಗೊತ್ತಾ?



... ಹುಡುಗರಿಂದ ರಕ್ಷಿಸಿಕೊಳ್ಳಲು ಹುಡುಗಿಯರಿಗೆ ...ವಾಲ್ವಾರ್ ಲೈಸೆನ್ಸ್ ಕೊಟ್ಟರೆ ಒಳ್ಳೇದಲ್ವಾ?

- ಕಿರಣ, ಬೆಂಗಳೂರು

...ಜೊತೆಗೆ ಒಳ್ಳೆಯ ಹುಡುಗರೊಂದಿಗೆ ಸ್ನೇಹಕ್ಕೂ ...ಲೈಸೆನ್ಸ್ ಕೇಳಿದರೆ ಮಾತ್ರ.

...ಪಿಎಸ್‌ಸಿ ಹಗರಣದ ತನಿಖೆಗೆ ಹೆಚ್.ಡಿ. ...ಕುಮಾರಸ್ವಾಮಿ ಆಕ್ಷೇಪಿಸುತ್ತಿದ್ದಾರೆ ಯಾಕೆ?

- ರವಿರಾಜ್, ಚಿಕ್ಕಮಗಳೂರು

...ನು ಅಕ್ರಮವಾಗಿ ಸಿಎಂ ಹುದ್ದೆ ಪಡೆದದ್ದನ್ನು ತನಿಖೆ ...ಮಾಡುತ್ತಾರೆಂಬ ಭಯ ಅಷ್ಟೇ.

...ಸಂಗೀತ ಇರಬೇಕಿಲ್ಲವಾ? ...ಜೀವನದಲ್ಲಿ ಇರಬೇಕಿತ್ತಲ್ಲವಾ?

- ಮಹೇಶ್, ಹಿರಿಯೂರು

...ಗೊರಕೆ ಸಂಗೀತ ಸಾಕಾಗುತ್ತಿಲ್ಲವಾ.

☛ ಹುಡುಗಿಯರಿಗೆ ರೆಕ್ಕೆ ಇರದಿದ್ದರೂ ಹಕ್ಕಿ ಅನ್ನುತ್ತಾರಲ್ಲ ಯಾಕೆ?

- ಅಬ್ರಹಾಂ, ದಾವಣಗೆರೆ

☞ 'ಹಿಕ್ಕೆ' ಯಂತಿರುವ ಹುಡುಗರ ಗೋಣಗಾಟ.

☛ ಜಗತ್ತಿನ ಮೊದಲ ಜಲಪಾತ ಯಾವುದಿರಬಹುದು ಸಾರ್?

- ರಾಕೇಶ್, ಡಿ.ಬಿ. ಪುರ

☞ ಬಹುಶಃ ಹೆಣ್ಣಿನ ಕಣ್ಣೀರು.

☛ ಸಿದ್ದರಾಮಯ್ಯ ಚೀನಾಗೆ ಹೋಗಿದ್ದೇಕೆ?

- ಬಾಲಚಂದ್ರ, ವಿಜಯನಗರ

☞ ಸಿಎಂ ಆದವರ ಸಂಪ್ರದಾಯ ಪಾಲಿಸಲು.

☛ ಮೋದಿ ಭಾಷಣ ಕೇಳಲು ಹತ್ತು ರೂ. ಕೊಡಬೇಕಂತೆ ನಿಜವೆ?

- ಕಾಡಪ್ಪ ಬಿರಾದಾರ, ಬಾದಾಮಿ

☞ ಅವನ ಮಾತು ನಂಬಿದರೆ ಕೊನೆಗೆ ಪ್ರಾಣಾನೂ ಕೊಡಬೇಕಾಗುತ್ತೆ.

☛ ಹಿಂದೂ ದೇವರಿಗೆ ಗಡ್ಡ ಮೀಸೆ ಇರಲ್ಲ ಯಾಕೆ?


- ಸರೋಜ.ಕೆ.ಆರ್. ಪೇಟೆ

☞ ಸದ್ಯ ಒಳ್ಳೇದಾಯ್ತು, ಇಲ್ಲಾಂದ್ರೆ ದೇವರ ಶೇವಿಂಗ್ ಖರ್ಚಿಗೂ ಪುರೋಹಿತರು ಭಕ್ತರನ್ನ ಬೋಳಿಸುತ್ತಿದ್ದರು.

☛ ವಿಚಾರವಾದಿಗಳ ಬಗ್ಗೆ ಕೋಮುವಾದಿಗಳಿಗೆ ಅಸಹನೆ ಯಾಕೆ?

- ಸಿರಾಜ್, ಕನಕಪುರ

☞ ಅವರ ತಲೆಯಲ್ಲಿ 'ವಿಚಾರ' ಇರಲ್ಲ ಬರೀ ವಾದ ಇರುತ್ತೆ ಅದಕ್ಕೆ.



☛ ಮರುಭೂಮಿಯಲ್ಲಿ ಓಯಸಿಸ್ ಇರುವಂತೆ, ಜೀವನದಲ್ಲಿ...?

- ಸವಿತಾ, ಔರಾದ್

☞ ನಂಬಿಕೆಯ ಮಿತ್ರರು.

☛ ಸಂಸಾರನೌಕೆ ಸರಾಗವಾಗಿ ತೇಲಬೇಕೆಂದರೆ ಏನು ಮಾಡಬೇಕು?

- ರಾಜೇಗೌಡ, ಹುಲ್ಲೂರು

☞ ಕುಡಿದು ತೇಲಾಡುವುದನ್ನು ಮೊದಲು ಬಿಡಬೇಕು.

☛ ಬಿಜೆಪಿ-ಕೆಜೆಪಿ ವಿಲೀನಕ್ಕೆ ಶೋಭಾ 'ನೋ' ಅಂದಿದ್ದಾರೆ ಯಾಕೆ?

- ರಘು, ಬಳ್ಳಾರಿ

☞ ಆದರೆ ಯಡ್ಡಿಯೊಂದಿಗೆ ವಿಲೀನಕ್ಕೆ ಆಕ್ಷೇಪಿಸಲಾರರು.

☛ ಗಣಪತಿ ಆರ್ಯರ ಶತ್ರುವಾಗಿದ್ದ ಎಂದು ಯೋಗೇಶ್ ಮಾಸ್ತರ್ ಹೇಳುತ್ತಿದ್ದಾರಲ್ಲ?


- ಪ್ರಕಾಶ್, ಶಿವಮೊಗ್ಗ

☞ ಈಗ 'ಮಿತ್ರ'ನಾಗಿಸಿಕೊಂಡು ಪುರೋಹಿತರ 'ಛತ್ರ'ಕ್ಕೆ ಸೇರಿಸಿಕೊಂಡಿದ್ದಾರಲ್ಲ.

☛ ಜೀವನ ಅಂದರೆ ಒಂದು ರೈಲು ಪ್ರಯಾಣ ಇದ್ದಂಗೆ ಅಂತ ಇಲ್ಲೊಬ್ಬ ಯೋಗಿ ಹೇಳುತ್ತಾರೆ!

- ಗೀತಾ, ಹಾವೇರಿ

☞ ಬರೀ ಬೋಗಿಯಂತಿರದೆ, ಎಂಜಿನ್‌ನಂತಾಗು. ಪ್ರಯಾಣ ಇನ್ನೂ ಸೊಗಸು...



☛ ಉಪೇಂದ್ರ ಉಪ್ಪಿಟ್ಟು ಅಂತಾ ಸಿನಿಮಾ ಮಾಡ್ತಿದ್ದಾನೆ ಗೊತ್ತಾ?

- ಚೆಲುವರಾಜ್, ಹೊನ್ನಾಳಿ

☞ ಅದು ಗೊತ್ತಾ ಹೊಡೆದ ಮೇಲೆ ನಿಪ್ಪಟ್ಟು, ಒಬ್ಬಟ್ಟು, ತಂಬಿಟ್ಟು ತೆಗೆಯುತ್ತಾನೇನೋ ಆ ಯಡವಟ್ಟು ಗಿರಾಕಿ?

(ಸೂಚನೆ: ಕಣ್ಣಾಮುಚ್ಚಾಲೆಗೆ ಪ್ರಶ್ನೆ ... ಮೊಬೈಲ್ ನಂ. 9980334427... SMS ಮತ್ತು kannamuchale@gmail.com ... ಇ-ಮೇಲ್ ಮೂಲಕವೂ ... ಹೆಸರು, ಊರು ... ಬರೆಯಿರಿ.)


"ಕವಿ ತನ್ನ ಅಸ್ತಿತ್ವವನ್ನು ಸಮಾಜಕ್ಕೆ ಸಾಬೀತುಪಡಿಸುತ್ತಾ ಇರುವ ಅಗತ್ಯ ಇಲ್ಲ"

- ಸ. ಉಷಾ

ನುಡಿಗನ್ನಡಿ
ಸಾಹಿತಿ-ಕಲಾವಿದ-ಚಿಂತಕರ ಸಂದರ್ಶನ

• ಅಕ್ಷತಾ ಹುಂಚದಕಟ್ಟೆ

1973 ರಲ್ಲಿ 'ಅಮ್ಮನಿಗೆ' ಎನ್ನುವ ಬೆಚ್ಚಿಬೀಳಿಸುವ ಪದ್ಯದೊಂದಿಗೆ ಕನ್ನಡ ಕಾವ್ಯಲೋಕವನ್ನು ಪ್ರವೇಶಿಸಿದ ಸ.ಉಷಾ ತಮ್ಮ ಕವಿತೆಗಳಲ್ಲಿ ಹೆಣ್ಣಿನ ವ್ಯಕ್ತಿತ್ವ ಮತ್ತು ಬದುಕಿನ ಒಳಸತ್ಯಗಳನ್ನು ಅನಾವರಣಗೊಳಿಸುತ್ತಾ ಬಹುದೂರ ಸಾಗಿಬಂದಿದ್ದಾರೆ. 'ತೊಗಲು ಗೊಂಬೆಯ ಆತ್ಮಕಥೆ', 'ಈ ನೆಲದ ಹಾಡು', 'ಹವಳ ಹಾರಿದ ಹೊತ್ತು' ಇವರ ಕವನ ಸಂಕಲನಗಳು. 'ಕಸೂತಿ' ಇವರ ಕಾದಂಬರಿ. ವೃತ್ತಿಯಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸಿರಿಗೆರೆ, ಹೊಳಲ್ಕೆರೆ, ಅರಸೀಕೆರೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸಿದ ಇವರು ಪ್ರಸ್ತುತ ಸೇವೆಯಿಂದ ಸ್ವಯಂನಿವೃತ್ತಿ ಪಡೆದು ಶಿವಮೊಗ್ಗೆಯಲ್ಲಿ ಪತಿ ಪ್ರೊ ವೈ. ಮಂಜಪ್ಪ ಅವರೊಂದಿಗೆ ನೆಲೆಸ್ಸಿದ್ದಾರೆ.



* ನಲವತ್ತು ವರುಷಗಳ ಕಾವ್ಯ ಕೃಷಿಯ ನಂತರವೂ ನೀವು ನೇಪಥ್ಯದಲ್ಲಿಯೇ ಉಳಿದ ಕವಿ ಎಂದು ಕನ್ನಡದ ಬಹುಸಂಖ್ಯಾತ ಓದುಗರ ಅಭಿಪ್ರಾಯ. ಇದರ ಹಿಂದಿನ ಕಾರಣಗಳೇನು?

ಸ.ಉಷಾ : 'ಇರಲಿರಲಿ ಶೂನ್ಯಗಳು ಸಿಂಹಾಸನಗಳು
ನಿಮ್ಮ ನಡೆನುಡಿಯ ತೊರೆದು
ಗಿಳಿಕೋಗಿಲೆಗಳನ್ನಾದರೂ ದಾರಿ ಕೇಳುತ್ತಾ
ನಾನೇ ನಾನಾಗಿ ಹೋಗುತ್ತೇನೆ
ಕದಳಿಗೆ'

ಎಂಬುದು ನನ್ನ 'ಅಕ್ಕ ಹೇಳಿದ್ದು' ಕವಿತೆಯ ಸಾಲುಗಳು.

ನೇಪಥ್ಯ-ರಂಗಸ್ಥಳದ ಮುಂಭಾಗ ಎಂಬುದು ಕಾವ್ಯಕೃಷಿಗೆ ಸಂಬಂಧಿಸಿದಂತೆ ಪ್ರಸ್ತುತವಾಗುವುದೇ ಇಲ್ಲ. ಕಾವ್ಯ ಕೃಷಿರಂಗದ ಮೇಲಿನ ಲಿಂಬೆ ಬೆಳಕಿನಲ್ಲಿ ನಡೆಯುವುದಲ್ಲ. ಮೌನದಲ್ಲಿ- ಏಕಾಂತದಲ್ಲಿ ಧ್ಯಾನದಲ್ಲಿ ಹರಳು ಗೂಡಿಕೊಳ್ಳುವುದು. ಕಾವ್ಯಕ್ಕೆ ಸಮಾಜಮುಖತೆ ಮತ್ತು ಸಾಮಾಜಿಕ ಬದ್ಧತೆ ಅವಶ್ಯವಾಗಿ ಬೇಕು. ಹಾಗೆಂದು ನಿರಂತರವಾಗಿ ಸಭೆಸಮಾರಂಭಗಳಲ್ಲಿ ಭಾಗವಹಿಸುತ್ತಾ ತಮ್ಮ ಅಸ್ತಿತ್ವವನ್ನು ಸಮಾಜಕ್ಕೆ ಸಾಬೀತುಪಡಿಸುತ್ತಾ ಇರುವ ಅಗತ್ಯ ಕವಿಗೆ ಇಲ್ಲ. ಅತಿಯಾಗಿ ರಂಗದ ಮೇಲೆ ಮಿರುಗುವ ಕ್ರಿಯೆ ಕಾವ್ಯಕ್ಕೆ ಪೋಷಕವಾಗುವುದಕ್ಕಿಂತ ಮಾರಕವಾಗುವುದೇ ಹೆಚ್ಚು. ಈ ವಿಷಯದಲ್ಲಿ ಕುವೆಂಪು- ತೇಜಸ್ವಿ ನನ್ನ ಮಾದರಿಗಳು.

ನನ್ನ ಕವಿತೆಗೆ ಮೊದಲಿನಿಂದಲೂ ಸೂಕ್ಷ್ಮ ಓದುಗರ ಮತ್ತು ವಿಮರ್ಶಕರ ಮೆಚ್ಚುಗೆ ಗೌರವಗಳು ದಕ್ಕಿವೆ. 1972 ರಲ್ಲಿ ನನ್ನ ಮೊದಲ ಕವಿತೆ ಪ್ರಕಟವಾದಾಗಿನಿಂದ ಕಳೆದ ವರ್ಷ ಕೇರಳದಲ್ಲಿ ನಡೆದ ದಕ್ಷಿಣ ಭಾರತ ಸಾಹಿತ್ಯೋತ್ಸವದವರೆಗೂ ನನಗಿಷ್ಟವಾದ ಸಾಹಿತ್ಯಿಕ ಸಮಾರಂಭಗಳಲ್ಲಿ ಭಾಗವಹಿಸುತ್ತಲೇ ಬಂದಿದ್ದೇನೆ. ಸುನಂದಾ ಬೆಳಗಾಂವಕರ್ ಅಂತಹ ಹಿರಿಯ ಲೇಖಕಿ ನಾನೇ ಅವರ ಪುಸ್ತಕಕ್ಕೆ ಮುನ್ನುಡಿ ಬರೆಯಬೇಕು, ಪುಸ್ತಕ ಬಿಡುಗಡೆಗೆ ಬರಬೇಕು ಎಂದು ಪ್ರೀತಿಯಿಂದ ಒತ್ತಾಯಿಸಿ ನನ್ನನ್ನು ಒಪ್ಪಿಸಿದರು. ಕವಿತಾ ರೈ ತರಹದ ಇಂದಿನ ಕವಯಿತ್ರಿ ಸಹ ನಾನು ಅವರ ಸಂಕಲನಕ್ಕೆ ಮುನ್ನುಡಿ ಬರೆಯಬೇಕೆಂದು ಒತ್ತಾಯಿಸಿ ಬರೆಸಿಕೊಂಡರು. ನನ್ನ ಕವಿತೆಗಳು ಇಂಗ್ಲಿಷಿಗೆ, ಹಿಂದಿಗೆ, ಬಂಗಾಲಿಗೆ ಮಲೆಯಾಳ ಭಾಷೆಗೆ ಅನುವಾದಗೊಂಡಿವೆ. ಖ್ಯಾತ ಗಾಯಕಿಯರಿಂದ ಹಾಡಲ್ಪಟ್ಟಿವೆ. ಯಾವುದು ನೇಪಥ್ಯವೋ, ಯಾವುದು ಮುಖ್ಯವಾಹಿನಿಯ ರಂಗಮಧ್ಯವೋ ನನಗೆ ತಿಳಿಯದು. ನನ್ನ ಓದುಗರ ಬಗ್ಗೆ-ವಿಮರ್ಶಕರ ಬಗ್ಗೆ ನನಗೆ ಅಪಾರವಾದ ಪ್ರೀತಿಗೌರವಗಳಿವೆ- ಆ ಏಕಾಂತದ ಅಧ್ಯಯನ ಪ್ರೀತಿಯ ಬಯಕೆಯನ್ನು ಜ. ತೃಪ್ತಿ ಗೌರವಿಸಬೇಕಲ್ಲವೇ?

* ಹಾಗೆ ನೋಡಿದರೆ ಕನ್ನಡದಲ್ಲಿ ಮಹಿಳಾ ಕಾವ್ಯ ಎನ್ನುವುದು ಮುಂಚೂಣಿಗೆ ಬಂದೇ ಇಲ್ಲ, ಮಹಿಳಾ ಕಾವ್ಯವನ್ನು ಓದುವ ಬಗೆಯೊಂದು ರೂಪುಗೊಳ್ಳದೇ ಇರುವುದು ಇದಕ್ಕೆ ಕಾರಣವೇ?

ಸ.ಉಷಾ : ಪ್ರತಿಯೊಂದು ಕಾವ್ಯಕ್ಕೂ ಆಯ್ದ ಓದುಗರಿರುತ್ತಾರೆ. ನಾನು ಆಗಲೇ ಹೇಳಿದ ಹಾಗೆ ಕಾವ್ಯ ಎನ್ನುವುದು ಮುಂಚೂಣಿ ಹಿಂಚೂಣಿಗಳ ಪ್ರಶ್ನೆ ಅಲ್ಲವೇ ಅಲ್ಲ, ಹಾರ್ಡಿ, ಡಿಕನ್ಸ್, ಗಾರ್ಕಿ ಇವರಂಥವರನ್ನು ಅವರ ಸಮಕಾಲೀನರು ಎಷ್ಟು ಜನ ಓದಿ ಆಸ್ವಾದಿಸಿದರು? 'ಸಣ್ಣದು ಸುಂದರ'. ನನ್ನ ಕವಿತೆ ಓದಿ ಒಬ್ಬ ಹೊಸ ಕವಯಿತ್ರಿ, ಒಬ್ಬ ಅನಾಮಿಕ ಓದುಗಳು ಸರಿಯಾದ ಅರ್ಥದಲ್ಲಿ ಓದಿ ಪ್ರತಿಕ್ರಿಯಿಸಿದರೆ ನನಗಾಗುವ ಸಂತೋಷ ಮುಂಚೂಣಿಯ ರಮಡೋಲಿಗಿಂತ ಬಹಳ ದೊಡ್ಡದು.

ಮಹಿಳಾ ಕಾವ್ಯವನ್ನು ಓದುವ ಬಗೆ ರೂಪುಗೊಂಡಿಲ್ಲ ಎಂದು ನಾನು ಹೇಳಲಾರೆ. ಹೆಚ್.ಎಸ್.ರಾಘವೇಂದ್ರ ರಾವ್ ಅವರ 'ನಮಸ್ಕಾರ', 'ಕಣ್ಣ ಹನಿಗಳೇ ಕಾಣಿಕೆ' ತರದ ಕೃತಿಗಳು, ಕೇಶವ ಶರ್ಮ ಅವರ ವಿಮರ್ಶೆ, ಆರ್.ಕೆ. ಮಣಿಪಾಲ್ ಅವರು 82 ರಲ್ಲೇ ಮಹಿಳಾ ಕವಿಗಳ ಕುರಿತು ಬರೆದ ಲೇಖನ ಇವನ್ನೆಲ್ಲ ನೋಡಿದರೆ 'Infavour of sensitive man' ಯುರೋಪಿಯನ್ ಲೇಖಕಿ ಅನ್ನೈಸ್‌ನಿನ್‌ಳ ಉಕ್ತಿ ನೆನಪಾಗುತ್ತದೆ. ಇಂದು ಬೆಳೆಯುತ್ತಿರುವ ಒಳ್ಳೆಯ ಮಹಿಳಾ ಕವಿಗಳ ಬಗ್ಗೆ ಸೂಕ್ಷ್ಮ ಓದುಗರಿಗೆ ತುಂಬಾ ಗೌರವವಿದೆ. ಮುಂಚೂಣಿಯ ಪ್ರಶ್ನೆ ಪ್ರಸ್ತುತವೇ ಅಲ್ಲ, ಬಂಡಾಯ, ದಲಿತ, ದಿಗಂಬರ ಕವಿಗಳ ಪದ್ಯಕ್ಕಾಗಲಿ, ಹಿಂದಿಯಲ್ಲಿ ಛಾಯಾವಾದ ಹೊಸದಾಗಿ ಬಂದಾಗಾಗಲಿ ಅವು ಜಗತ್ತು ಹೇಳುವ ಮುಂಚೂಣಿಯಲ್ಲಿ ಇರಲೇ ಇಲ್ಲ, ಅದಕ್ಕೂ ಇದ್ದವರು ಬೆರಳೆಣಿಕೆಯ ಸೂಕ್ಷ್ಮ ಓದುಗರು.



* ನಿಮ್ಮ ವಾರಿಗೆಯ ಸಮಕಾಲೀನ ಮಹಿಳಾ ಲೇಖಕಿಯರ ಬರವಣಿಗೆಯಲ್ಲಿ ಏಕ ಸೂತ್ರವಿದೆಯೇ? ಹಾಗಿದ್ದರೆ ಆ ಏಕಸೂತ್ರ ಯಾವ ಮಾದರಿಯಲ್ಲಿದೆ?

ಸ.ಉಷಾ : ಏಕಸೂತ್ರವೂ ಇದೆ. ಭಿನ್ನತೆಯೂ ಇದೆ. ಏಕಸೂತ್ರ ಸ್ತ್ರೀಯರ ಸಮಾನ ಅನುಭವಗಳಿಗೆ ಸಂಬಂಧಪಟ್ಟಿದ್ದು, ಬದಲಾಗುತ್ತಿರುವ ಜೀವನಶೈಲಿಯ ಒತ್ತಡದಿಂದ ಬಂದಿದ್ದು. ಭಿನ್ನತೆ ಅತ್ಯಂತ ವೈಯಕ್ತಿಕವಾದ, ಆಪ್ತವಾದ, ವಿಶಿಷ್ಟವಾದ ಸಂವೇದನೆಗಳಿಂದ ಬಂದಿದ್ದು. ಕವಿತಾ ರೈ 'ಒಲೆ ಬದಲಾಗಿದೆ ಉರಿ ಬದಲಾಗಿದೆಯೇ?' ಎನ್ನುವುದರಿಂದ ಇತಿಹಾಸದ ಹಾದಿಯಲ್ಲಿ ಮರಳಿ ನಡೆದರೆ, ಬೆಳಗೆರೆ ಜಾನಕಮ್ಮನವರ 'ಗಿಡವೆಂದು ತಿಳಿದೆಯೋ ಹೆಣ್ಣು ಜನುಮದ ಒಡಲ, ಫಲಗಳನು ಮನಬಂದಂತೆ ಸೃಜಿಸುವುದಕೆ?' ಎನ್ನುವ ಸಾಲುಗಳವರೆಗೆ ಪುರುಷ ಪ್ರಧಾನ ಸಮಾಜ ಹೆಣ್ಣಿನ ಮೇಲೆ ಹೇರಿದ ಕಟ್ಟುಪಾಡುಗಳನ್ನು ತೀವ್ರವಾಗಿ ಪ್ರತಿಭಟಿಸುವಂತವು.

ಭಿನ್ನತೆ ಮತ್ತು ವಿಶಿಷ್ಟ ವೈಯಕ್ತಿಕತೆ 'ರಾಜಕುಮಾರಿ ಸ್ವಂತದ ಕುದುರೆ ಹತ್ತಿ ಹಾರುತ್ತಾಳೆ' ಎನ್ನುವ ರೂಪ ಕಾವ್ಯದಲ್ಲಿ(ರೂಪ ಹಾಸನ), 'ನನ್ನ ಕವಿತೆಗೆ ಮರೆ ತಿಳಿಯದು' ಎಂಬ ಪ್ರತಿಭಾ ಕಾವ್ಯದಲ್ಲಿ(ಪ್ರತಿಭಾ ನಂದಕುಮಾರ್) ಇದೆ. ಇಂಥ ನೂರಾರು ಉದಾಹರಣೆಗಳನ್ನು ಹೆಕ್ಕಿ ಕೊಡಬಹುದು.

* ನಿಮ್ಮ ವಾರಿಗೆಯ ಕವಿಗಳಲ್ಲಿ ನಿಮಗಿಷ್ಟವಾದ ಕವಿಗಳು ಯಾರು? ಮತ್ತು ಏಕೆ?

ಸ.ಉಷಾ : ಪಟ್ಟಿ ತುಂಬಾ ದೊಡ್ಡದಿದೆ. 'ಹಿಡಿದ ಮಂಜು ಬೀಳುತ್ತಿತ್ತು ಚುಕ್ಕಿ ಕಣ್ಣು ಮಿಟುಕುತಿತ್ತು' ಎಂಬ ಬಿ. ಎಂ. ಶ್ರೀ ಪದ್ಯದಿಂದ ಹಿಡಿದು 'ಮತ್ತ ಪಂದರ ಬಂದಾಗ' ಎಂಬ ಶಶಿಕಲಾ ವೀರಯ್ಯಸ್ವಾಮಿಯವರ ಕವಿತೆಯವರೆಗೆ. 'ಇನ್ನು ಮುಂದೆ ಲಾಂಛನಗಳಿಲ್ಲ' ಎಂದ ಎಚ್.ಎಲ್.ಪುಷ್ಪ ಗುಡಿಸಿಲಿನಲ್ಲಿ ಗುಲಾಬಿ ಅರಳಿಸಿದ ಸಿದ್ದಲಿಂಗಯ್ಯ ಅಲ್ಲಮಪ್ರಭು ಬೆಟ್ಟದೂರು, ಇಡಿಯಾಗಿ ಶಿವಪ್ರಕಾಶರ ಕಾವ್ಯ... ಹೀಗೆ ಒಬ್ಬರೇ ಇಬ್ಬರೇ ಯಾರ್ಯಾರ ಹೆಸರು ಹೇಳಲಿ? ಕುವೆಂಪು ಹೇಳಿದಂತೆ 'ಅಶ್ರುತ ಕಾವ್ಯಂ ಅಭಿರಾಮ ತರಂ' ಹೇಳಿದ್ದಕ್ಕಿಂತ ಹೇಳದೆ ಇರುವುದು ದೊಡ್ಡದಿದೆ.

* ನಿಮ್ಮ 'ಅಮ್ಮನಿಗೆ' ಕವಿತೆ ಹೆಣ್ಣಿನ ಮೇಲೆ ಬಲಾತ್ಕಾರದಿಂದ ಹೊರಿಸಲ್ಪಟ್ಟ ಪರಂಪರೆಯ ಕಟ್ಟುಪಾಡುಗಳಿಗೆ ಕಾವ್ಯದ ಮೂಲಕ ಉತ್ತರ ಕೊಡುವ ಮಾದರಿಯೊಂದನ್ನು ಹಾಕಿಕೊಟ್ಟಿತು. ಈ ಪದ್ಯ ಬಂದನಂತರ 'ಅಮ್ಮನಿಗೆ' ಪದ್ಯದ ತರಹವೇ ಅಂಥದ್ದೇ ಕವಿತೆಗಳನ್ನು ಬಹಳಷ್ಟು ಕವಯಿತ್ರಿಯರು ಬರೆದಿದ್ದಾರೆ. ಕಾವ್ಯಕೃಷಿಯ ಪ್ರಾರಂಭದಲ್ಲೇ ಬಹಳ ಚಿಕ್ಕ ವಯಸ್ಸಿನಲ್ಲಿ ನೀವು ಬರೆದ ಕವಿತೆಯದು. ಆ ಕವಿತೆ ಪ್ರಕಟವಾದಾಗ ನಿಮ್ಮ ಲೋಕದ ಪ್ರತಿಕ್ರಿಯೆ ಹೇಗಿತ್ತು?

ಸ.ಉಷಾ : ನನ್ನ ಹದಿನೇಳನೇ ವಯಸ್ಸಿನಲ್ಲಿ ಬರೆದ ಪದ್ಯವದು. ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಯಿತು. ನನ್ನ ಲೋಕ ಭಿನ್ನ ಮತ್ತು ವೈವಿಧ್ಯಮಯ. ನನ್ನ ಇಬ್ಬರೂ ಅಜ್ಜಂದಿರು ಕವಿತೆ ಓದಿ ಮುಖ ಸಿಂಡರಿಸಿಕೊಂಡರು. ನನ್ನ ಅಪ್ಪ ನನ್ನ ಕವಿತೆ ಪ್ರಕಟವಾಗಿದ್ದಕ್ಕೆ ಸಂತೋಷಪಟ್ಟರೂ ಮಗಳು ಅಂತ ಕವಿತೆ ಬರದಿದ್ದಕ್ಕೆ ಮುನಿಸಿಕೊಂಡರು. ಎಂ.ಎಯಲ್ಲಿ ನನ್ನ ಗುರುಗಳಾದ ಹೆಚ್.ಎಂ ಚನ್ನಯ್ಯ ಮತ್ತು ಸುಧಾಕರ್ ಇಬ್ಬರೂ ಕವಿತೆಯನ್ನು ಮೆಚ್ಚಿಕೊಂಡು 'ಪರಂಪರೆ' ಪತ್ರಿಕೆಯಲ್ಲಿ ಪ್ರಕಟಿಸಿದರು. ನನ್ನ ಸಹಪಾಠಿಗಳಂತೂ ನನ್ನನ್ನು ತಲೆ ಮೇಲೆ ಹೊತ್ತು ಮೆರೆದರೆಂದೇ ಹೇಳಬೇಕು. ಜೊತೆಗೆ ಅಮ್ಮನಿಗೆ ಸ ಉಷಾ ಎಂದೇ ಗುರುತಿಸಲಾರಂಭಿಸಿದರು. ಕಾಲೇಜಿನಲ್ಲಿ ಕವಿ ಎನ್ನುವ ಪಟ್ಟ ಸಿಕ್ಕಿತು. ತೇಜಸ್ವಿನಿ ನಿರಂಜನ, ಪ್ರಸನ್ನ ಕುಮಾರ್, ಎ.ಕೆ.ರಾಮಾನುಜನ್ , ರಾಮಚಂದ್ರ ಶರ್ಮ ಈ ನಾಲ್ವರು ಈ ಒಂದೇ ಕವಿತೆಯನ್ನು ಅನುವಾದಿಸಿದರು. ಸಲ್ಮಾನ್ ರಶ್ದಿ ಡೆಕ್ಕನ್ ಹೆರಾಲ್ಡ್‌ನಲ್ಲಿ ಹೆಣ್ಣಿನ ಪ್ರತಿಭಟನೆ ಕುರಿತು ಬರೆದ ಲೇಖನದಲ್ಲಿ ಈ ಕವಿತೆಯನ್ನು ಪ್ರಸ್ತಾಪಿಸಿದರು.

* ಮೂಲತಃ ವೈದಿಕ ಹಿನ್ನೆಲೆಯಿಂದ ಬಂದ ನೀವು ನಿಮ್ಮ ಸಹಪಾಠಿ-ಗೆಳೆಯ ವೈ. ಮಂಜಪ್ಪ ಅವರನ್ನು ವಿವಾಹ ಆಗುವಾಗ ಪತಿಯ ವೀರಶೈವ ಧರ್ಮವನ್ನು ಸ್ವೀಕರಿಸುತ್ತೀರಿ. ನಿಮ್ಮ ಈ ನಿರ್ಧಾರದ ಹಿಂದೆ ಯಾರದ್ದಾದರೂ ಒತ್ತಾಯ ಅಡಗಿತ್ತೇ? ಅಥವಾ ಸ್ವಇಚ್ಛೆಯಿಂದ ನೀವೇ ಈ ನಿರ್ಧಾರ ತೆಗೆದುಕೊಂಡ್ರಾ? ಮತ್ತು ಇವತ್ತು ಈ ನಿರ್ಧಾರದ ಬಗ್ಗೆ ನಿಮ್ಮಲ್ಲಿ ಮೂಡುವ ಭಾವನೆ ಏನು?

ಸ.ಉಷಾ : ವೈದಿಕ ಹಿನ್ನೆಲೆ ಎಂಬುದು ದೊಡ್ಡ ಪದ . ಬ್ರಾಹ್ಮಣ ಕುಟುಂಬದಿಂದ ಬಂದೆ ಎಂಬುದು ವ್ಯಾವಹಾರಿಕ ಸತ್ಯ, ವೇದವಾಗಲೀ, ವೈದಿಕ ಪಠ್ಯಗಳಾಗಲೀ, ವಚನ ಚಳವಳಿಯ ಸಿದ್ಧಾಂತಗಳಾಗಲೀ ಇಂದಿನ ಬದುಕಿನ ಮೇಲೆ ನಿಯಂತ್ರಣ ಅಥವಾ ಪ್ರಭಾವ ಹೊಂದಿಲ್ಲ, ನಾ[...] ಬ್ರಾಹ್ಮಣ ಅಥವಾ ನಾನು ಲಿಂಗಾಯತ ಎಂಬ ಕಟ್ಟುಸಿ[...] ನಂಬುಗೆ ಸಮಾಜದಲ್ಲಿ ನಮ್ಮನ್ನು ಕಿರುವಿಭಾಗಗಳ[...] ಪ್ರತ್ಯೇಕಿಸಿ ಇಡುತ್ತದೆ ಅಷ್ಟೆ. ನಾನು ಲಿಂಗದೀ[...] ಪಡೆದುಕೊಂಡದ್ದು ನಿಜ, ಇದರಲ್ಲಿ ಯಾರ ಒತ್ತಾಯ[...] ಇರಲಿಲ್ಲ, ಅದೊಂದು ಸ್ವಇಚ್ಛೆಯ ನಿರ್ಧಾರವೇ ಆಗಿ[...] ಆ ಬಗ್ಗೆ ನನಗೆ ಮಿಶ್ರ ಭಾವನೆಗಳಿದ್ದವು. ಆ ನಿರ್ಧಾ[...] ನಾನು ನಾಳೆ ಪ್ರವೇಶಿಸಿ ಬಾಳಬೇಕಾದ ಕುಟುಂಬ ಮ[...] ಸಮಾಜದ ಕುರಿತ ಒಂದು ಇತ್ಯಾತ್ಮಕ ಕುತೂಹಲ[...] ಆಗಿತ್ತು.

ನಾವಿಬ್ಬರೂ ಜಾತಿಯನ್ನು ಮೀರಬೇಕೆಂ[...] ಮದುವೆಯಾದವರಲ್ಲ, ಜಾತಿ ನಮ್ಮ ಪ್ರೀತಿಗೆ ಅಡ್ಡಿಯಾಗ[...] ಇಲ್ಲ, ಜಾತಿಯನ್ನು ಮೀರಿ ಮದುವೆಯಾಗಿ ವಯ[...] ಮೀರಿದರೂ ಪರಸ್ಪರರನ್ನು ಗೌರವ ಮತ್ತು ಪ್ರೀತಿಯಿಂ[...] ಕಾಣುವ ಮಾದರಿ ನನ್ನ ಕಣ್ಣ ಮುಂದೆಯೇ ಇತ್ತು, ಲೇಖಕಿ[...] ಮತ್ತು ನನ್ನ ಗುರುಗಳಾದ ಪ್ರೊ.ಬಿ.ಎಸ್.ರುಕ್ಕಮ್ಮ ಮ[...] ಪ್ರೊ.ಪಿ.ವಿ.ಚಂದ್ರಶೇಖರ್ ದಂಪತಿ ಮತ್ತು ಮಹಾರಾ[...] ಕಾಲೇಜಿನಲ್ಲಿ ದೈಹಿಕ ಶಿಕ್ಷಕರಾಗಿದ್ದ ಮುತ್ತಮ್ಮ ಮ[...] ಅದೇ ಕಾಲೇಜಿನ ಪ್ರಾಂಶುಪಾಲರಾದ ಭಗವಾನ್ [...] ಇಬ್ಬರು ದಂಪತಿಗಳ ಮಾದರಿ ನನ್ನ ಮುಂದಿತ್ತು. ನಾವಿಬ್ಬ[...] ಪರಸ್ಪರ ಪ್ರೀತಿಸುವ ವಿಷಯ ತಿಳಿದ ಸಿರಿಗೆರೆಯ ತರಳಬಾ[...] ಬೃಹನ್ಮಠದ ಅಂದಿನ ಗುರುಗಳು ಶ್ರೀ ಶಿವಕುಮಾ[...] ಶಿವಾಚಾರ್ಯ ಮಹಾಸ್ವಾಮಿಗಳು ನಮ್ಮ ಮದು[...] ಮಾಡಿಸಿದರು. ಅವರು ಆ ಸಂದರ್ಭದಲ್ಲಿ ಒಂದು ಮಾ[...] ಹೇಳಿದ್ದರು 'ಜಾತಿಯನ್ನು ಸೃಷ್ಟಿಸಿದ್ದು ಮಠಗಳು. ಆದ್ದ[...] ಜಾತಿಯನ್ನು ಹೋಗಲಾಡಿಸಲು ಅಂತರಜಾತೀಯ ವಿವಾ[...] ಮಾಡಿಸುವುದು ಮಠಗಳು ತಾವು ಕೊಡುವ ತಪ್ಪುಕಾ[...] ಎಂದು ತಿಳಿದು ಅಂತರಜಾತೀಯ ವಿವಾಹವ[...] ಮಾಡಿಸಬೇಕು' ನಮ್ಮಿಂದ ಒಂದು ಪೈಸೆಯ[...] ತೆಗೆದುಕೊಳ್ಳದೆ ಅವರು ಮಠದ ಖರ್ಚಿನಲ್ಲಿ ನ[...] ಮದುವೆ ಮಾಡಿಸಿದ್ದರು.


ನನ್ನ ಅಂದಿನ ನಿರ್ಧಾರದ ಬಗ್ಗೆ ಈ ಹೊತ್ತು ನ[...] ಮೂಡುವ ಭಾವನೆ ಏನು ಎಂದು ಕೇಳಿದ್ದೀರಿ, [...] ಮಗ ಅಂತರ್ ಧರ್ಮೀಯ ವಿವಾಹವಾಗಿದ್ದಾನೆ. ಅವ[...] ರಿಜಿಸ್ಟರ್ ಮದುವೆ. ಇಂದಿಗೂ ನನ್ನ ಸೊಸೆಗೆ ನ[...] ನಮ್ಮ ಸಾಂಪ್ರದಾಯಿಕ ಆಚರಣೆಗಳನ್ನು ಆಚರಿಸು[...] ಯಾವ ಒತ್ತಡವನ್ನು ತಂದಿಲ್ಲ. ನನ್ನ ಇಂದಿನ ಈ ರೀತಿ[...] ಕ್ರಿಯೆ ನನ್ನ ಅಂದಿನ ನಿರ್ಧಾರದ ಹಿನ್ನೆಲೆಯ[...] ರೂಪುಗೊಂಡಿರುವುದು.

* ರೈತಸಂಘದ ಹೋರಾಟ ಮುಂಚೂಣಿಯ[...] ಕಾಲದಲ್ಲಿ ನೀವು ಮತ್ತು ಮಂಜಪ್ಪ ಸರ್ ಇಬ್ಬರೂ [...] ಸಂಘಟನೆ ಜೊತೆ ಗುರುತಿಸಿಕೊಂಡಿದ್ರಿ. ಆ ಅನು[...] ಹೇಗಿತ್ತು? ಯಾಕೆ ಈ ಸಖ್ಯ ಹೆಚ್ಚು [...] ಮುಂದುವರೆಯಲಿಲ್ಲ? ನಂಜುಂಡಸ್ವಾಮಿಯವರದು [...] ಸರ್ವಾಧಿಕಾರಿ ಧೋರಣೆ ಎನ್ನುತ್ತಾರೆ ನಿಜವೇ?


ಸ.ಉಷಾ : ನಾನು ಒಂದು ರೈತ ಕುಟುಂ[...] ಕಿರಿಯ ಮಗನನ್ನು ಮದುವೆಯಾಗಿ ಬಂದವಳು. [...] ಮಂದಿಯೆಲ್ಲ ದುಡಿದರೂ ಹೊದಿಕೆಯನ್ನು ಕಾಲಿಗೆ[...] ತಲೆಗಿಲ್ಲ ತಲೆಗೆಳೆದರೆ ಕಾಲಿಗಿಲ್ಲದ ಗ್ರಾಮೀಣ ಕೃಷಿ ಬದು[...] ನಾನು ಹತ್ತಿರದಿಂದ ನೋಡಿದ್ದೇನೆ. ಹಾಗೆ ನೋಡಿ[...] ನನಗೆ ರೈತ ಸಂಘಟನೆಯಲ್ಲಿ ಪಾಲ್ಗೊಂಡು ವಿದೇಶ ಪ್ರ[...] ಮಾಡಿ ಬರುವ ಹೆಚ್ಚಿನ ಅರ್ಹತೆಗಳೇನು ಇರಲಿಲ್ಲ, [...] ನಂಜುಂಡಸ್ವಾಮಿಯವರು ರೈತರ ವಿದೇಶ ಪ್ರವಾಸ[...] ಆಯೋಜಿಸಿದಾಗ ಹಾಸನ ಜಿಲ್ಲೆಯ ರೈತ ಸಂಘಟನೆಯ[...] ಹೆಣ್ಣುಮಕ್ಕಳೂ ಪ್ರವಾಸಕ್ಕೆ ಬರಬೇಕೆಂಬ ದೃಷ್ಟಿಯಿ[...] ಕರೆದೊಯ್ದರು. ಹಾಗೆ ಮಂಜಪ್ಪನವರ ಪತ್ನಿಯಾಗಿ [...] ರೈತ ಸಂಘಟನೆಯಲ್ಲಿ ಪಾಲ್ಗೊಂಡಿದ್ದೇನೆ. ರೈತ ಸಂಘಟ[...] ಜೊತೆಗಿನ ಅನುಭವ ತಿಳಿವಳಿಕೆ ಕೊಡುವಂತಿತ್ತು. ರ[...] ಪೀಟರ್ ದಿ ಗ್ರೇಟ್‌ನಿಂದ ಹಿಡಿದು ಮಾನ್‌ಸಿಂಗ್[...] ಹಲವು ನಾಯಕರು ರೈತರನ್ನು ಶಿಸ್ತಿಗೆ ಒಳಪಡಿ[...] ಯತ್ನಿಸಿದ್ದಾರೆ. ರೈತರು ಶಿಸ್ತುಬದ್ಧವಾಗಿ ತಮ್ಮ ಕೃಷಿ [...] ಮಾಡಿದರೆ ಮಾರುಕಟ್ಟೆ ಮೇಲೆ ಒಂದು ಕಣ್ಣು [...] ಕೆಲಸ ಮಾಡಿದರೆ ಅವರ ಹಲವು ತೊಂದರ[...] ಕಡಿಮೆಯಾಗುತ್ತವೆ ಎಂದು ನನಗೆ ಅನಿಸುತ್ತದೆ.

ಪ್ರೊ. ನಂಜುಂಡಸ್ವಾಮಿಯವರ ಹಲವು ಸಭೆ[...] ನಾನು ಪಾಲ್ಗೊಂಡಿದ್ದೇನೆ. ಅನೇಕ ವಿಷಯಗಳ ಬಗ್ಗೆ [...] ನಮಗೆ ತಿಳಿವಳಿಕೆ ಕೊಟ್ಟರು. ಆಹಾರ ಸ್ವಾವಲಂಬನೆ[...] ತಳಿಗಳ ಸಂರಕ್ಷಣೆ, ವಿದೇಶಿ ಬೀಜ ಕಂಪನಿಗಳು ಇ[...]





ಬಪ್ಪನಾಡಿನಲ್ಲೊಂದು ಸುಂದರ ತರವಾಡ್



...ಪ್ಪನಾಡು ಮಂಗಳೂರು ತಾಲೂಕು ಮುಲ್ಕಿ ...ಳಿಯಲ್ಲಿರುವ ಮಂಗಳೂರು, ಉಡುಪಿ ರಾಷ್ಟ್ರೀಯ ...ಗೆ ಪಕ್ಕದಲ್ಲಿರುವ ಒಂದು ಸಣ್ಣ ಊರು. ಇಲ್ಲಿ ...ಷ್ಠಾರಿ ಪ್ರತಿಷ್ಠಾಪನೆ ಮಾಡಿದ ದುರ್ಗಾಪರಮೇಶ್ವರಿ ...ನವಿದೆ ಮತ್ತು ಸುತ್ತಲ ಒಂಭತ್ತು ಮಾಗಣೆಗಳಲ್ಲಿ ...ರು ಭೂತದ ಗುಡಿಗಳಿವೆ. ಬಿಜೆಪಿ ಪ್ರಾಬಲ್ಯದ ...ಲ್ಲಿ ಈ ಎಲ್ಲಾ ಭೂತದ ಗುಡಿಗಳೂ ...ಣಗೊಂಡು ನಳನಳಿಸುತ್ತಿವೆ, ಅಲ್ಲದೆ ಹತ್ತಿರದ ...ಡ್ರೆಯಲ್ಲಿ ಸುರ್ಝುಲಾನ್, ಉಡುಪಿ ಪವರ್ ...ರೇಶನ್(ಉಷ್ಣ ಸ್ಥಾವರ)ಗಳು ಬಂದದ್ದರಿಂದ ಈ ...ದಲ್ಲಿ ಹಲವು ಬಹುಮಹಡಿ ಕಟ್ಟಡಗಳು ತಲೆ ...ಮುಂದೆ ಇಲ್ಲಿ ನಗರದ ವ್ಯವಸ್ಥೆಗೆ ತೊಂದರೆ ಕೊಡಲು ...ಗಿವೆ. ಇಂತಹ ಊರಿನಲ್ಲಿ ಬಪ್ಪನಾಡಿನಿಂದ, ಕೊಳಚಿ...ಕ್ಕೆ ಹೋಗುವ ಓರೆಕ್ಕೋರೆ ರಸ್ತೆಯಲ್ಲಿ, ...ಬೆಟ್ಟುವಿನಲ್ಲಿ ನಾನೀಗ ಬರೆಯಲಿರುವ ಸುಂದರ ...ಡ್' ಬಸ್ರಿಕಟ್ಟೆ ಹೌಸ್ ಇದೆ. ಸುಮಾರು 85 ...ಷಗಳ ಹಿಂದೆ ಈ ಸಾಂಪ್ರದಾಯಿಕ ಬ್ಯಾರಿ (ಮುಸ್ಲಿಂ) ...ನ್ನು ಕಟ್ಟಿಸಿದವರು, ಆಗ ಚಿಕ್ಕಮಗಳೂರು ಜಿಲ್ಲೆಯ ...ಪೇಟೆಯಲ್ಲಿ ಹೋಲ್‌ಸೇಲ್ ವ್ಯಾಪಾರಿಯಾಗಿದ್ದ ಇಸ್ಮಾಯಿಲ್ ಅಬ್ಬ, ಇವರ ಅಣ್ಣ ಇದಿನಬ್ಬ, ತಮ್ಮ ...ಸ್. ಇಸ್ಮಾಯಿಲ್ ಅಬ್ಬರಿಗೆ 9 ಮಕ್ಕಳು (4 ಗಂಡು 5 ಹೆಣ್ಣು) ಈ ಎಲ್ಲಾ ಮಕ್ಕಳ ಸಂತೋಷ, ದುಃಖಗಳಿಗೆ ಸಾಕ್ಷಿ ಈ ತರವಾಡ್.

ಈಗ ಬಪ್ಪನಾಡಲ್ಲಿ ನೆಲೆಸಿರುವ ನಾನು ದಿನಾ ಬೆಳಗ್ಗೆ ವಾಕಿಂಗ್‌ಗೆ ಹೋಗುವಾಗ 'ಅಗ್ರಜ' ಎನ್ನುವ ಬೃಹದಾಕಾರದ ಬಹುಮಹಡಿ ಕಟ್ಟಡದ ಮುಂದಿರುವ ಈ ಸಾಂಪ್ರದಾಯಿಕ ಮುಸ್ಲಿಂ ಮನೆ ನೋಡಿ ಆಕರ್ಷಿತನಾದೆ. ಮುಖ್ಯವಾಗಿ ಈಗ ಈ ಮನೆಯಲ್ಲಿರುವ ಅಮಾನುಲ್ಲಾ ಆ ಹಳೇ ಕಾಲದ ಮನೆಯನ್ನು ದಿನಾ ಒರೆಸಿ, ಒರೆಸಿ ಸ್ವಚ್ಛವಾಗಿ ಇಟ್ಟುಕೊಂಡ ರೀತಿಗೆ ನಾನು ಬೆರಗಾದೆ. ಒಂದು ಲುಂಗಿ ಮತ್ತು ಬನಿಯನ್ ಹಾಕಿಕೊಂಡಿರುವ ಈ ಅಮಾನುಲ್ಲಾ ಮೀನು ವ್ಯಾಪಾರಿ ಕರ್ಮಯೋಗಿ. ದಿನಾ ಬೆಳಗ್ಗಿನ ಜಾವ 4.30ಕ್ಕೆ ಎದ್ದು ಹತ್ತಿರದಲ್ಲೇ ಇರುವ ಮಸೀದಿಗೆ ನಮಾಜ್‌ಗೆ ಹೋಗಿ ಬರುವ ಇವರು ಒಂದು ಲೋಟ ಚಹಾ ಕುಡಿದು, ಈ 'ತರವಾಡ್'ನ ಮೂಲೆಮೂಲೆಗಳನ್ನು ತಿಕ್ಕಿ ತಿಕ್ಕಿ ಒರೆಸಿ, ಸ್ವಚ್ಛಗೊಳಿಸುತ್ತಾರೆ. ಅವರ ಈ ಶ್ರದ್ಧೆ ಕಂಡು ನನಗೆ ಸಂತೋಷವಾಯಿತು.

ಈಗಾಗಲೇ ಹೇಳಿದಂತೆ ಇದು ಸುಮಾರು 85 ವರ್ಷ ಹಳೆಯ ಮನೆ. ಮನೆಯ ತುಂಬಾ ಮರದ ಕೆತ್ತನೆ ಇರುವ ಬಾಗಿಲು, ಕಿಟಕಿ ಏಣಿ ಇತ್ಯಾದಿಗಳಿವೆ. ನೆಲಕ್ಕೆ ಟೈಲ್ಸ್ ಹಾಕದೆ ಸಿಮೆಂಟ್ ಹಾಕಿ, ಅದರ ಮೇಲೆ ಕಪ್ಪು ಮತ್ತು ಕೆಂಪು ಕಾವೆ ಹಾಕಲಾಗಿದೆ. ಸ್ವಚ್ಛತೆಯಿಂದಾಗಿ ನೆಲ ಹೊಳೆಯುತ್ತಿದೆ. ಹೊರಗೆ ಕುಳಿತುಕೊಳ್ಳಲು ಜಗಲಿ ಇದೆ. ಅದರ ತುಂಬಾ ಸುಂದರವಾದ ಕೆತ್ತನೆಗಳಿರುವ ಕುರ್ಚಿಗಳಿವೆ. ಮನೆಯ ಒಳಗಡೆಯೂ ಮೇಜು, ಕುರ್ಚಿ, ಮಂಚಗಳೆಲ್ಲಾ ಕಲಾತ್ಮಕ ಕೆತ್ತನೆಗಳನ್ನು ಒಳಗೊಂಡಿವೆ. ಮರದ ಏಣಿಯಿಂದ ಮೇಲೆ ಹೋಗಬಹುದಾದ ಪುಟ್ಟ ಮಹಡಿ ಇದೆ. ಅಲ್ಲಿ ಪ್ರಾರ್ಥನೆ ಮಾಡಬಹುದು. ಹೀಗೆ ಈ ಮನೆ ಸಹಜ ಸೌಂದರ್ಯದಿಂದ ಶೋಭಿಸುತ್ತಿದೆ, ಆದರೆ ದುರದೃಷ್ಟವಶಾತ್ ಈ ಸಾಂಪ್ರದಾಯಿಕ ಮನೆಯ ಸುತ್ತ ಬೃಹದಾಕಾರದ ಫ್ಲಾಟ್‌ಗಳು ತಲೆ ಎತ್ತುತ್ತಿವೆ. ಹಿಂದೆ ಇವರ ಮನೆಯಿಂದಲೇ ಹತ್ತಿರದ ಮಸೀದಿಯ ಗೋಪುರ ಕಾಣುತ್ತಿತ್ತು. ಈಗ ಅದಕ್ಕೆ ಹೊಸತಾಗಿ ತಲೆ ಎತ್ತಿರುವ ಬಹುಮಹಡಿ ಕಟ್ಟಡಗಳು ಅಡ್ಡ ಬಂದಿವೆ.

ನನ್ನನ್ನು ಆತ್ಮೀಯತೆಯಿಂದ ಮನೆಯೊಳಗೆ ಕರೆದು ತಮ್ಮ ಕೊಣಾಜೆಯ ತೋಟದ ಬಾಳೆಹಣ್ಣು ಕೊಟ್ಟು ರುಚಿಯಾದ ಚಹಾ ಕೊಟ್ಟು ಸತ್ಕರಿಸಿದರು.

ಈಗ ಈ ಮನೆಯಲ್ಲಿ ಅಮಾನುಲ್ಲಾ ಮತ್ತು ಅವರ ತಮ್ಮ ಸಲೀಮ್ ಇದ್ದಾರೆ. ಅಮಾನುಲ್ಲಾ ಅವರಿಗೆ ಮೂರು ಮಕ್ಕಳು. ಮಗಳು ಅಫ್ರಿನಾ, ಮಗಂದಿರು ಅಫ್ತರ್ ಮತ್ತು ಆಶಿಶ್.

ಸಲೀಮ್ ಅವರ ಮಕ್ಕಳು ಸನಾ, ಶಾಮ್, ಸಹಲ್. ನನಗೆ ಈ ಅರೇಬಿಕ್ ಭಾಷೆಯಲ್ಲಿರುವ ಹೆಸರುಗಳೆಂದರೆ ತುಂಬಾ ಇಷ್ಟ ಅವುಗಳ ಅರ್ಥ ತಿಳಿದುಕೊಳ್ಳುವುದು ಇನ್ನೂ ಇಷ್ಟ.

ಅಮಾನುಲ್ಲಾರಿಗೆ ಊರಿನ ಎಲ್ಲಾ ಜಾತಿ, ಮತಗಳ ಜತೆಗೆ ಸಂಬಂಧ ತುಂಬಾ ಚೆನ್ನಾಗಿದೆ. ನಾನು ಅಲ್ಲಿ ಜಗಲಿಯಲ್ಲಿ ಕುಳಿತಿರುವಾಗಲೇ ಹಲವು ಬಿಲ್ಲವ, ಮೊಗವೀರ, ಬಂಟ ಜಾತಿಯ ಜನರು ಅವರ ಜೊತೆ ತಮ್ಮ ಕಷ್ಟ ಸುಖ ಮಾತನಾಡಿಕೊಂಡು ಹೋದರು. ಕರ್ಮಯೋಗಿ ಸರಳ ಸಜ್ಜನ ಅಮಾನುಲ್ಲಾ ಹೇಳುತ್ತಾರೆ "ಹಣ ಹೇಗೂ ಸಂಪಾದಿಸಬಹುದು. ಅದಕ್ಕಿಂತ ಮುಖ್ಯ ಒಳ್ಳೆಯ ಹೆಸರು ಸಂಪಾದಿಸುವುದು."

ಸುತ್ತಲ ಕಾಂಕ್ರೀಟ್ ಕಟ್ಟಡಗಳ ನಡುವೆ ಈ ಮುಸ್ಲಿಂ ಸಾಂಪ್ರದಾಯಿಕ ಮನೆ 'ತರವಾಡ್' ಉಳಿಯಲಿ ಎಂದು ಆಶಿಸಿದೆ. ಅದೇ ರೀತಿ ಅಮಾನುಲ್ಲಾರಂತಹ ಸರಳ ಸಜ್ಜನರು.

ಸಲೀಮ್‌ರ ಮಗ ಶಾಮ್ ಇಂಗ್ಲಿಷ್ ಮೀಡಿಯಂ ನಾರಾಯಣ ಗುರು ಶಾಲೆಗೆ ಹೋಗುತ್ತಿದ್ದಾನೆ. ಏಳನೆ ತರಗತಿ. ನನಗೆ ಬಾಳೆಹಣ್ಣು ಚಹಾ ತಂದು ಕೊಟ್ಟವನು ಅವನೇ. ನನ್ನ ಜತೆಗೆ ಇಂಗ್ಲಿಷ್‌ನಲ್ಲಿ ಮಾತನಾಡಿದ! ಅವನ ಕಾಲಕ್ಕೆ ಈ 'ತರವಾಡ್' ಹೇಗಿರಬಹುದು? ಕಾದು ನೋಡಬೇಕಿದೆ.

- ಡಾ|| ಹಯವದನ ಉಪಾಧ್ಯ,
ಕುಂದಾಪುರ

...ಅವರಿಗೆ ಆಳವಾದ ಒಳನೋಟವಿತ್ತು. ನಾನು ...ಘದಲ್ಲಿ ಪದಾಧಿಕಾರಿಯಾಗಿ ಕೆಲಸ ನಿರ್ವಹಿಸಿಲ್ಲ, ...ಂದ ಅವರ ಸರ್ವಾಧಿಕಾರಿ ಧೋರಣೆಯ ...ಯವಾಗಲೀ ಅನುಭವವಾಗಲೀ ನನಗೆ ಆಗಿಲ್ಲ.

...ನವೋದಯ, ನವ್ಯ, ಬಂಡಾಯ ಹೀಗೆ ಎಲ್ಲ ಕಾವ್ಯ ...ಗಳ ಉಬ್ಬರವಿದ್ದಾಗಲೂ ಕವಿತೆ ಬರೆದ ನೀವು ...ವುದರ ಜೊತೆಗೂ ನೇರವಾಗಿ ಗುರುತಿಸಿಕೊಂಡವರಲ್ಲ ...?

...ಉಷಾ : ನಾನು ಬರೆಯುವ ಹೊತ್ತಿಗೆ ನವೋದಯ ...ಸವಾಗಿತ್ತು, ಆದರೆ ಅದರ ಬಗ್ಗೆ ಪ್ರೀತಿಗೌರವಗಳಿದ್ದವು. ...ಉಬ್ಬರವಿತ್ತು. ನವ್ಯ ಕನ್ನಡ ಕವಿಗಳಿಗೆ ಒಂದು ...ಬರಹದ ಬಿಗಿಕಟ್ಟನ್ನು ಕೊಟ್ಟಿತು. ಪದ್ಯಕ್ಕೆ ಹೊಸ ...ನ್ನು ಕೊಟ್ಟಿತು. ಬಂಡಾಯ, ದಲಿತ ಮತ್ತು ಇವೆರಡನ್ನು ...ಂಡಿರುವ ನವ್ಯೋತ್ತರ ಕಾವ್ಯದಲ್ಲಿ ನವ್ಯದ ಪದ್ಯ ...ಮ ಬಿಗಿ ಕಟ್ಟು ಈಗಲೂ ಇದೆ. ನಾನು ಬಂಡಾಯ ...ಕ್ಯ ಸಂಘಟನೆಯ ಸದಸ್ಯಳಲ್ಲ, ಆದರೂ ಕಾಳೇಗೌಡ ...ವರ 1982 ರಲ್ಲಿ ಬಂಡಾಯ ಸಾಹಿತ್ಯ ಸಮಾವೇಶ ...ದರ ಆಶಯ ಭಾಷಣ ಮಾಡುವಂತೆ ಆಹ್ವಾನಿಸಿದ್ದರು. ಆಗ ನನಗೆ ಮಗ ಹುಟ್ಟಿ ಕೇವಲ ಹತ್ತು ...ಗಿತ್ತು(ನಗು). ನಾನು ಹೋಗಲಿಲ್ಲ. ನನ್ನನ್ನು ನಾನು ...ಯ ಕವಿ ಎಂದು ಕರೆದುಕೊಳ್ಳಲಾರೆ. ಆದರೆ ನನ್ನ ...ಯುಲ್ಲಿ ಬಂಡಾಯ ಮನೋಧರ್ಮವಿದ್ದು ಓದುಗರು ... ಬಂಡಾಯ ಕವಿ ಎಂದು ಗುರುತಿಸಿದರೆ ನನಗೇನು ...ವಿಲ್ಲ. ಸಂಘಟನೆಯ ಶಿಸ್ತುಗಳು ನನ್ನನ್ನು ಬಳಲಿಸುತ್ತವೆ. ... ಕೂಡಾ ಮಹಾದೇವರ ಹಾಗೆ ಮೆಟ್ಟಿಲಿಲ್ಲದ ಮಹಡಿ ... ಹೆಜ್ಜೆ ಮೂಡದ ಹಾದಿಯಲ್ಲಿ ಹೆಜ್ಜೆ ಇಡಲು ...ಸುತ್ತೇನೆ. ನನ್ನ ಕಾವ್ಯ ಹೋರಾಟದ ದಿಕ್ಕಿನಲ್ಲಿ ಸಾವಿರಾರು ...ಗು ಹರಿಯುವುದನ್ನು ಕುರಿತು ಹಾಡುವುದಿಲ್ಲ, ಎಲ್ಲ ...ಗು ಒಮ್ಮೆ ಗಮ್ಯಕ್ಕೆ ಧಾವಿಸುವಾಗ ಪುಟ್ಟ ಹನಿಯೊಂದು ...ವಾರು ಹನಿಗಳೊಡನೆ ಸೇರಿ ಕಾಡತೊರೆಯಾಗಲು ...ಸುತ್ತದೆ.

* ಕನ್ನಡ ಕಾವ್ಯ ಸಾಗುತ್ತಿರುವ ಪ್ರಸ್ತುತದ ದಾರಿಯ ...ಮಾತಾಡುವ ಉತ್ಸಾಹ ಇದೆಯೇ?

...ಉಷಾ : ಖಂಡಿತಾ ಇದೆ. ಮಾರುಕಟ್ಟೆಯ ಎಲ್ಲ ...ಮಗಳನ್ನು ಮೀರಿ ಕವಿತೆ ಬರುತ್ತಿದೆ. ಒಂದೆಡೆ ಅರ್ಥ ...ತ ಜಗತ್ತು ಇನ್ನೊಂದೆಡೆ ಕವಿತೆಯನ್ನು ಪ್ರೀತಿಸುವ ...ರು. ಕಾವ್ಯೋ ಚಿತ್ರದಲ್ಲಿ ಒಂದನ್ನೊಂದು ನುಂಗುತ್ತಿರುವ ...ಗಳ ಹಾಗೆ ಇಬ್ ಮತ್ತು ಯಾಂಗ್ ಬೆಳೆಯುತ್ತಿರುತ್ತಾರೆ. ...ದೆ ಹಣ ಬರುವಂತದ್ದೇ ಪುಸ್ತಕ ಪ್ರಕಟಿಸಿ ಹಣ ...ಕೊಳ್ಳುವ ವ್ಯಾಪಾರಿ ಪ್ರಕಾಶಕರಿದ್ದಾರೆ. ಇನ್ನೊಂದೆಡೆ ... ಅಗತ್ಯಗಳನ್ನು ಕಚ್ಚಿಯಾದರೂ ಕವಿತೆಯ ಪುಸ್ತಕ ... ತಂಬುವ ಭಾವುಕ ಕಾವ್ಯ ಪ್ರೇಮಿಗಳಿದ್ದಾರೆ. ಸ್ವಂತ ...ನನ್ನು ಕುಗೊಳ್ಳಿ ಓರ್ಗನಿಸಿ, ಕವಿತೆ ಓದಿಸುವವರಿದ್ದಾರೆ. ... ರೀತಿಯವರು ಸೇರಿಯೇ ಕಾವ್ಯ ಹುಟ್ಟುತ್ತದೆ. ಕವಿ...



ನೆರೂಡಾ ಹೇಳಿದಂತೆ 'ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟಿದ ಹಾಗೆ.'

* ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಮಂದಿಯ ಆತ್ಮಕಥೆಗಳು ಬರುತ್ತಿವೆ. ಅದರಲ್ಲೂ ಮಹಿಳೆಯರು ಮತ್ತು ದಲಿತರ ಆತ್ಮಕಥೆಗಳು ಪ್ರಕಟಗೊಳ್ಳುತ್ತಿವೆ. ನೀವೇನಾದರೂ ಆತ್ಮಕಥೆಯನ್ನು ಬರೆಯಬೇಕು ಎಂದುಕೊಂಡಿದ್ದೀರಾ? ಅಥವಾ ಈಗಾಗಲೇ ಆತ್ಮಕಥೆಯ ಬರವಣಿಗೆ ಪ್ರಾರಂಭವಾಗಿಬಿಟ್ಟಿದೆಯೇ?

ಸ.ಉಷಾ : ನಾನು ಆತ್ಮಕಥೆ ಬರೆಯಬೇಕು ಎಂದುಕೊಂಡಿಲ್ಲ, ನನ್ನ ಮೊದಲ ಕವನ ಸಂಕಲನದ ಹೆಸರೇ 'ತೂಗಲುಗೊಂಬೆಯ ಆತ್ಮಕಥೆ'. ನನ್ನ ಆತ್ಮಕಥೆ ಅತ್ಯಂತ ಸೂಕ್ಷ್ಮವಾಗಿ ಕವಿತೆಯಲ್ಲಿ ಬರೆಯಲ್ಪಟ್ಟಿದೆ. ನನ್ನ ಬಗ್ಗೆ ಮತ್ತು ನನ್ನ ಕಾವ್ಯ ಕ್ರಿಯೆಯ ಬಗ್ಗೆ ನಾನೇ ಬರೆದಿರುವ ಕೆಲವು ಬಿಡಿಬಿಡಿ ಲೇಖನಗಳಿವೆ. ಅವು ಯಾರಾದರೂ ಕೇಳಿದಾಗ ಬರೆದುಕೊಟ್ಟಿರುವ ಲೇಖನಗಳು. ನನ್ನ ಅಧ್ಯಾಪಕ ಜೀವನದಲ್ಲಿ ನನಗೆ ಹತ್ತಿರವಾದ ನನ್ನ ವಿದ್ಯಾರ್ಥಿನಿಯರು ಆ ಮೂಲಕ ನಾನು ನೋಡಿದ ಹೆಣ್ಣಿನ ಬದುಕನ್ನು ಅತ್ಯಂತ ಕಲಾತ್ಮಕವಾಗಿ ಪ್ರಬಂಧವೂ ಅಲ್ಲದ ಕಥೆಯೂ ಅಲ್ಲದ ಮಾದರಿಯಲ್ಲಿ ಬರೆಯಬೇಕೆಂಬ ಇಷ್ಟವಿದೆ ನನಗೆ -'ಕನ್ನಿಕೆಯರ ಕನಸುಗಳು' ಎಂಬ ಹೆಸರಿನಲ್ಲಿ, ಅದರಲ್ಲಿ ನಾನು ಒಂದು ಪುಟ್ಟ ಪಾತ್ರವಾಗಿಯೋ ನಿರೂಪಕಿಯಾಗಿಯೋ ಬರಬಹುದು. ನನ್ನ ಆತ್ಮಕಥೆಯಲ್ಲಿ ಇಂದಿನ ಉತ್ಸುಕ ಓದುಗರು ಕುತೂಹಲದಿಂದ ನಿರೀಕ್ಷಿಸುವ ರೋಮಾಂಚಕ ತಿರುವುಗಳೇನು ಇಲ್ಲ.

* 'ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ ಅಮ್ಮ ನನಗೆ ದಾರಿ ಬಿಡು' (ಅಮ್ಮನಿಗೆ) ಎಂದು ಬರೆದು ಹೆಣ್ಣಿನ ಆಯ್ಕೆಯ ಸ್ವಾತಂತ್ರ್ಯಕ್ಕೆ ಇಂಬುಕೊಟ್ಟ, ನೀವು ಇತ್ತೀಚಿಗೆ ಬಂದ 'ಹವಳ ಹಾರಿದ ಹೊತ್ತು 'ಸಂಕಲನದ ಬಹುತೇಕ ಕವಿತೆಗಳಲ್ಲಿ ಗಂಡು-ಹೆಣ್ಣು ಇಬ್ಬರೂ ಪರಸ್ಪರ ಯಾವುದೇ ಮೇಲರಿಮೆ-ಕೀಳರಿಮೆಗಳಿಲ್ಲದೆ ಬೇಂದ್ರೆ ಹೇಳಿದಂತೆ 'ಇಬ್ಬದಿಗೂ ಸೋತೆವು ಆಸರಾಗಿ ಜೋತೆವು'(ಸಖೀಗೀತ) ತರದ ಮಾಗಿದ ದಾಂಪತ್ಯ ಪ್ರೇಮದ ಚಿತ್ರಣವಿದೆ. ಇಂತಹ ಶಿಫ್ಟ್ ಹೇಗೆ ಸಾಧ್ಯವಾಯಿತು? '

ಸ.ಉಷಾ : ಒಬ್ಬ ಪುಟ್ಟ ಹುಡುಗಿ ತೀರಾ ಬಾಲ್ಯದಲ್ಲಿದ್ದಾಗ ಅವಳಿಗೆ ಅಷ್ಟು ಕಟ್ಟುನಿಟ್ಟುಗಳಿರುವುದಿಲ್ಲ. ಅವಳು ಹುಲ್ಲು, ಹಸಿರು,ಬಿಸಿಲುಗಳನ್ನು ಕುಡಿಯುತ್ತಾ ಬೆಳೆಯುತ್ತಾಳೆ. ಹೈಸ್ಕೂಲಿಗೆ ಬರುವ ಮುನ್ನವೇ ಅವಳ ಸುತ್ತ ಮುತ್ತಲಿನ ಗೋಡೆಗಳು ಗಟ್ಟಿಯಾಗುತ್ತವೆ. ಜನರೆಲ್ಲ ಬಾಗಿಲಾಗುತ್ತಾರೆ-ಚಿಲಕವಾಗುತ್ತಾರೆ, ಅಗಳಿಯಾಗುತ್ತಾರೆ. ಸಂಜೆಯ ಬ್ಯಾಡ್ ಮಿಂಟನ್, ವಾಯುವಿಹಾರಗಳಿಗೆ ಕತ್ತರಿ ಬೀಳುತ್ತದೆ. ಇದು 1970ರಲ್ಲಿ ನಾನಿದ್ದ ಮೈಸೂರಿನ ವಾತಾವರಣ. ಬದುಕಿನ ಸಹಜ ಸಂತೋಷಗಳು ನಿಯಂತ್ರಿತವಾದಾಗ ಆ ಒತ್ತಡಕ್ಕೆ ಹುಡುಗಿ ಸಿಡಿದೇಳುತ್ತಾಳೆ-ಎಲ್ಲ ಜಾಣೆಕಟ್ಟೆಗಳನ್ನು ಒಡೆದು ನುಗ್ಗಬೇಕು ಎಂದುಕೊಳ್ಳುವ ನದಿಯಾಗುತ್ತಾಳೆ. ಅದು ಆ ಕಾಲಕ್ಕೆ ಬಹಳ ಸಹಜವೂ ಅನಿವಾರ್ಯವೂ ಆದ ಬೆಳವಣಿಗೆ. ನನ್ನ ಕವಿತೆಗಳಲ್ಲಿ ಅಮ್ಮನಿಗೆ ಮತ್ತು ಹವಳ ಹಾರಿದ ಹೊತ್ತುಗಳ ನಡುವೆ ಹಲವು ಮಜಲುಗಳಿವೆ. ಈ ನೆಲದ ಹಾಡಿನಲ್ಲಿ ತನ್ನನ್ನು ಕೇವಲ ಸ್ತ್ರೀದೇಹವಾಗಿ ನೋಡಬಾರದೆಂಬ ತನ್ನ ಪುಟ್ಟ ಹೃದಯದಲ್ಲಿ ಅಡಗಿದ ಹಾಡು ಹಸೆ ಚಿತ್ರ ಕಥೆ ಕಾವ್ಯ ಕಟ್ಟಡಗಳನ್ನು ಗುರುತಿಸಬೇಕೆನ್ನುವ ಹಕ್ಕೊತ್ತಾಯವಿದೆ.

ಕವಿ, ಕಲಾವಿದರು ತಮ್ಮ ಸ್ವಾತಂತ್ರ್ಯದ ಬಗ್ಗೆ ಮಾತ್ರ ಯೋಚಿಸುತ್ತಿರುವುದಿಲ್ಲ. 'ಹವಳ ಹಾರಿದ ಹೊತ್ತು' ಅಲೆಮಾರಿ ಸಾಲೋಮನ್ನನಿಗೂ ಸೌಂದರ್ಯದರಮನೆಯಲ್ಲಿ ಸಮಾಧಿಯಾಗುವ ಹವಳಕ್ಕೂ ಮುಂದಿನ ತಲೆಮಾರನ್ನು ಕಟ್ಟಲು ಬೇಕಿರುವ ಉತ್ತರದಾಯಿತ್ವವನ್ನು ನೆನಪಿಸುತ್ತದೆ. ಹುಡುಗಿ ಹೀಗೆ ಇರಬೇಕು, ಹುಡುಗ ಹೀಗೆ ಇರಬೇಕು ಎಂಬ ಸಾಂಪ್ರದಾಯಿಕ ಸಮಾಜದ ಕಠಿಣ ರೇಖೆಗಳನ್ನು ಮೀರಿ ಅವರು ತಮ್ಮ ಸಂತನವನ್ನು ಸಾಲಮನ್ ಕುವರಿಯನ್ನು ಹವಳಕುಮಾರರನ್ನು ಬೆಳೆಸಬೇಕಾಗಿದೆ. ಅದು ಅಮ್ಮನಿಗೆ' ಪದ್ಯದ ಆಶಯಕ್ಕೆ ವಿರುದ್ಧವಾದುದಲ್ಲ - ಅದರ ಮುಂದುವರಿಕೆ ಅಮ್ಮನಿಗೆ ಕವಿತೆಯಲ್ಲಿ ತನ್ನ ಸ್ವಾತಂತ್ರ್ಯಕ್ಕಾಗಿ ಬಂಡೇಳುವ ಕವಿ ಮನಸ್ಸು ಹವಳ ಹಾರಿದ ಹೊತ್ತಿನಲ್ಲಿ ತನ್ನ ಸಂತಾನದ ಸ್ವಾತಂತ್ರ್ಯಕ್ಕೆ ರಕ್ಷೆಯಾಗಿ ಪೋಷಕೆಯಾಗಿ ನಿಲ್ಲುತ್ತದೆ. ಅಮ್ಮನಿಗೆ ಬರೆದ ಹುಡುಗಿಯೇ ಮುಂದೆ ಹವಳ ಹಾರಿದ ಹೊತ್ತು ಬರೆಯುವುದರ ಔಚಿತ್ಯ ಇಲ್ಲಿದೆ. ಇಲ್ಲಿರುವುದು ಬಂಡಾಯವೇ. ಹೆಣ್ಣಿನೊಳಗೊಂದು ಗಂಡು ಮನಸ್ಸು- ಇರುವಾಗ ಸಾಲಮನ್ ಕುವರಿಗೆ ಹವಳ ಕುಮಾರನಿಗೆ ಪೋಷಣೆ ರಕ್ಷಣೆ ಕೊಡಬೇಕಾದವರು ಯಾರು? 'ಅದು ಅಮ್ಮನಿಗೆ' ಬರೆದ ಕವಿ ಮನಸ್ಸಿನ ಸಹಜವಾದ ಬೆಳವಣಿಗೆ ಎಂದು ನಾನು ಭಾವಿಸಿದ್ದೇನೆ. ■


ಈಗ್ಗೆ ನಲವತ್ತು ವರ್ಷಗಳ ಹಿಂದೆ ಕನ್ನಡ ಕಾವ್ಯಲೋಕದಲ್ಲಿ ಹೊಸ ಸಂಚಲನ ಹುಟ್ಟಿಸಿದ ಸ. ಉಷರವರ 'ಅಮ್ಮನಿಗೆ' ಪದ್ಯವನ್ನೂ ಇಲ್ಲಿ ಮತ್ತೆ ಪ್ರಕಟಿಸಿದೆ.

ಅಮ್ಮನಿಗೆ

ಬೇಡಮ್ಮ ಬೇಡ
ಆಕಾಶದಗಲಕ್ಕು ನಿನ್ನ ಸೆರಗು ನೆರಿ ಹರ
ಬಿಸಿಲ ಮರೆಸಿ ಬದುಕಿನ ಹಸಿರ ಬಿಳಿಚಿಸಬೇಡ
ವರುಷ ಹದಿನೇಳಾಯ್ತು, ಸೆರಗು ಹಾರಿಸಿ ಅಲೆದು
ಕಂಡಕಂಡವರಿಗೆಲ್ಲ ಕಣ್ಣು ಹೊಡೆಯಬೇಡ
ಗಾಳಿಗುದುರೆ ಹತ್ತಿ ಗಂಡುಬೀರಿಯಾಗಬೇಡೆಂದು
ನಿನ್ನಮ್ಮ ಅವಳಮ್ಮ ಅವಳಮ್ಮ
ಲಾಗಾಯ್ತಿನಿಂದ ನನ್ನಂಥ ಹದ್ಯೆಗೆ
ಕಿವಿಯಲ್ಲೂದಿದ ಪುಂಗಿ ನೀನೂ
ಊದಬೇಡ
ಈಗತಾನೆ ಹೆಡೆಯಾಡಿಸುತ್ತಿದ್ದೇನೆ
ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ
ನನಗೆ ದಾರಿ ಬಿಡು

ಅಂಗಳದ ಗಿಡವ ಪ್ರದಕ್ಷಿಸಿ
ರಂಗೋಲಿ ಬರೆದು ಕೈಲಾಸ ಕಾಣಲು
ಗಾಳಿಬೆಳಕಿಲ್ಲದೆ ಹೆಣವಾಗಲು
ನಿನ್ನ ದಮ್ಮಯ್ಯ ನನ್ನ ಕೈಲಾಗೋದಿಲ್ಲ
ನೀ ಹಾಕಿರುವ ಅಣೆಕಟ್ಟೆ
ಒಡೆದು ಬರುಮಳೆಗೆ ಸೊಕ್ಕಿ
ಭೋರ್ಗರೆದು ನುಗ್ಗಿ
ನಿನ್ನಂತಾಗದೆ ಬದುಕುತ್ತೇನೆ
ನನಗೆ ದಾರಿ ಬಿಡು

(1973)




ಗೋಬೆಲ್ಸ್ ಸುಳ್ಳುಗಳೂ ಮತ್ತು 1984ರ ಸಿಖ್ಖರ ಹತ್ಯಾಕಾಂಡವೂ

'ಹಿಟ್ಲರ್ ತನ್ನ ಸಂಪುಟದಲ್ಲಿ ಗೋಬೆಲ್ಸ್ ಎಂಬ ಒಬ್ಬ ಮಂತ್ರಿಯನ್ನು ಇಟ್ಟುಕೊಂಡಿದ್ದ ಮತ್ತು ಆತ ಸುಳ್ಳನ್ನು ಪದೇಪದೇ ಹೇಳುವುದರ ಮೂಲಕ ಅದನ್ನು ಸತ್ಯವಾಗಿಸುತ್ತಿದ್ದ' ಎಂಬ ಮಾತು ಪಠ್ಯಪುಸ್ತಕಗಳಲ್ಲೂ ಸೇರಿ ಹೋಗಿದೆ. ಆದರೆ ಇತಿಹಾಸವೂ ಪುರಾಣದಂತೆ ಭಾಸವಾಗುವಂತೆ, ಈ ಮಾತು ಅರ್ಧ ಸತ್ಯದಂತೆಯೂ ಇನ್ನರ್ಧ ಕಲ್ಪನೆಯಂತೆಯೂ ಕಾಣುತ್ತಿತ್ತು. ಒಂದು ಸುಳ್ಳನ್ನು ಪದೇ ಪದೇ ಹೇಳುವುದರಿಂದ ಅದು ಸತ್ಯವಾಗುವುದು ಹೇಗೆ ಸಾಧ್ಯ? ಜನರೇನು ಮೂರ್ಖರೇ ಎಂಬಂತೆ ಅನಿಸುತ್ತಿತ್ತು. ಆದರೆ ವರ್ತಮಾನದ ಮೋದಿ, ಆತನ ಅಭಿವೃದ್ಧಿಯ ಮಾಯಾಜಾಲ ಇವೆಲ್ಲವನ್ನೂ ನೋಡಿದರೆ ಅತ್ಯಂತ ಮೂರ್ತ ರೂಪದಲ್ಲಿ ಗೋಬೆಲ್ಸ್ ನಮ್ಮೆದುರಿಗೆ ಕಾಣುತ್ತಾನೆ.









Say NO to RSS
Say NO to Modi

ಒಂದೇ ವ್ಯತ್ಯಾಸವೆಂದರೆ ಇಂದು ಮಾಧ್ಯಮಗಳು ಆ ಕಾಲಕ್ಕಿಂತಲೂ ಶಕ್ತಿಶಾಲಿಯಾಗಿ ಕೆಲಸ ಮಾಡುತ್ತಿದ್ದು, ಹೊಸ ಕಾಲದ ಗೋಬೆಲ್ಸ್‌ಗಳ ಕೆಲಸವನ್ನು ಸುಲಭ ಮಾಡಿವೆ. ಇಂಟರ್ನೆಟ್‌ನ ತಾಣಗಳಲ್ಲಿ ಮಾತ್ರವಲ್ಲದೇ ಮಧ್ಯಮ ವರ್ಗದ ಹಲವು ರೀತಿಯ ತಾಣಗಳಲ್ಲಿ ಇದು ಬೇರಿನ್ನೊಂದು ಆಯಾಮವನ್ನು ಪಡೆದುಕೊಂಡಿದೆ. ಈ ಸುಳ್ಳಿನ ಮಾಲೆಯನ್ನು ಶುರು ಮಾಡಿದವರು, ವ್ಯವಸ್ಥಿತವಾಗಿ ಹಬ್ಬಿಸಿದವರು ಎಲ್ಲಿ ಹೇಗಿದ್ದಾರೋ ಗೊತ್ತಿಲ್ಲ. ಆದರೆ ಅವರ ಕೆಲಸವನ್ನು ಅಚ್ಚುಕಟ್ಟಾಗಿ, ಸ್ವಯಂಪ್ರೇರಣೆಯಿಂದ ಪಟ್ಟು ಹಿಡಿದು ಮಾಡುವ ಗಣನೀಯ ಸಂಖ್ಯೆಯ ಮರಿಗಳು ಇವೆ.

2002ರ ಗುಜರಾತ್ ಗಲಭೆಯ ಮರೆಯಲಾಗದ, ಮರೆಯಬಾರದ ನೆನಪನ್ನು ಕೆದಕಿದಾಗ ಗೋಬೆಲ್ಸ್‌ಗಳು ಮತ್ತು ಮರಿ ಗೋಬೆಲ್ಸ್‌ಗಳು ಮರುಕ್ಷಣವೇ ಗಿಣಿಗಳಂತೆ ಕೇಳುತ್ತಾರೆ. 'ಹಾಗಾದರೆ 1984ರ ಸಿಖ್ ವಿರೋಧಿ ಹತ್ಯಾಕಾಂಡವನ್ನು ನೀವೇಕೆ ಖಂಡಿಸುವುದಿಲ್ಲ?' ಇದು ನೋಡಿ ಹೇಗಿದೆ? ನೀವು ಮೋದಿಯನ್ನು ಒಪ್ಪದಿದ್ದರೆ ರಾಹುಲ್ ಗಾಂಧಿಯ ಹಿಂಬಾಲಕರೆಂದು ಸ್ವಯಂಸಿದ್ಧವಾಗಿಬಿಡುತ್ತದೆ. ಈ ದೇಶದ ಜನರಿಗೆ ಮೂರನೆಯ ಆಯ್ಕೆಯೇ ಇಲ್ಲವೆಂಬಂತೆ.

ರಾಹುಲ್ ಗಾಂಧಿ ಮತ್ತು ಮೋದಿ ಎಂಬ ಎರಡೇ ಆಯ್ಕೆಗಳನ್ನು ಇಟ್ಟವರು ಯಾರು? ಯಾಕಾಗಿ ನಾವು ಈ ಸ್ಪರ್ಧೆಯಲ್ಲಿ ಯಾರಿಗಾದರೂ ಒಬ್ಬರಿಗೆ ಓಟು ಹಾಕಲೇಬೇಕು? ಮೋದಿಯನ್ನು ಪ್ರಶ್ನೆ ಮಾಡುತ್ತಾ, ಮಾಡುತ್ತಾ ಹೇಗೋ ಏನೋ ಒಂದಲ್ಲ ಒಂದು ರೀತಿಯಲ್ಲಿ ರಾಹುಲ್ ಗಾಂಧಿಯ ಒಳ್ಳೆಯ ಅಂಶಗಳನ್ನು ಹುಡುಕಿ, ಹೆಕ್ಕಿ ಮುಂದಿಟ್ಟು ಇನ್ನೊಂದೆಡೆಗೆ ತಳ್ಳಲ್ಪಡುವ ರೀತಿ ಯಾಕೆ ಮಾಡುತ್ತಿದ್ದಾರೆ?

1984ರ ಸಿಖ್ ಹತ್ಯಾಕಾಂಡದ ವಿಚಾರವೂ ಅಷ್ಟೇ. 2002ರ ಮಾರಣಹೋಮಕ್ಕಿಂತ ಮುಂಚೆಯೇ ಅದು ನಡೆಯಿತು. ಅದರ ಸಂಚುಕೋರರನ್ನು ಪರಿಣಾಮಕಾರಿಯಾಗಿ ಶಿಕ್ಷಿಸಿದ್ದರೆ, 2002ರಲ್ಲಿ ಮೋದಿ ಗುಜರಾತ್‌ನಲ್ಲಿ ಏನು ಮಾಡಿದನೋ ಅದನ್ನು ಮಾಡುವ ಮೊದಲು ನಾಲ್ಕು ಬಾರಿ ಯೋಚಿಸುತ್ತಿದ್ದ. ಇಂದು ಕಾಶ್ಮೀರದ ಸಮಸ್ಯೆ ಇಷ್ಟು ಕಗ್ಗಂಟಾಗಿದ್ದರೆ, ದೇಶದ ಯಾವ್ಯಾವುದೋ ಭಾಗಗಳಲ್ಲಿ ಮುಸ್ಲಿಂ ಯುವಕರನ್ನು ಭಯೋತ್ಪಾದಕರೆಂದು ಸಾಕ್ಷಿಯೇ ಇಲ್ಲದೆ ಕೊಂದು ಹಾಕುತ್ತಿದ್ದರೆ ಅದರಲ್ಲಿ ಬಿಜೆಪಿ ಮತ್ತು ಅದರ ಫ್ಯಾಸಿಸ್ಟ್ ಪರಿವಾರದ್ದು ಮಾತ್ರವಲ್ಲ, ಕಾಂಗ್ರೆಸ್‌ನದ್ದೂ ಪಾತ್ರವಿದೆ. ಇನ್ನೂ ಒಂದು ರೀತಿ ಹೇಳುವುದಾದರೆ, ಒಟ್ಟರ್ಥದಲ್ಲಿ ಬಿಜೆಪಿಗಿಂತ ಕಾಂಗ್ರೆಸ್‌ನದ್ದೇ ಹೆಚ್ಚಿನ ಪಾತ್ರವಿದೆ.

1984ರ ನವೆಂಬರ್ 1ರಿಂದ 8ರವರೆಗೆ ದೆಹಲಿಯ ಸುತ್ತಮುತ್ತಲು ನಡೆದ ಲೂಟಿ, ಡಕಾಯಿತಿ, ಹತ್ಯಾಕಾಂಡದಲ್ಲೂ ಕಾಂಗ್ರೆಸ್ಸಿಗರದೇ ಹೆಚ್ಚಿನ ಪಾತ್ರ. ಸಂದೇಹವೇ ಇಲ್ಲ.

ಆದರೆ ಬಿಜೆಪಿ ಮತ್ತು ಆರೆಸ್ಸೆಸ್‌ದು? ಹೌದು ಅದೇ ಗಲಭೆಗಳಲ್ಲಿ ಬಿಜೆಪಿ ಮತ್ತು ಆರೆಸ್ಸೆಸ್‌ನದ್ದೂ ಪಾತ್ರವಿತ್ತು, ನಿಸ್ಸಂದೇಹವಾಗಿ. ಇದು ಹೇಗೆ ಸಾಧ್ಯ? 2002ರ ಪ್ರಶ್ನೆ ಬಂದಾಗಲೆಲ್ಲ ಪದೇ ಪದೇ 1984ನ್ನು ನೆನಪಿಸುವ ಆರೆಸ್ಸೆಸ್‌ನವರು ಮತ್ತು ಬಿಜೆಪಿಯವರು ತಾವೇ ಖುದ್ದಾಗಿ 1984ರ ಸಿಖ್ ವಿರೋಧಿ ಗಲಭೆಗಳಲ್ಲಿ ಪಾತ್ರ ವಹಿಸಿದ್ದರೇ? ಹೌದು ವಹಿಸಿದ್ದರು.

ಇಷ್ಟಾಗಿಯೂ 1984 ಮತ್ತು 2002ನ್ನು ಎದುರು ಬದುರು ನಿಲ್ಲಿಸುವುದು ಅವರಿಗೆ ಹೇಗೆ ಸಾಧ್ಯವಾಗಿದೆ? ಅದನ್ನೇ ಗೋಬೆಲ್ಸ್ ತಂತ್ರ ಎನ್ನುವುದು. ಅದಕ್ಕೆ ಬಲಿಬಿದ್ದಿರುವ ಮರಿಗಳ ಮುಂದೆ ನಾವು ಕೆಲವು ಹಸಿ ವಾಸ್ತವ ಸಂಗತಿಗಳನ್ನು ಇಡಬೇಕು.

ದೆಹಲಿ ಪೊಲೀಸರು ಆ ಗಲಭೆಗೆ ಸಂಬಂಧಿಸಿದಂತೆ ಹಾಕಿರುವ ಕನಿಷ್ಠ 14 ಎಫ್‌ಐಆರ್‌ಗಳಲ್ಲಿ ಸುಮಾರು 49 ಬಿಜೆಪಿ ಹಾಗೂ ಆರೆಸ್ಸೆಸ್ ಕಾರ್ಯಕರ್ತರ ಹೆಸರುಗಳಿವೆ. ರಾಮ್ ಪ್ರೀತಂ ಸಿಂಗ್, ರಾಮ್ ಕುಮಾರ್ ಜೈನ್, ರಾಮ್ ಚಂದರ್ ಗುಪ್ತಾ, ರತನ್ ಲಾಲ್, ಗ್ಯಾನ್ ಲಾಲ್ ಜೈನ್, ಚಂದರ್ ಜೈನ್, ಪ್ರದೀಪ್ ಕುಮಾರ್ ಜೈನ್ ಇತ್ಯಾದಿ ಹೆಸರುವಾಸಿ ಬಿಜೆಪಿ ಕಾರ್ಯಕರ್ತರಿವರು.

ಅವರಲ್ಲಿ ರಾಮ್‌ಕುಮಾರ್ ಜೈನ್ ಎಂಬಾತ ಎಷ್ಟು ಹೆಸರುವಾಸಿ ಎಂದರೆ ಈತನ ಮನೆ ನಂ.87, ಹರಿನಗರ, ಆಶ್ರಮ ಈ ವಿಳಾಸವು ಅಟಲ್ ಬಿಹಾರಿ ವಾಜಪೇಯಿ ದೆಹಲಿಯಲ್ಲಿ 1980ರಲ್ಲಿ ಸ್ಪರ್ಧಿಸಿದ್ದಾಗ, ಅವರ ಚುನಾವಣಾ ಕಚೇರಿಯಾಗಿತ್ತು, ಜೊತೆಗೆ ಇದೇ ಜೈನ್ ವಾಜಪೇಯಿಯವರ ಚುನಾವಣಾ ಏಜೆಂಟನಾಗಿದ್ದ. ಅಂದರೆ 1984ರ ಗಲಭೆ ನಡೆಯುವ ಮುಂಚೆಯೇ ಈತ ಬಿಜೆಪಿಯ ಬಹುಮುಖ್ಯ ನಾಯಕರಲ್ಲೊಬ್ಬನಾಗಿದ್ದ.

ಈ ವಿಚಾರವನ್ನು ಏಕೆ ಒತ್ತಿ ಹೇಳಬೇಕಿದೆಯೆಂದರೆ, ಆನಂತರ ಬಿಜೆಪಿಯ ನಾಯಕರುಗಳನ್ನು ಇದರ ಕುರಿತು ಕೇಳಿದಾಗ, ಗಲಭೆ ನಡೆದ ಸಂದರ್ಭದಲ್ಲಿ ಅವರು ನಮ್ಮ ಕಾರ್ಯಕರ್ತರಾಗಿರಲಿಲ್ಲ ಎಂಬ ಹುಸೀ ಸುಳ್ಳನ್ನು ಹೇಳಿದ್ದರು. ಏಪ್ರಿಲ್ 1994ರಲ್ಲಿ, ದೆಹಲಿಯಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಈ ಕೇಸುಗಳನ್ನು ವಾಪಸ್ಸು ಪಡೆಯುವ ಹುನ್ನಾರವೂ ನಡೆಯಿತು. ಇವುಗಳಲ್ಲಿ ಹೆಚ್ಚಿನವು ದೆಹಲಿಯ ಶ್ರೀನಿವಾಸಪುರಿ ಪ್ರದೇಶದಲ್ಲಿ ಆದ ಸಿಖ್ ವಿರೋಧಿ ದಾಳಿಗೆ ಸಂಬಂಧಿಸಿದ್ದವಾಗಿದ್ದವು.

ಜೈನ್ - ಅಗರ್‌ವಾಲ್ ಸಮಿತಿಯ ಮುಂದೆ ಸಂತ್ರಸ್ತರು ನೀಡಿದ ದೂರುಗಳ ಆಧಾರದ ಮೇಲೆ ಈ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.. ಹಾಗಾದರೆ 'ಕಾಂಗ್ರೆಸ್‌ನ ಹುನ್ನಾರ'ದ ಭಾಗವಾಗಿ ಈ ದೂರುಗಳನ್ನು ಸಲ್ಲಿಸಿರಬಹುದಲ್ಲವೇ? ಹಾಗೇನೂ ಇಲ್ಲ. ಇಂದಿರಾ ಗಾಂಧಿಯವರನ್ನು ಕೊಂದದ್ದು ಅಕ್ಟೋಬರ್ 31ರಂದು. ನವೆಂಬರ್ 1ರಿಂದಲೇ ಲೂಟಿ, ಡಕಾಯಿತಿ ಆರಂಭವಾಯಿತು. ನವೆಂಬರ್ 4ರಿಂದ 10ರವರೆಗೆ ಕೊಲೆ, ಅತ್ಯಾಚಾರಗಳು ನಡೆದವು. ನವೆಂಬರ್ 8ರಂದು ಆರೆಸ್ಸೆಸ್‌ನ ಪ್ರಮುಖ ಸಿದ್ಧಾಂತಕರ್ತ ಮತ್ತು ನಾಯಕ ನಾನಾ ದೇಶಮುಖ್ ಒಂದು ಪತ್ರವನ್ನು ಬರೆಯುತ್ತಾರೆ. ಅಂದರೆ ಗಲಭೆ ಇನ್ನೂ ಹಸಿಹಸಿಯಾಗಿ ಹೊತ್ತಿ ಉರಿಯುತ್ತಿರುವಾಗಲೇ ಬರೆಯಲ್ಪಟ್ಟ ಈ ಪತ್ರದಲ್ಲಿ ನಾನಾ ದೇಶಮುಖ್ ಆರೆಸ್ಸೆಸ್‌ನ ನಿಲುವೇನೆಂಬುದನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ.

ನಂತರದ ದಿನಗಳಲ್ಲಿ ತನ್ನ ತಾಯಿಯ ಹತ್ಯೆಯ ನಂತರ ನಡೆದ ಘಟನಾವಳಿಗಳೆಲ್ಲವನ್ನೂ ಒಂದೇ ಮಾತಿನಲ್ಲಿ ರಾಜೀವ್ ಗಾಂಧಿ ಸಮರ್ಥಿಸಿಕೊಂಡಿರುವುದು ಎಲ್ಲರಿಗೂ ಗೊತ್ತಿದೆ. 'ದೊಡ್ಡ ಆಲದ ಮರವೊಂದು ಉರುಳಿದಾಗ ಸುತ್ತಲಿನ ಭೂಮಿಯಲ್ಲಿ ತಲ್ಲಣವುಂಟಾಗುವುದು ಸಹಜ' ಎಂಬ ಈ ಮಾತಿಗೆ ಸಾಕಷ್ಟು ಸಮರ್ಥನೆಯನ್ನು ನಾನಾ ದೇಶಮುಖ್ ತನ್ನ ಪತ್ರದಲ್ಲಿ ಒದಗಿಸಿದ್ದಾರೆ. ಇಂದಿರಾ ಗಾಂಧಿಯವರ ಹತ್ಯೆಯಲ್ಲಿ ಇಡೀ ಸಿಖ್ ಸಮುದಾಯವೇ ಭಾಗಿಯಾಗಿತ್ತೆಂಬ ರೀತಿಯಲ್ಲಿ ದೇಶಮುಖ್ ಪತ್ರ ಧ್ವನಿಸುತ್ತದೆ. ಸ್ವರ್ಣ ಮಂದಿರದ ಮೇಲೆ ನಡೆಸಿದ ಸೇನಾ ದಾಳಿ 'ಆಪರೇಷನ್ ಬ್ಲೂಸ್ಟಾರ್' ಅನ್ನು ಸಿಖ್ಖರು ಸಮರ್ಥಿಸಿರಬೇಕಿತ್ತು ಎಂಬುದೂ ಅವರ ಆರೋಪಗಳಲ್ಲೊಂದು. ಹಾಗೆಲ್ಲಾ ಮಾಡದೇ ಸಿಖ್ ಬುದ್ಧಿಜೀವಿಗಳು ಒಂದು ಮಿಲಿಟೆಂಟ್ ಪಡೆಯ ಹುಟ್ಟಿಗೆ ಕಾರಣರಾಗಿದ್ದರೆಂದೂ ದೇಶಮುಖ್ ಬರೆಯುತ್ತಾರೆ. ಸ್ವತಃ ಆರೆಸ್ಸೆಸ್ ಹುಟ್ಟುಹಾಕಿರುವ ಪುಂಡು ಪಡೆಯ ಬಗ್ಗೆ ಸಮರ್ಥನೀಯ ಧಾಟಿಯಲ್ಲಿ ಅದೇ ಪತ್ರದಲ್ಲಿ ಬರೆಯುವ ವ್ಯಕ್ತಿ, ಸಿಖ್ಖರಿಗೆ ಮಾತ್ರ 'ಹಿಂದೂ ಸಮುದಾಯವನ್ನು ರಕ್ಷಿಸುವ ಸಲುವಾಗಿಯಷ್ಟೇ ಖಾಲ್ಸಾ ಕೆಲಸ ಮಾಡಬೇಕಿರು ವುದು' ಎಂದೂ ವ್ಯಾಖ್ಯಾನಿಸುತ್ತಾರೆ.

ಹಾಗಾಗಿ ಸಿಖ್ಖರ ಮೇಲೆ ನಡೆಯುತ್ತಿದ್ದ ದಾಳಿ, ಮಾರಣಹೋಮಗಳಿಗೆ ಪ್ರತಿಯಾಗಿ ಏನನ್ನೂ ಮಾಡದೇ ಶಾಂತಿ, ಸಮಾಧಾನದಿಂದ ಇರುವುದು ಮಾತ್ರ ಸರಿಯಾದದ್ದು ಎಂಬ ಉಪದೇಶವನ್ನು ನಾನಾ ದೇಶಮುಖ್ ಮಾಡುತ್ತಾ[...] ಗಾಂಧಿಯವರ ಹತ್ಯೆಯ ನಂತರ ಆರೆಸ್ಸೆಸ್‌ನ ಮೇಲೆ ಆ[...] ದಾಳಿಯ ಉದಾಹರಣೆಯನ್ನೂ ನೀಡುತ್ತಾರೆ. ಅವರ ಪ್ರ[...] ಒಂದೇ ವ್ಯತ್ಯಾಸವೆಂದರೆ ಗೋಡ್ಸೆಗೂ ಆರೆಸ್ಸೆಸ್‌ಗೂ ಸಂಬಂಧವಿರಲಿಲ್ಲ; ಆದರೆ ಸಿಖ್ ಸಮುದಾಯಕ್ಕೂ ಇಂದಿರಾ ಗಾಂಧಿಯನ್ನು ಕೊಂದ ಅಂಗರಕ್ಷಕರಿಗೂ ಸಂಬಂಧವಿತ್ತು.

ಇಂದಿರಾ ಗಾಂಧಿಯನ್ನು ದೇಶದ ಅಪ್ರತಿಮ ನಾಯಕಿಯೆಂದು ಕೊಂಡಾಡುವ ದೇಶಮುಖ್, ಸಿಖ್ಖ[...] ನರಮೇಧವನ್ನು ತಡೆಗಟ್ಟಲು ಸರ್ಕಾರ ಕ್ರಮ[...] ಕೈಗೊಳ್ಳಬೇಕೆಂಬ ಸಣ್ಣ ಒತ್ತಾಯವನ್ನೂ ಆ ಪತ್ರದ[...] ಮಾಡುವುದಿಲ್ಲ.


ಇನ್ನೂ ಕುತೂಹಲಕರ ಸಂಗತಿಯೊಂದಿದೆ. ಈ ಪತ್ರ[...] ಪೂರ್ಣ ಪಾಠ ಪ್ರಕಟವಾಗಿರುವುದು 'ಪ್ರತಿಪಕ್ಷ' ಎಂ[...] ಹಿಂದಿ ಪತ್ರಿಕೆಯಲ್ಲಿ. ಅದರ ಆಗಿನ ಸಂಪಾದಕರು, ನಂತ[...] ಆರೆಸ್ಸೆಸ್‌ನ ನೆಚ್ಚಿನ ಸ್ನೇಹಿತರಾಗಿ ಬದಲಾದ ಜಾರ್ಜ್ ಫರ್ನಾಂಡಿಸ್. 'ಇಂದಿರಾ ಕಾಂಗ್ರೆಸ್ ಮತ್ತು ಆರೆಸ್ಸೆಸ್[...] ಮೈತ್ರಿ' ಎಂಬ ಶೀರ್ಷಿಕೆಯನ್ನು ಕೊಟ್ಟು ಈ ಮೈತ್ರಿಯನ್ನು ಖಂಡಿಸುವ ಮಾತುಗಳನ್ನು ಬರೆದು, ನಾನಾ ದೇಶಮುಖ್[...] ಪತ್ರವನ್ನು ಮುದ್ರಿಸಲಾಗಿದೆ.

ಇಷ್ಟೆಲ್ಲಾ ಹೇಳಿದ ಮೇಲೆ, ಸಿಖ್ ಹತ್ಯಾಕಾಂಡ[...] ಆರೆಸ್ಸೆಸ್ ಮಾತ್ರವೇ ಕಾರಣವಾಗಿತ್ತು ಎಂದು ಹೇಳಲಾಗದು[...] ಅದಕ್ಕೆ ಕಾಂಗ್ರೆಸ್ಸೇ ಪ್ರಧಾನ ಕಾರಣವಾಗಿತ್ತು. ಕಾಂಗ್ರೆಸ್[...] ಕೆಲವರು ಎಂದು ಹೇಳುವುದೂ ನ್ಯಾಯಸಮ್ಮತವಾ[...] ಲಾರದು. ಏಕೆಂದರೆ, ಕಾಂಗ್ರೆಸ್‌ನ ಕೆಲವು ಪ್ರಮು[...] ನಾಯಕರುಗಳೇ ನೇತೃತ್ವ ಕೊಟ್ಟು ನಡೆಸಿದ ಈ ಹತ್ಯಾಕಾಂಡ[...] ಬಗ್ಗೆ ನಿಷ್ಪಕ್ಷಪಾತ ತನಿಖೆ ಆಗದಂತೆ ಕಾಂಗ್ರೆಸ್ [...] ನೋಡಿಕೊಂಡಿತು. ತೀರಾ ಇತ್ತೀಚೆಗೆ ಅದರ ಅಧ್ಯಕ್ಷೆ ಕ್ಷಮೆ[...] ಕೇಳುವವರೆಗೆ ಹತ್ಯಾಕಾಂಡಕ್ಕೂ ತಮಗೂ ಸಂಬಂಧವಿ[...] ವೆನ್ನುವ ರೀತಿ ಅಥವಾ ಆ ಹತ್ಯಾಕಾಂಡ ಸರಿ ಎನ್ನು[...] ರೀತಿ ಕಾಂಗ್ರೆಸ್ ಉದ್ದಕ್ಕೂ ನಡೆದುಕೊಂಡಿತು. ಫ್ಯಾಸಿಸ[...] ಗುಣಲಕ್ಷಣಗಳು ಕೇವಲ ಬಿಜೆಪಿಗೆ ಸೀಮಿತವಲ್ಲ; ಕಾಂಗ್ರೆ[...] ಪೂರ್ಣ ಪ್ರಮಾಣದ ಫ್ಯಾಸಿಸಂಗೆ ಈ ದೇಶದಲ್ಲಿ ದಾ[...] ಮಾಡಿಕೊಟ್ಟಿದೆ ಮಾತ್ರವಲ್ಲ, ತಾನೇ ಫ್ಯಾಸಿಸ್ಟ್‌ಆಗಿ ವರ್ತಿ[...] ರುವ ನೂರಾರು ಉದಾಹರಣೆಗಳಿವೆ. ಫ್ಯಾಸಿಸಂ ಎನ್ನುವು[...] ಕೇವಲ ಹುಸೀ ಕೋಮುವಾದದ ಅಭಿವ್ಯಕ್ತಿ ಮಾತ್ರವಾಗಿರ[...] ಕಾರ್ಪೋರೇಟ್ ಬಂಡವಾಳಶಾಹಿಯ ಸಮರ್ಥನೆಗ[...] ಹುಟ್ಟಿಕೊಳ್ಳುವ ರಾಜಕೀಯ ವಿದ್ಯಮಾನ. ಹಾಗಿದ್ದ ಮೇ[...] ಕಾಂಗ್ರೆಸ್ ಅದರಿಂದ ಹೊರತಾಗಿರಲು ಹೇಗೆ ಸಾಧ್ಯ[...]

ಆದರೂ, ಕಾಂಗ್ರೆಸ್ಸಿಗೂ ಬಿಜೆಪಿಗೂ ವ್ಯತ್ಯಾಸವಿ[...] ಸೈದ್ಧಾಂತಿಕವಾಗಿ ಫ್ಯಾಸಿಸ್ಟ್ ಆದವರು, ಸುಳ್ಳನ್ನು ನಿರಂತರವಾ[...] ಉತ್ಪಾದಿಸಿ ನಂಬಿಸುವ ಕಾರ್ಖಾನೆಗಳನ್ನೇ ಹೊಂದಿದವ[...] ವರ್ಷಾನುಗಟ್ಟಲೆ ಯೋಜಿಸಿ ಮಾರಣಹೋಮಗಳ[...] ಮಾಡುವವರು ಆರೆಸ್ಸೆಸ್, ಬಿಜೆಪಿ ಮತ್ತು ಅ[...] ಪರಿವಾರದವರಾಗಿದ್ದಾರೆ. ಕಾಂಗ್ರೆಸ್‌ದು ಅವಕಾಶವಾ[...] ಫ್ಯಾಸಿಸ್ಟ್ ಗುಣವಾಗಿದೆ. ಹಾಗಾಗಿ ಕಾಂಗ್ರೆಸ್ ಮತ್ತು ಬಿ[...] ಎರಡೇ ಆಯ್ಕೆಯಾಗಿಬಿಟ್ಟರೆ ಕಾಂಗ್ರೆಸ್ ಅನಿವಾರ್[...] ವಾಗಿಬಿಡುತ್ತದೆ. ಅಂತಹ ದುರಂತದಿಂದ ಈ ದೇಶವ[...] ತಪ್ಪಿಸಲು ಬೇಕಾದ ನಿಜವಾದ ಅರ್ಥದ ಪರ್ಯಾ[...] ರಾಜಕಾರಣವೊಂದು ಬೆಳೆಯಲಿ ಎಂದು ಆಶಿಸೋಣ[...]


ಬೇರೆ ದೇಶದ ರಸ್ತೆ... ನಾನೇ ಮಾಡಿಸಿದ್ದು' ಅಂದ

ಮಾತುಗಾರಿಕೆಯ ಮೂಲಕ ಮಂಕುಬೂದಿ ...ಮನ ಕಲೆಯಲ್ಲಿ ನಿಷ್ಣಾತನಾದ ಮೋದಿಗೆ ಬೇಕಿರುವುದು ...ದ ಪ್ರಚಾರ. ಅದಕ್ಕಾಗೆಂದೇ ಹಲವಾರು ಕೋಟಿ ...ಾಯಿಗಳನ್ನು ವ್ಯಯಿಸಿ ಆಪ್ಕೊ ಇಂಟರ್‌ನ್ಯಾಷನಲ್ ...ಬ ವಿದೇಶಿ ಜಾಹೀರಾತು ಸಂಸ್ಥೆಯನ್ನು ಗುತ್ತಿಗೆ ...ಾರದಲ್ಲಿ ನೇಮಕ ಮಾಡಲಾಗಿದೆ. ಅದರ ಕೆಲಸ ಇಷ್ಟೇ ...ಮೋದಿಯ ಹೆಸರು, ಆತನ ಚಿತ್ರ, ಆತನ ಬೊಗಳೆಗಳು ...ಂತರ ಸುದ್ದಿಯಲ್ಲಿರುವಂತೆ ನೋಡಿಕೊಳ್ಳುವುದು. ಇವತ್ತು ಮಧ್ಯಮವರ್ಗಗಳ ಮನಸ್ಸಿನಲ್ಲಿ ಗುಜರಾತ್ ಅಂದರೆ 'ಅಭಿವೃದ್ಧಿ'; 'ಅಭಿವೃದ್ಧಿ' ಅಂದರೆ ಮೋದಿಯ ಗುಜರಾತ್ ಎಂಬ ಭಾವನೆ ಉಂಟಾಗಿದ್ದರೆ ಅದಕ್ಕೆ ಕಾರಣ ಮೋದಿ ಸೇವೆಗಾಗಿ ಟೊಂಕಕಟ್ಟಿ ನಿಂತಿರುವ ಕಾರ್ಪೋರೇಟ್ ಮಾಲಿಕತ್ವದ ಭಾರತೀಯ ಮಾಧ್ಯಮಗಳು. ಮೋದಿ ಇಂದು 'ಅಭಿವೃದ್ಧಿ' ಮಂತ್ರ ಜಪಿಸಿ ಮಧ್ಯಮವರ್ಗಗಳ ಕಣ್ಣಿಗೆ ಮಣ್ಣೆರಚುತ್ತಿರುವುದು ಇದೇ ಪ್ರಾಯೋಜಿತ ಪ್ರಚಾರದ ಮೂಲಕ. ಮಧ್ಯಮವರ್ಗಗಳನ್ನು ಹೇಗೆ ಮಂಕುದಿಣ್ಣೆಗಳಾಗಿಸಲಾಗುತ್ತಿದೆ ಎಂಬುದಕ್ಕೆ ಅತ್ಯುತ್ತಮ ದೃಷ್ಟಾಂತ ಇಲ್ಲಿದೆ. ಗುಜರಾತ್ ರಾಜಧಾನಿ ಗಾಂಧಿನಗರದಲ್ಲಿ ಈಗ ಎರಡು ವರ್ಷಕ್ಕೊಮ್ಮೆ 'ವೈಬ್ರೆಂಟ್ ಗುಜರಾತ್' ಎಂಬ ದೊಡ್ಡ ಶೃಂಗಸಭೆಯೊಂದನ್ನು ನಡೆಸಲಾಗುತ್ತಿದೆ. 2003ನೆ ಇಸವಿಯಿಂದ ಆರಂಭಿಸಲಾದ ಈ ಶೃಂಗಸಭೆಗಳ ಉದ್ದೇಶ ದೇಶವಿದೇಶಗಳ ಹೂಡಿಕೆದಾರರನ್ನು ಆಕರ್ಷಿಸುವುದು ಎಂದು ಪ್ರಚಾರ ಮಾಡಲಾಯಿತು. ನಿರೀಕ್ಷಿಸಿದಂತೆ 'ವೈಬ್ರೆಂಟ್ ಗುಜರಾತ್' ಸಭೆಗಳಲ್ಲಿ ಬಿಲಿಯಗಟ್ಟಲೆ ಡಾಲರ್ ಹೂಡಿಕೆಯ ಮಳೆಗರೆಯಿತು. 2011ರ ಸಭೆಯಲ್ಲಿ ಘೋಷಣೆಯಾದ 450 ಬಿಲಿಯ ಡಾಲರ್‌ಗೂ ಅಧಿಕ ಹೂಡಿಕೆ ಒಂದು ಸಾರ್ವಕಾಲಿಕ ದಾಖಲೆಯಾಗಿತ್ತು, ಆದರೆ ಇವೆಲ್ಲ ಬರೀ ಭರವಸೆಗಳು ಮಾತ್ರ. ಇದುವರೆಗೆ ನಡೆದಿರುವ ಇಂತಹ ಐದು ಶೃಂಗಸಭೆಗಳಲ್ಲಿ ಒಟ್ಟು 920 ಬಿಲಿಯನ್ ಡಾಲರ್ ಹೂಡಿಕೆಯ ಭರವಸೆ ಸಿಕ್ಕಿದೆ ಎನ್ನಲಾಗಿದೆ. ಈ ಭರವಸೆಗಳ ಪೈಕಿ 60 % ಈಡೇರಿವೆ ಎಂದು ಕೊಚ್ಚಿಕೊಳ್ಳುತ್ತಾನೆ ಮೋದಿ. ಆದರೆ ವಾಸ್ತವ ಇದಕ್ಕಿಂತ ಭಿನ್ನವಾಗಿದೆ. ರಾಜ್ಯದ ಉದ್ಯಮ ಇಲಾಖೆಯ ಅಂಕಿಸಂಖ್ಯೆಗಳೇ ಹೇಳುವಂತೆ ಇದುವರೆಗೆ ಈಡೇರಿರುವುದು 25 % ಭರವಸೆಗಳು ಮಾತ್ರ. ವಾಸ್ತವದಲ್ಲಿ ದೇಶದಲ್ಲೆ ಅತಿಹೆಚ್ಚು ಹೂಡಿಕೆಯಾಗುವ ರಾಜ್ಯವೆಂದರೆ ಮಹಾರಾಷ್ಟ್ರ - ಆಧಾರ: ಕ್ಯಾರವಾನ್ ಲೇಖನ.



ಮೋದಿಯ ಗುಜರಾತ್ 'ಅಭಿವೃದ್ಧಿ' ಕುರಿತ ಬಡಾಯಿಗಳು ಒಂದೊಂದಾಗಿ ನೆಲಕಚ್ಚುತ್ತಿವೆ. ಸರ್ಕಾರದ ಅಧಿಕೃತ ದಾಖಲೆಗಳೆ ಬಯಲುಗೊಳಿಸುತ್ತಿರುವ ಹಾಗೆ ಗುಜರಾತ್‌ನಲ್ಲಿ ವೃದ್ಧಿಸಿರುವುದು ಅಪರಾಧಗಳ ಗತಿ, ಶಿಶುಮರಣ, ಪ್ರಸೂತಿಮರಣ, ಪರಿಸರ ಮಾಲಿನ್ಯಗಳಂತಹ ಜನವಿರೋಧಿ ಸಂಗತಿಗಳು. ನೈಜ ಪ್ರಗತಿಯ ಸೂಚಕಗಳಾಗಿರುವ ಹೂಡಿಕೆ, ಮಾನವ ಅಭಿವೃದ್ಧಿ ಸೂಚ್ಯಾಂಕ, ಮಹಿಳೆಯರ ಮತ್ತು ಮಕ್ಕಳ ಪೌಷ್ಟಿಕತೆ, ಮಕ್ಕಳ ತೂಕ, ಜಿಡಿಪಿ ಬೆಳವಣಿಗೆ, ಸಾಕ್ಷರತೆ, ಬಡತನ ಕಡಿಮೆ ಮಾಡುವುದು ಮುಂತಾದ ವಿಚಾರಗಳಲ್ಲಿ ಗುಜರಾತ್ ಇತರ ರಾಜ್ಯಗಳಿಗಿಂತ ಹಿಂದಿದೆ. ಗುಜರಾತ್ 'ಅಭಿವೃದ್ಧಿ'ಯ ಮಾತುಗಳು ಎಷ್ಟು ಪೊಳ್ಳು ಎಂಬುದಕ್ಕೆ ಇಲ್ಲೊಂದು ಪುಟ್ಟ ಉದಾಹರಣೆ:

ಬೂಸಿ ಬಸ್ಯ... ಮೋದಿ! 3



ಸ್ವಲ್ಪ ಸಮಯದ ಹಿಂದೆ ಗುಜರಾತ್ 'ಅಭಿವೃದ್ಧಿ'ಗೆ ಸಾಕ್ಷಿಯಾಗಿ ಸುಂದರವಾದ ರಸ್ತೆಯೊಂದರ ಚಿತ್ರವನ್ನು ಮಾಧ್ಯಮಗಳಲ್ಲಿ ಬಿಡುಗಡೆ ಮಾಡಲಾಗಿತ್ತು, ಆದರೆ ಅದು ಇನ್ಯಾವುದೋ ದೇಶದ ರಸ್ತೆಯಾಗಿತ್ತೆಂದು ನಂತರ ತಿಳಿದುಬಂದಿತ್ತು, ಹಾಗಾದರೆ ಗುಜರಾತ್‌ನ ನೈಜ ಪರಿಸ್ಥಿತಿ ಏನು? ರಾಜ್ಯದ ರಸ್ತೆಗಳ ದುಸ್ಥಿತಿ, ಅದರಲ್ಲೂ ವಿಶೇಷವಾಗಿ ಅಹಮದಾಬಾದ್‌ನ ಕೆಟ್ಟುಹೋದ ರಸ್ತೆಗಳು ತೀರಾ ಇತ್ತೀಚೆಗಷ್ಟೆ ಗುಜರಾತ್ ಉಚ್ಚನ್ಯಾಯಾಲಯದ ಟೀಕೆಗೆ ಗುರಿಯಾಗಿವೆ. ಮೊನ್ನೆ ಸೆಪ್ಟೆಂಬರ್ 12ರಂದು ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ ವಿಚಾರಣೆಯ ಸಂದರ್ಭದಲ್ಲಿ ಗುಜರಾತ್‌ನ ರಸ್ತೆ ಮತ್ತು ಕಟ್ಟಡಗಳ ಇಲಾಖೆಗೆ ನೋಟಿಸ್ ಜಾರಿಗೊಳಿಸಿದ ನ್ಯಾಯಮೂರ್ತಿ ಜೆ.ಬಿ.ಪರ್ದಿವಾಲಾ "ಗುಜರಾತ್ ರಾಜ್ಯದ 90 % ರಸ್ತೆಗಳು ಕೆಟ್ಟುಹೋಗಿವೆ" ಎಂದು ಹೇಳಿದ್ದಾರೆ - ಆಧಾರ: http://www.indianexpress.com/news/gujarat-hc-serves-notice-to-state-on-poor-condition-of-roads/1168678/ ■

...ರನಾಡಿಯಲ್ಲಿ ಇಳಿಯುವ ವೇದನೆ

ನಾವು ನಮಗೆ ಇಷ್ಟವಾದ ಜನರನ್ನು ನೋಡಿದಾಗ ...ಪಡುವುದು ಸಹಜ. ಆದರೆ ಇಷ್ಟವಾದ ಜನ ...ಕೆಗೆ ಹೋಗಿ ನಮ್ಮನ್ನು ಹೊಗಳತೊಡಗಿದೊಡನೆ ...ಜುಗರವಾಗುತ್ತದೆ; ತಮ್ಮ ಅನ್ಯೋನ್ಯತೆಯನ್ನು ...ಮ್ಮೆ ನಮಗೆ ತೋರುವುದು ಅನಗತ್ಯ ಅನ್ನಿಸುತ್ತದೆ. ...ನ್ನೆ ವೈದೇಹಿ ನನ್ನನ್ನು, ಪತ್ರಿಕೆಯನ್ನು ಕುರಿತು ...ತಾಡಿದಾಗ ನನ್ನ ಮನಸ್ಸಿನಲ್ಲಿ ವಿಚಿತ್ರ ತಳಮಳ ...ುವಾಯಿತು. ಈಕೆ ಉತ್ತಮ ಲೇಖಕಿ- ಮಹಾ ...ಸಗಿಯಾದ ಗೃಹಿಣಿಯವಳು. ಈ ವೈದೇಹಿಗೆ ...ದಿಕೆ ಏನು ಮಾಡಬಹುದು ಎಂದು ...ತೂಹಲಗೊಂಡೆ ಕೂಡ. ವೇದಿಕೆ ನಮ್ಮ ...ತರಂಗವನ್ನು ಸಾರ್ವಜನಿಕಗೊಳಿಸುತ್ತದೆ. ...ದೇಹಿಯ ಮಾತಿನಲ್ಲಿ ನಾನು ಈಕೆಯನ್ನು ...ೋಡಿದಂದಿನಿಂದ ಕಂಡ ...ುಣಗಳಿದ್ದಳು. ಮೊನ್ನೆ ತಾನೆ ನಾನು ಆಕೆಗೆ ಬೆಂಗಳೂರಿನಿಂದ ಫೋನ್ ...ಡಿದಾಗ, 'ಅಲ್ಲಿ ಯಾವ ಪಕ್ಷಕ್ಕೆ ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆ ಇದೆ?' ...ದೆ. 'ನೋಡಿ, ಎಲ್ಲರೂ ಸೋನಿಯಾರನ್ನು ವಿದೇಶಿ ಮಹಿಳೆ ಎಂದು ...ೂಗುಮುರಿಯುತ್ತಾರೆ' ಅಂದರು.




'ಎಲ್ಲರೂ ಅಂದರೆ? ಜನಸಾಮಾನ್ಯರು ಕೂಡ?' ಅಂದೆ.

...ವೈದೇಹಿಯ ಚೇತನದಲ್ಲಿ ಆಗಲೇ ಸೋನಿಯಾ ಸೇರಿಹೋಗಿದ್ದಳು. 'ಹೌದು, ...ವರು ಕೂಡ.'

'ಇದು ಬೇಸರದ ವಿಷಯ. ಆದರೆ ನೀವು ಬೇಸರಪಡಬೇಡಿ' ಎಂದು ...ೋನ್ ಇಟ್ಟೆ.


...ಹಾಗೆ 'ಪತ್ರಿಕೆ' ವೈದೇಹಿಯ ರಕ್ತದಲ್ಲಿ ಬೆರೆತುಹೋಗಿತ್ತು, ...ವರು ಮಾತಾಡುತ್ತ "'ಪತ್ರಿಕೆ'ಯ ಗುಬ್ಬಚ್ಚಿಯ ಗೂಡು ನಹ ...ು ಅರಿವಿನ ಭಾಗವಾಗಿದೆ. ಇವರು ಬರೆಯಲು ಸೂಚಿಸಿದ್ದು ...ಗೆ" ಎಂದು ತಮ್ಮ ಭಾಷಣದಲ್ಲಿ ಹೇಳತೊಡಗಿದರು. "ನಮ್ಮಲ್ಲಿ ...ಕೋಚ, ಆತಂಕ, ಮುಗ್ಧತೆಯನ್ನು ಇಟ್ಟುಕೊಂಡು ಬರೀರಿ ...ದು ಹೇಳಿದರು. ಆ ಸಂಕೋಚ ಮತ್ತು ಮುಗ್ಧತೆಯೇ ಬರಹಗಳ ...ವ ಎಂದು ಸೂಚಿಸಿದರು.."

...ವೇದಿಕೆ ನಮ್ಮ ಅಭ್ಯಾಸಿಕೆಯ ಝರಿಯಲ್ಲಿ ಕರಗಿಹೋಗಿ ನಮ್ಮ ...ಕೆ ಎಲ್ಲರ ಮನ ತಟ್ಟುವುದು ಮುಖ್ಯ, ಹಾಗೆಂದು ನನಗೆ ...ನಿಸಿತು. ಅವತ್ತು ವಿನಯ್‌ಕುಮಾರ್ ಸೊರಕೆ ಮತ್ತು ಆಸ್ಕರ್ ...ೆರ್ನಾಂಡಿಸ್ ಮಾತಾಡಿದ್ದು ಎರಡು ರೀತಿಯ ಭಾಷಣಗಳಂತೆ ...ನನ್ನ ಮನಸ್ಸಿನಲ್ಲಿ ಉಳಿದವು. ವಿನಯ್‌ಕುಮಾರ್ ಸೊರಕೆಯವರ ...ಶೇಯಸ್ಸಿಗೆ 'ಪತ್ರಿಕೆ' ಸ್ವಲ್ಪವಾದರೂ ನೆರವಾಗಿದೆ: ಅವರನ್ನು ಸದಾ ಬೆಂಬಲಿಸುವ 'ಪತ್ರಿಕೆ' ಕೆಲವು ಮೌಲ್ಯಗಳಿಗೆ ಅವರನ್ನು ಅಂಟಿಸಿದೆ. ಮನುಷ್ಯನ ವೃತ್ತಿ ಮುಖ್ಯ. ಆತ ದೇಶವನ್ನು ಕಟ್ಟುವುದು ಮುಖ್ಯ. ಆದರೆ ಅದಕ್ಕಿಂತ ಮುಖ್ಯವಾದದ್ದು ಅದೆಲ್ಲದರ ಇಂಗಿತ. ನಾವು ಬದುಕಿದ್ದೇವೆ ಎನ್ನುವಷ್ಟೇ ಏಕೆ ಬದುಕಿದ್ದೇವೆ ಎನ್ನುವುದೂ ಮುಖ್ಯ. ಇದನ್ನರಿತ ಸೊರಕೆಯವರ ಭಾಷಣದಲ್ಲಿ 'ಪತ್ರಿಕೆ'ಯ ಸೂಚನೆಗಳು ನೆಲೆಸಿದ್ದವು. ಆದರೆ ಆಸ್ಕರ್ ಹಾಗಲ್ಲ. 'ಪತ್ರಿಕೆ' ಓದಲಿ, ಓದದಿರಲಿ, ಅವರು ಓದಿದಂತೆ ಮಾತಾಡಬಹುದು. 'ಪತ್ರಿಕೆ' ಜನರನ್ನು ಬೇರ್ಪಡಿಸುವುದಿಲ್ಲ, ಅವರನ್ನು ಒಂದು ಮಾಡುತ್ತದೆ ಎನ್ನುವುದು ಅಪ್ಪಟ ರಾಜಕಾರಣಿಯೊಬ್ಬರ ಮಾತು. ನಾನು ಅದನ್ನು ಕೇಳಿ ನಗುತ್ತಾ ಕೂತೆ. 'ಎಲ್ಲರೂ ದೇಶವನ್ನು ಕಟ್ಟಬೇಕು' 'ಮಹಿಳೆಯರು, ದಲಿತರು ಮುಖ್ಯ' ಎಂಬ ಕ್ಲೀಷೆಗಳಿಗೆ ಅವರು ಹೋಗುವ ಮುನ್ನ ಬೇರೇನನ್ನೋ ಯೋಚಿಸುತ್ತಾ ಕೂತಿದ್ದೆ.



'ಜೋಗಿ'ಯ ಶಕ್ತಿ ಮತ್ತು ಐಬು


ಹಂಪಿ ವಿಶ್ವವಿದ್ಯಾನಿಲಯದ ಶಿವಾರೆಡ್ಡಿಯವರ ಉತ್ಸಾಹದಿಂದ 'ಜೋಗಿ' ಪದ್ಯದ ಬಗ್ಗೆ ಹಲವರು ತಮ್ಮ ಸ್ಪಂದನ ನೀಡಿದ್ದಾರೆ. ಬೇಂದ್ರೆಯವರ ಪಟ್ಟದ ಶಿಷ್ಯ ಕುರ್ತಕೋಟಿ ಈ ಪದ್ಯದಲ್ಲಿ ಅರ್ಥಕ್ಕಾಗಿ ಪರದಾಡಿರುವುದನ್ನು ನೋಡಿದರೆ ಇದು ಕಬ್ಬಿಣದ ಕಡಲೆ ಇರಬಹುದೆ ಎನ್ನಿಸಿದರೆ ಆಶ್ಚರ್ಯವಿಲ್ಲ.



ಬೇಂದ್ರೆಯವರ 'ಜೋಗಿ' ಅದ್ಭುತ ಕವನ. ಇದು ಒಂದು ಊರ ಸನಿಹದ ಜಾಗವನ್ನು ವರ್ಣಿಸುತ್ತದೆ; ಆ ಜಾಗ ನೂರಾರು ವರ್ಷಗಳು ಒದಗಿಸಿದ ನಿಗೂಢತೆಯನ್ನು ಕಟ್ಟಿಕೊಂಡಿದೆ. 'ಊರ ತುದಿಯ ಮೂರು ಬಟ್ಟೆ' ಬಗೆದಲ್ಲಿ ಒಂದು ಕೊಳ್ಳದಲ್ಲಿ ಹಳ್ಳವಡಗಿ ಮತ್ತೆ ಕಾಣಿಸಿಕೊಂಡು ಹರಿಯುತ್ತದೆ. ನಿಂತಿರುವ ಕೊಳ್ಳ ಮತ್ತು ಸುಪ್ತವಾಗುವ, ಕಾಣಿಸಿಕೊಳ್ಳುವ ಹಳ್ಳ ಒಂದು ರೀತಿಯಲ್ಲಿ ಜೀವದ ಸೂಚನೆ. ಅಲ್ಲಿಗೆ ಈ ಸ್ಥಿರ ಚಿತ್ರ ಮತ್ತು ಚಲಿಸುವ ಜೀವ ನಿಲ್ಲುವುದಿಲ್ಲ, ಮುಂದೆ ಹೋದರೆ ಗವಿಗುಡ್ಡ ಬಲಕ್ಕೆ ಬರುತ್ತದೆ. ಅಲ್ಲೊಂದು ಹೊಲದಲ್ಲಿ ಹುಣಸೆಮರ ಬೆಳೆದಿದೆ. ಹುಣಸೆಮರವೊಂದು ದೆವ್ವದ ಮರ. ಅಲ್ಲಿ ತೊಗಲಬಾವಲಿಗಳಿವೆ ಮತ್ತು ನಿಮ್ಮನ್ನು ಹಲಸಿನ ಮರವೊಂದು ಸ್ವಾಗತಿಸುತ್ತದೆ; ಹಾಗೆಯೇ ಅತ್ತಿಯ ಮರ. ಆ ಮರದ ಹಣ್ಣು ಜೀವಗಳ ವರ್ಣನೆಯಿದೆ.

ಇಡೀ ಪದ್ಯದಲ್ಲಿ ಜೋಗಿ ಕೆಲವು ಪಂಕ್ತಿಗಳಲ್ಲಿ ಮಾತ್ರ, ಪ್ರಕೃತಿಯ ಶಕ್ತಿಯ ಸಂಕೇತವಾಗಿ ಮಾತ್ರ ಬರುತ್ತಾನೆ. ಇದರಲ್ಲಿ ಬರುವ ಹೆಣ್ಣು ಪ್ರಕೃತಿಯಿಂದ, ಜೋಗಿಯ ಲೋಕಾತೀತ ಸ್ತರದ ಕಲ್ಪನೆಯಿಂದ ರೂಪುಗೊಂಡು ವಿಚಿತ್ರ ನಾಟಕೀಯತೆಯನ್ನು ಸೃಷ್ಟಿಸುತ್ತಾಳೆ. ಇಲ್ಲಿ ಬರುವ ಏಳು ಹೆಡೆಯ ಸರ್ಪ, ನಾಮದ ಜಪ ಮುಂತಾದವೆಲ್ಲ ಬೇಂದ್ರೆಯವರು ಪದ್ಯವನ್ನು ಕಟ್ಟುವಾಗ ನಾದದ ತೆಪ್ಪದ ಮೇಲೆ ತೇಲಿ ಮುಟ್ಟುವ ಜಟಿಲತೆ ಅಥವಾ ಅರ್ಥನಿಬಿಡತೆಯನ್ನು ಹೆಚ್ಚಿಸಲು ಬಂದಂತಿವೆ. ಇದು ಜಾನಪದ, ಕೋಲಾಟದ ಹಾಡು 'ಎಲ್ಲೋ ಜೋಗಪ್ಪ ನಿನ್ನರಮನೆ'ಯ ಜಟಿಲ ಸ್ವರೂಪ; ಅದ್ಭುತವಾಗಿ ಕಂಡರೂ ಸಹಜ ಪ್ರಶ್ನೋತ್ತರದ ಸಂಕೀರ್ಣ ರೂಪ. 'ಅದ್ಭುತ' ಎನ್ನುವುದರ ನಿಘಂಟಿನ ವಿವರಣೆಯನ್ನು ಮಾತ್ರ ಇಲ್ಲಿ ತೆಗೆದುಕೊಳ್ಳಬೇಕು.

ಒಂದು ಮಟ್ಟದಲ್ಲಿ ಜೋಗಿ ಹೆಣ್ಣಿನಲ್ಲಿ ಪ್ರೇರೇಪಿಸುವ ಅನೇಕ ಜೀವರೂಪಗಳಾದ ಈ ಪದ್ಯ ಇನ್ನೊಂದು ಸ್ತರದಲ್ಲಿ opaque ಆದ ಪದಗಳ ಹಂದರ ಮಾತ್ರ. ಇದನ್ನೊಂದು ಒಡಪು ಮತ್ತು ವರ್ಣಚಿತ್ರ ಎಂದು ನೋಡಿದರೆ ಹೆಚ್ಚು ಉಪಯುಕ್ತವಾಗುತ್ತದೆ.



ಈ ಪದ್ಯ ಓದಿದಾಗ ನಾವು 'ಕಾವ್ಯಕ್ಕೆ ಅರ್ಥ ಎಷ್ಟು ಮುಖ್ಯ' ಎಂಬ ಚಿಂತೆಗೆ ಒಳಗಾಗುತ್ತೇವೆ. ಹೀಗೆ ನೋಡಿದರೆ 'ಎಲ್ಲೋ ಜೋಗಪ್ಪ ನಿನ್ನರಮನೆ' ಎಂಬ ಪದ್ಯ ಕೂಡ ಗದ್ಯದ ಸರಳತೆ ಹೊಂದಿಲ್ಲ; ನಾವು ಬಲ್ಲ ಲೋಕವಿವರಗಳೆ ಅದರಲ್ಲಿ ಸಿಕ್ಕುವುದಿಲ್ಲ. ಅದು ಕೂಡ ಹೆಣ್ಣಿನ ಆಶೆ, ಕಲ್ಪನೆ, ನಿಸರ್ಗಾತೀತವಾದ ನೆಮ್ಮದಿಯನ್ನು ಸೂಚಿಸುತ್ತದೆ. 'ಜೋಗಿ' ಆ ಪದ್ಯದಲ್ಲಿ ಕರುಣೆ, ಆಕರ್ಷಣೆ ಮುಂತಾದ ಎಲ್ಲವನ್ನೂ ಹೊಂದಿದ ಜೀವವಾಗುತ್ತಾನೆ.

ಇಷ್ಟಾದರೂ ಬೇಂದ್ರೆಯವರ 'ಜೋಗಿ' ಪದ್ಯ ಅನೇಕ ವರ್ಷ ಓದುಗರನ್ನು ಪ್ರೇರೇಪಿಸುತ್ತಾ ಮುದಗೊಳಿಸುತ್ತಾ ಹೋಗುವ ದಟ್ಟತೆ ಪಡೆದಿದೆ. ಇದು ಕವಿಯ ವೈಶಿಷ್ಟ್ಯ ಮತ್ತು ದೌರ್ಬಲ್ಯ ಎರಡನ್ನೂ ತೋರುವ ಪದ್ಯವಾಗಿದೆ. ಹಾಗೆಯೇ ವಿಮರ್ಶಕರನ್ನು ಅನೇಕ ತಪ್ಪು ಮತ್ತು ಸ್ವಪ್ರತಿಷ್ಠೆಗೆ ಸೂಕಬಲ್ಲ ಕವನವಾಗಿದೆ.

14 ಜುಲೈ 1999


ತೆರೆದುಕೊಂಡ ತೇಜಸ್ವಿ ಲೋಕ

ಪೂರ್ಣಚಂದ್ರ ತೇಜಸ್ವಿಯವರು ತಮ್ಮ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಬಗ್ಗೆ ಅಪಾರ ಕಾಳಜಿಯಿಂದ ಬರೆದ ಮಾತುಗಳಿವು: "ಈ ಜಿಲ್ಲೆಗೆ ಏನಯ್ಯ ಶಾಪ. ಇಷ್ಟೊಂದು ಕಾಡುಗಳಿದ್ದಾವೆ, ಮಳೆ ಇದೆ, ಬೆಳೆ ಇದೆ, ತಣ್ಣಗೆ ಜೀವನೋಪಾಯ ಸಾಗಿಸ್ತಾರೆ. ಆದರೆ ಯಾವುದೋ ಒಂದು ಭಯಾನಕ ಕೊರತೆಯಿದೆ ಇಲ್ಲಿ, ಈ ಜಿಲ್ಲೆಯಿಂದ ಕಳೆದ ಹಲವಾರು ಶತಮಾನಗಳಿಂದ ಒಬ್ಬನೇ ಒಬ್ಬ ಅಸಾಧಾರಣ ವ್ಯಕ್ತಿ ಹುಟ್ಟಿಲ್ಲ ಎಂದರೆ ಏನಯ್ಯ... ಇಂಥಾದ್ದೊಂದು ಸಾಂಸ್ಕೃತಿಕ ನಿಷ್ಕ್ರಿಯತೆ ಕೇವಲ ಆಕಸ್ಮಿಕ ಅಲ್ಲ ಕಣಯ್ಯ.."

ತೇಜಸ್ವಿಯವರ ಈ ಸಾಲುಗಳನ್ನು ಉದಾಹರಿಸಿದವರು ನಟರಾಜ್ ಹುಳಿಯಾರ್. ಆ ಕೂಡಲೇ ಸುತ್ತಲೂ ಇದ್ದ ಗೆಳೆಯರು ಏನಾದರೂ ಮಾಡೋಣ ಎಂದಾಗ, ಹುಳಿಯಾರ್ "ತೇಜಸ್ವಿಯ ಜನ್ಮದಿನದ ಒಂದು ಸೆಮಿನಾರ್ ಏರ್ಪಡಿಸಿ" ಎಂಬ ಸಲಹೆ ಕೊಟ್ಟರು. ಆದರೆ ಅವರ ಜನ್ಮದಿನದಂದು ಗಣೇಶನ ಹಬ್ಬದ ಸಂದರ್ಭವಾದ್ದರಿಂದ ಸೆಪ್ಟೆಂಬರ್ 14ರಂದು ಮಾಡುವ ತೀರ್ಮಾನ ತೆಗೆದುಕೊಂಡೆವು. ಕ್ಯಾತನಬೀಡು ಪ್ರತಿಷ್ಠಾನ, ರೈತಸಂಘ, ಸಿಪಿಐ ಮತ್ತು ತೇಜಸ್ವಿ ಗೆಳೆಯರ ಬಳಗ ಕೂಡಿ ಏರ್ಪಡಿಸಿದ್ದ 'ತೇಜಸ್ವಿ ಲೋಕ' ಎಂಬ ಕಾರ್ಯಕ್ರಮ ಸತ್ತಂತಿದ್ದ ಚಿಕ್ಕಮಗಳೂರನ್ನ ಬಡಿದೆಬ್ಬಿಸಿತು. ಕಾರ್ಯಕ್ರಮದ ವಿವರ ಕೇಳಿದ ಸಾರ್ವಜನಿಕರು "ಕಳೆದ ಹತ್ತಾರು ವರ್ಷಗಳಿಂದ ಇಂತಹ ಯಾವುದೇ ಕಾರ್ಯಕ್ರಮ ಇಲ್ಲಿ ಜರುಗಿಲ್ಲ" ಎಂದು ಉದ್ಗರಿಸಿದರು.

ಕಾರ್ಯಕ್ರಮದ ಉದ್ಘಾಟನೆಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಕೇಳಿದ ಕೂಡಲೇ ಒಪ್ಪಿಕೊಂಡು ತಮ್ಮ ಆಪ್ತರಿಗೆ ಕಾರ್ಯಕ್ರಮದ ದಿನಾಂಕ ಬರೆಸಿದರು. ಇನ್ನು ತೇಜಸ್ವಿ ಒಡನಾಡಿಯಾಗಿದ್ದ ಕಡಿದಾಳು ಶಾಮಣ್ಣನವರನ್ನು ಕೇಳಿಕೊಂಡಾಗ "ಆ ಕಡೆ ತಲೆಹಾಕಿ ಮನಗದಿಲ್ಲ" ಎಂದು ಬಿಟ್ಟರು. "ಹಿಂದೊಮ್ಮೆ ಕೇಳಿದ್ದಾಗ ಬರುತ್ತೇನೆಂದು ಡೈರಿಯಲ್ಲಿ ದಿನಾಂಕವನ್ನ ದಾಖಲಿಸಿಕೊಂಡಿದ್ದೀರಿ" ಎಂದಾಗ, "ಇರಬಹುದು. ಬರೀ ದತ್ತಪೀಠ ದತ್ತಮಾಲೆ ರೋಗದಲ್ಲಿ ನರಳತಾಯಿರೊ ಆ ಊರಿಗೆ ಬರಲ್ಲ" ಎಂದುಬಿಟ್ಟರು ಶಾಮಣ್ಣ. ಆಗ ಅವರ ಪತ್ನಿ ಶ್ರೀದೇವಕ್ಕನವರಿಗೆ ಶಾಮಣ್ಣನನ್ನು ಕರೆದುಕೊಂಡು ಬರಲು ಹೇಳಿದಾಗ "ಅವರು ಸುಮ್ಮನೆ ಹಾಗಂತರೆ. ಒಪ್ಪಿಕೊಂಡ ಕಾರ್ಯಕ್ರಮಕ್ಕೆ ಎಷ್ಟೇ ಕಷ್ಟ ಆದ್ರು ಬರ್ತಾರೆ" ಎಂದರು.

ಇನ್ನ ತೇಜಸ್ವಿಯವರನ್ನು ಇಡಿಯಾಗಿ ತಲುಪಿಸುವ ಜವಾಬ್ದಾರಿಯನ್ನು ನಟರಾಜ್ ಹುಳಿಯಾರ್ ಮತ್ತು ಅಗ್ರಹಾರ ಕೃಷ್ಣಮೂರ್ತಿಗೆ ವಹಿಸಲಾಯ್ತು. ಈ ನಡುವೆ ತೇಜಸ್ವಿಯವರ ಒಡನಾಡಿಯಾಗಿ ಮಾತನಾಡುವವರಿಗೆ ಶೋಧಿಸುತ್ತಿದ್ದಾಗ, ಚಿಕ್ಕಮಗಳೂರು ಶಿಕ್ಷಣ ಇಲಾಖೆ ಡೆಪ್ಯೂಟಿ ಡೈರೆಕ್ಟರ್ ರುದ್ರಸ್ವಾಮಿಗಳು ಸೂಕ್ತ ಅನ್ನಿಸಿತು. ಏಕೆಂದರೆ ಅವರು ಬಿಡುವಾದಾಗಲೆಲ್ಲ ಹಲವಾರು ವರ್ಷಗಳ ಕಾಲ ತೇಜಸ್ವಿಯವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಕೇಳಿದರೆ



ಆ ಚರ್ಚೆಯೇ ಒಂದು ಅಪರೂಪದ ಪುಸ್ತಕವಾಗುತ್ತದೆ. ಈ ಬಗ್ಗೆ ರುದ್ರಸ್ವಾಮಿಗಳನ್ನು ಕೂರಿಸಿಕೊಂಡು ತೇಜಸ್ವಿಯವರ ಸಮಾಜವಾದ, ಚಿಂತನೆ ಮತ್ತು ಅವರ ಕೃತಿ ರೂಪ ತಳೆದ ಹಿನ್ನೆಲೆಯನ್ನೆಲ್ಲ ದಾಖಲಿಸಬಹುದು. ರುದ್ರಸ್ವಾಮಿಯವರಿಗೆ ಬರವಣಿಗೆಯಲ್ಲಿ ತಾಳ್ಮೆಯಿಲ್ಲ, ಆದರೆ ತೇಜಸ್ವಿ ಜೊತೆಗಿನ ಸಂಭಾಷಣೆಗಳನ್ನ ಯಥಾವತ್ ಹೇಳಬಲ್ಲರು. ನಮಗನ್ನಿಸಿದಂತೆ ತೇಜಸ್ವಿಯವರ ಪ್ರೀತಿ ಮತ್ತು ವಿಶ್ವಾಸಗಳಿಸಿದ್ದ ಏಕೈಕ ವ್ಯಕ್ತಿ ರುದ್ರಸ್ವಾಮಿಗಳು. ಅವರನ್ನು ತೇಜಸ್ವಿಯವರ ಒಡನಾಟ ಕುರಿತು ಮಾತನಾಡುವಂತೆ ಕೇಳಿಕೊಂಡೆವು. ಇನ್ನುಳಿದಂತೆ ಪ್ರದೀಪ್ ಕೆಂಜಿಗೆ ಬಾಂಬೆಗೆ ಹೋದದ್ದರಿಂದ ಬರಲಾಗಲಿಲ್ಲ, ರಾಜೇಂದ್ರ ಚೆನ್ನಿ ಮೈಸೂರಿನ ಕಾರ್ಯಕ್ರಮವೊಂದನ್ನು ಮುಗಿಸಿಕೊಂಡು ಅವರಿಗೆ ಕೊಟ್ಟಿದ್ದ ಸಮಯಕ್ಕಿಂತ ಅರ್ಧಗಂಟೆ ಮೊದಲೇ ಬಂದರು. ಅಚ್ಚರಿ ಎಂದರೆ ತೇಜಸ್ವಿಯವರ ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಶಿಕ್ಷಣ ಇಲಾಖೆಯವರು ತೋರಿದ ಉತ್ಸಾಹ. ಅಷ್ಟೇ ಅಲ್ಲ, ದೂರದ ತಿಪಟೂರು, ದಾವಣಗೆರೆ, ಶಿವಮೊಗ್ಗ, ಸಾಗರದಿಂದಲೂ ತೇಜಸ್ವಿ ಓದುಗರು ಬಂದು ಜಮಾಯಿಸಿದ್ದರು. ಇದನ್ನು ತೇಜಸ್ವಿ ಬಳಗ ಎನ್ನದೆ ವಿಧಿಯಿಲ್ಲ, ಈ ಬಳಗದ ವಿಶೇಷವಾದ ನಡವಳಿಕೆಯನ್ನ ಇಲ್ಲಿ ದಾಖಲಿಸಬೇಕು. ತೇಜಸ್ವಿಯವರ ಒಂದು ದಿನದ

ಕಾರ್ಯಕ್ರಮದ ಖರ್ಚು ವೆಚ್ಚದ ಚರ್ಚೆ ಆರಂಭಿಸುತ್ತಿದ್ದಂತೇ, ಒಬ್ಬರು "ಮಧ್ಯಾಹ್ನದ ಊಟ ನಾನು ಕೊಡಿಸುತ್ತೇನೆ" ಎಂದರು. ಮತ್ತೊಬ್ಬರು "ಕುವೆಂಪು ಕಲಾಮಂದಿರದ ಬಾಡಿಗೆ ಕಟ್ಟುತ್ತೇನೆ" ಎಂದರು. "ಬರಲಿರುವ ಅತಿಥಿಗಳ ಊಟ ವಸತಿ ಖರ್ಚು ನನ್ನದು" ಎಂದೊಬ್ಬರು ಘೋಷಿಸಿದರು. ಫ್ಲೆಕ್ಸ್ ಮತ್ತು ಆಹ್ವಾನ ಪತ್ರಿಕೆ ತಮಗಿರಲಿ ಎಂದು ಮತ್ತೊಬ್ಬರು ಹೇಳಿದರು. ಹೀಗೆ ಒಂದು ದಿನಕ್ಕೆ ತೇಜಸ್ವಿ ಲೋಕ ತೆರೆದುಕೊಳ್ಳಲು ದಶದಿಕ್ಕಿನಿಂದ ಸಹಾಯ ಹರಿದು ಬಂದವು.

ತೇಜಸ್ವಿಯವರ ಕಾರ್ಯಕ್ರಮದ ವಿಷಯವನ್ನ ಅವರ ಪತ್ನಿ ರಾಜೇಶ್ವರಿಯವರಿಗೆ ಹೇಳಿದಾಗ "ನಾನು ಮುಕ್ಕಾಲು ಭಾಗ ಬರುವ ಸಂಭವವಿದೆ. ಆದರೆ ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರು ಹಾಕಬೇಡಿ" ಎಂದರು. ಎಷ್ಟೇ ಆಗಲಿ ತೇಜಸ್ವಿಯವರ ಜೊತೆ ಹೆಜ್ಜೆ ಹಾಕಿದವರಲ್ಲವೆ, ಇರಲಿ ಎಂದು ಅವರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಹಾಕಲಿಲ್ಲ. ಆದರೆ ಕಾರ್ಯಕ್ರಮಕ್ಕೆ ನಿಗದಿತ ಸಮಯಕ್ಕೆ ಸರಿಯಾಗಿ ರಾಜೇಶ್ವರಿಯವರು ಬಂದರು.


ಹಿಂದಿನ ದಿವಸವೇ ಅಗ್ರಹಾರ ಕೃಷ್ಣಮೂರ್ತಿಗೆ ತೇಜಸ್ವಿ ಹೆಸರಲ್ಲಿ ಕೊಡುವ 'ಅನಿಕೇತನ ಪ್ರಶಸ್ತಿ' ಬಂದಿತ್ತು, ಆದ್ದರಿಂದ ಅವರಿಗೊಂದು ಶಾಲು ಹೊದಿಸಿ ಹೂವಿನ ಹಾರ ಹಾಕಲಾಯ್ತು. ಈ ಘಟನೆಯಲ್ಲಿ ಭಾಗವಹಿಸಿದ್ದಕ್ಕೆ ಅಳುಕಿದ ರಾಜೇಶ್ವರಿಯವರು ಎಲ್ಲಿ ಇದನ್ನು ತೇಜಸ್ವಿ ನೋಡಿಬಿಟ್ಟರೊ ಎಂದು ಗಲಿಬಿಲಿಗೊಂಡರಂತೆ. ಏಕೆಂದರೆ, ತೇಜಸ್ವಿ ಅಕಸ್ಮಾತ್ ಟಿವಿಯಲ್ಲಿ ಬರುವ ಸನ್ಮಾನಗಳನ್ನು ನೋಡಿ ಅಪಘಾತ ನೋಡಿದವರಂತೆ "ಇದೇನೆ ಹಿಂಗೆ" ಎಂದು ಉದ್ಗರಿಸುತ್ತಿದ್ದರಂತೆ. ಇದೆಲ್ಲಕ್ಕಿಂತ ಮುಖ್ಯವಾಗಿ ರಾಜೇಶ್ವರಿಯವರು ತೇಜಸ್ವಿಯವರು ಕಡೆಯವರೆಗೂ ಸರಕಾರಕ್ಕೆ ಒತ್ತಾಯಿಸುತ್ತಿದ್ದ ಕನ್ನಡದ ತಂತ್ರಾಂಶದ ಬಗ್ಗೆ ಪ್ರಸ್ತಾಪಿಸಿ, ಸಚಿವರಾದಿಯಾಗಿ ಯಾರೂ ಇದನ್ನು ಪ್ರಸ್ತಾಪಿಸದ್ದಕ್ಕೆ ಬೇಸರಗೊಂಡರು. "ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಈಗಾಗಲೇ ಅವರ ಭಾಷೆಗಳು ಅಂತರ್ಜಾಲದಲ್ಲಿ ದೊರಕುತ್ತಿರುವಾಗ ಕನ್ನಡದಲ್ಲಿ ಇದೇಕೆ ಇನ್ನೂ ಸಾಧ್ಯವಾಗಿಲ್ಲ" ಎಂದರು ರಾಜೇಶ್ವರಿ.

ಈ ಕಾರ್ಯಕ್ರಮದ ರೂಪುರೇಷೆ ಮಾಡಿಕೊಟ್ಟ ನಟರಾಜ್ ಹುಳಿಯಾರ್ ಅನಾರೋಗ್ಯದ ಕಾರಣವಾಗಿ ಬರಲಾಗಲಿಲ್ಲ, ಆದರೆ ಅವರು ಕಳುಹಿಸಿಕೊಟ್ಟ ಆಶಯ ಭಾಷಣದ ಅಂತಿಮ ಭಾಗಕ್ಕೆ ಮಂತ್ರಿವರ್ಯರಾದ ಕಿಮ್ಮನೆ ರತ್ನಾಕರ್ ಸಭೆಯಲ್ಲೇ ಉತ್ತರ ಕೊಟ್ಟರು. ಆ ಭಾಷಣದ ಸಾಲು ಹೀಗಿದೆ:

"ಮಾನ್ಯ ಕಿಮ್ಮನೆಯವರೆ, ತೇಜಸ್ವಿಯವರ ಎಲ ಪುಸ್ತಕಗಳು ಕನ್ನಡ ಶಾಲೆಗಳಲ್ಲಿರುವಂತೆ ನೋಡಿಕೊಳ್ಳಿ ಹಾಗೆಯೇ ದಯವಿಟ್ಟು ಪಿಯುಸಿ ಶಿಕ್ಷಕರನ ಅವೈಜ್ಞಾನಿಕವಾದ ಬಿ.ಎಡ್ ಪದವಿಯ ಹೊರೆಯಿಂದ ಪಾರು ಮಾಡಿ. ಅವರ ಪ್ರೊಬೇಷನರಿ ಅವಧಿಯನು ಬೇಗನೆ ಘೋಷಿಸುವ ಮೂಲಕ ಅವರ ಸಮಸ್ಯೆಗೆ ಪರಿಹಾ ನೀಡಿ. ಆನಂತರ ಪಿಯುಸಿ ಶಿಕ್ಷಕರಿಗೆ ತಕ್ಕ ಎರಡು ರಿಫ್ರೆಷ್‌ನ ಕೋರ್ಸ್ ನಡೆಸುವ ಮೂಲಕ ಈ ಶಿಕ್ಷಕರನ್ನು ಬೋಧನೆ ಸಜ್ಜುಗೊಳಿಸಿ. ಇದೀಗ ಆರಂಭವಾಗಿರುವ ತೇಜಸ್ವಿ ವಿಚಾರಸಂಕಿರಣ ಚಿಕ್ಕಮಗಳೂರು ಜಿಲ್ಲೆಯಲ್ಲಿ ವೈಚಾರಿ ಪರಿಸರದ ಮರು ಉದ್ಘಾಟನೆಗೆ ನಾಂದಿಯಾಗಲಿ."

ತೇಜಸ್ವಿ ಲೋಕದ ವಿಚಾರ ಸಂಕಿರಣದಿಂದ ಸ್ಫೂರ್ತಿಗೊಂಡ ಹಲವರು "ಇನ್ನು ಮುಂದೆ ಕುವೆಂಪು ಲಂಕೇಶ್ ಇವರ ವಿಚಾರಸಂಕಿರಣವನ್ನು ಮಾಡೋಣ ಎಂದರು. ಅದರಲ್ಲೂ ಕರ್ನಾಟಕ ಸಾಂಸ್ಕೃತಿಕ ಲೋಕದ ನಡೆದ ಒಂದು ಮಹತ್ವದ ಘಟನೆ ಎಂದರೆ 1980 ಜುಲೈ ಆರನೇ ತಾರೀಕು. ಅದರ ಆಚರಣೆಯನ ಆರಂಭಿಸೋಣ ಎಂದರು. ಏಕೆಂದರೆ ಆ ದಿನವೇ ಲಂಕೇಶ ತಮ್ಮ ಪತ್ರಿಕೆ ತೆರೆದದ್ದು!

● ವರದಿಗಾ



ವಿತಂಡವಾದಿ ಪುರೋಹಿತಶಾಹಿಗಳು

ಯು.ಆರ್.ಅನಂತಮೂರ್ತಿಯವರ ಗೋವಿನ ಕುರಿತ ಹೇಳಿಕೆಗೆ ಸಂಬಂಧಿಸಿದಂತೆ ಟಿವಿ 9 ನಲ್ಲಿ ಪಾರ್ವತೀಶ ಅವರು ಭಾಗವಹಿಸಿದ್ದ ಚರ್ಚಾ ಕಾರ್ಯಕ್ರಮ ನೋಡಿದೆ.

ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಆಚಾರ್ಯ ಎಂಬ ಬ್ರಾಹ್ಮಣನ ತರಹದ ಪುರೋಹಿತಶಾಹಿಗಳು ಎಂಥವರೆಂದರೆ ಅವರು ಮನುಸ್ಮೃತಿ ಸನಾತನ ಧರ್ಮದ ತಳಹದಿ ಎನ್ನುತ್ತಾರೆ. ಅದಕ್ಕೆ ತೀವ್ರ ವಿರೋಧ ವ್ಯಕ್ತವಾದರು ಮನುಸ್ಮೃತಿ ಕಾಲ್ಪನಿಕ, ಅದನ್ನು ಬ್ರಿಟಿಷರು ಬರೆಸಿದ್ದು ಎನ್ನುತ್ತಾರೆ. ಯಾವುದರ ಬಗ್ಗೆಯೂ ಅವರು ಮುಕ್ತವಾಗಿ ಚಿಂತನೆಗೆ ಇಳಿಯದೇ ವಿತಂಡವಾದದಿಂದ ಅಲ್ಲಗಳೆಯುತ್ತಾರೆ.

ವಿದೇಶಿಯರು ನಮ್ಮ ಧರ್ಮಗ್ರಂಥಗಳನ್ನು ದುರುದ್ದೇಶಪೂರಿತವಾಗಿ ತಿದ್ದಿ ಬರೆಸಿದರು ಎನ್ನುತ್ತಾರೆ. ಜೊತೆಗೆ ನಮ್ಮ ಸಂಸ್ಕೃತಿಯನ್ನು ವಿದೇಶಿಯರು ಮೆಚ್ಚಿ ಅಳವಡಿಸಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ. ಅದೇ ಧರ್ಮ ಗ್ರಂಥಗಳಲ್ಲಿ "ಸ್ಪಷ್ಟವಾಗಿ ಹೀಗೆ ಹೇಳಿದೆ" ಎನ್ನುತ್ತಾರೆ. ಆದರೆ ಅಪವಾದ ಬಂದಾಗ "ಸಂಸ್ಕೃತ ಭಾಷೆಗೆ ಹಲವು ಅರ್ಥಗಳನ್ನು ಕೊಡುವ ಗುಣವಿದೆ" ಎಂದು ಅಡ್ಡಗೋಡೆ ಮೇಲೆ ದೀಪವಿಡುತ್ತಾರೆ.

ಪುರಾಣಗಳಲ್ಲಿನ ಪುಷ್ಪಕ ವಿಮಾನದಂತಹ ಅಸಾಮಾನ್ಯ ವಿಚಾರಗಳನ್ನು ಅದ್ಭುತ ಸತ್ಯ ಎಂದು ಬಣ್ಣಿಸುತ್ತಾರೆ. ಉದಾಹರಣೆಗೆ ಗಣಪತಿಗೆ ತಲೆ ಕಸಿ ಆ ಕಾಲದ ವಿಜ್ಞಾನದ ಪ್ರಗತಿ ಎನ್ನುತ್ತಾರೆ. ತುಂಬಾ ಪ್ರಶ್ನೆಗಳು ಎದುರಾದರೆ "ಪುರಾಣ ಕಥೆಗಳು ಕೇವಲ ಸಾಂಕೇತಿಕವಿರುತ್ತವೆ. ಅದರ ಗೂಢಾರ್ಥವನ್ನು ಗ್ರಹಿಸಬೇಕು. ಇದಕ್ಕಾಗಿ ಶಾಸ್ತ್ರಾಧ್ಯಯನ ಅಗತ್ಯ" ಎಂದು ಜಾರಿಕೊಳ್ಳುತ್ತಾರೆ.

ಸ್ವತಃ ಬ್ರಾಹ್ಮಣರಾದ ಅನಂತಮೂರ್ತಿಯವರು ಬ್ರಾಹ್ಮಣರ ಆಹಾರ ಕುರಿತ ಹೇಳಿಕೆಗೆ ಹಿಂದೂ ಸಮಾಜದ ವಕ್ತಾರನಾಗಿ ಉತ್ತರಿಸಹೊರಟ ಮೋಹನಗೌಡನ ಮಾತುಗಳಿಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ. "ದೇವಾಲಯಗಳ ನಿಯಮಗಳು ಸರಿಯೇ ಇದೆ. ಬ್ರಿಟಿಷರು ನಮ್ಮ ಸಂಸ್ಕೃತಿ ಗ್ರಂಥ ಬರಹ ಹಾಳುಮಾಡಿದರು" ಎಂದ ಮೋಹನಗೌಡನಿಗೆ ಬ್ರಿಟಿಷರು ನಮ್ಮ ದೇಶಕ್ಕೆ ಬರದೇ ಇದ್ದಿದ್ದರೆ, ಸಮಾಜದಲ್ಲಿ ವಿದ್ಯಾಭ್ಯಾಸದ ಅವಕಾಶ ಮುಕ್ತಗೊಳ್ಳದಿದ್ದರೆ ಈ ಗೌಡ ಈ ರೀತಿ ಮೈಕ್‌ನಲ್ಲಿ ಯಾರೋ ಬರೆದು ಹೇಳಿಕೊಡುತ್ತಿದ್ದ ಮಾತನಾಡೊ ಬದಲಿಗೆ ಯಾರದ್ದೋ ಮನೆಯ ಜೀತದಲ್ಲಿ ಇರುತ್ತಿದ್ದ ಎಂದು ಅರ್ಥವಾಗಬೇಕಿದೆ.


***

ಕೇವಲ 140 ರೂಪಾಯಿಂದಾರಂಭಿಸಿ ಇದೀಗ ಕೋಟಿಗಳ ಲೆಕ್ಕದಲ್ಲಿ ಆಟವಾಡುತ್ತಿರುವ ಭಾರತೀಯ ಚಿತ್ರರಂಗದ ದಂತಕಥೆ ಪ್ರಕಾಶ್ ರೈ 'ಭಾಗ್ ಮಿಲ್ಕಾ ಭಾಗ್' ಚಿತ್ರಕ್ಕಾಗಿ ಕೇವಲ 1 ರೂ. ಸಂಭಾವನೆ ಪಡೆದಿದ್ದು ಇದೇ ಮೊದಲ ಬಾರಿಯಲ್ಲ, ಪಿ.ಶೇಷಾದ್ರಿಯವರ 'ಅತಿಥಿ' ಚಿತ್ರಕ್ಕಾಗಿ ಇದೇ ಬಗೆಯ ಮೊತ್ತವನ್ನೇ ಅವರೊಮ್ಮೆ ಪಡೆದಿದ್ದುಂಟು. ಸ್ಟಾರ್ ಆಗಿ ಮೆರೆಯುತ್ತಿದ್ದ ರೈಯನ್ನು 'ಅತಿಥಿ' ಚಿತ್ರದ ಪಾತ್ರಕ್ಕಾಗಿ ಕಾಲ್‌ಶೀಟ್ ಕೇಳಲು ಶೇಷಾದ್ರಿ ಅರೆಮನಸ್ಸಿನಿಂದಲೇ ಚೆನ್ನೈಗೆ ಹೋಗಿದ್ದರಂತೆ. ಭೇಟಿ ಸಮಯದಲ್ಲಿ ಸಂಭಾವನೆ ಕುರಿತಂತೆ ರೈ ಆಡಿದ ಒಗಟಿನಂತಹ ಮಾತಿನಿಂದ ಆತನ ಆಸೆ ಬಿಟ್ಟ ಶೇಷಾದ್ರಿ ಎದ್ದು ಹೊರಡಲು ನಿಂತಾಗ ರೈ "ನಾನು ನಟಿಸಲಾರೆ ಎಂದು ನಿಮಗೆಲ್ಲಿ ಹೇಳಿದೆ?" ಎಂದು ಕೇವಲ 1 ರೂ. ಸಂಭಾವನೆಗಾಗಿ ನಟಿಸಲು ಒಪ್ಪಿಕೊಂಡರಂತೆ. 'ಅತಿಥಿ' ಚಿತ್ರದ ಶೂಟಿಂಗ್ ಮುಗಿದ ಬಳಿಕ ಒಂದು ಸಣ್ಣ ಕಾರ್ಯಕ್ರಮ ಆಯೋಜಿಸಿ ಫ್ರೇಮ್ ಹಾಕಿದ 1 ರೂ.ವನ್ನು ರೈ ಅವರಿಗೆ ನೀಡಲಾಯಿತಂತೆ.

- ರವಿ ಪುತ್ತೂರ

ವಿದ್ಯಾವಂತರೂ ಕಂದಾಚಾರಕ್ಕೆ ಬಲಿಯಾಗುತ್ತಿದ್ದಾರೆ

ಅಕ್ಟೋಬರ್ 2, 2013ರ ಸಂಚಿಕೆಯಲ್ಲಿ ಡಾ.ಹಯವದನ ಉಪಾಧ್ಯ ಇವರು ಯಾಣಕ್ಕೆ ಕಾಲೇಜಿನ




ಶೈಕ್ಷಣಿಕ ಪ್ರವಾಸಕ್ಕೆ ಹೋಗಿದ್ದಾಗ ಅಲ್ಲಿ ಅವ ವಿದ್ಯಾರ್ಥಿಗಳು ತೋರಿಸಿದ ಕಂದಾಚಾರದಿಂದ ಅವರಿಗಾ ಕೆಟ್ಟ ಅನುಭವದ ಬಗೆಗಿನ ಲೇಖನ ವಿಚಾ ಪ್ರಚೋದಕವಾಗಿದೆ.

ವಿದ್ಯಾವಂತರಲ್ಲಿ ಕಂದಾಚಾರ ಕಡಿಮೆಯಾಗಿ ವೈಜ್ಞಾ ಮನೋಭಾವ ಹೆಚ್ಚುವ ಬದಲು ಅದು ಉಲ್ಟಾ ಆಗುತ್ತಿ ಇಸ್ರೋದ ಈಗಿನ ಮುಖ್ಯಸ್ಥರು ತಮಗೆ ಬಡ್ತಿ ಸಿಕ್ಕ ಕೂಡ ಗುರುವಾಯೂರಿಗೆ ಹೋಗಿ ತುಲಾಭಾರ ಮಾಡಿಸುತ್ತಾ ರಾಕೆಟ್ ಹಾರಿಸುವ ಮೊದಲು ಅದರ ಸಣ್ಣ ಪ್ರತಿ ಮಾಡಿಸಿ ಅದನ್ನು ದೇವಸ್ಥಾನಕ್ಕೆ ಕೊಂಡು ಹೋಗಿ ಪೂ ಮಾಡಿಸುತ್ತಾರೆ, ಶುಭ ಘಳಿಗೆ – ಮುಹೂರ್ತ – ರಾಹುಕಾ ಮುಂತಾದವನ್ನು ಜ್ಯೋತಿಷಿಗಳಿಂದ ಕೇಳಿ ರಾಕೆ ಹಾರಿಸಲು ಸಮಯ ನಿಗದಿ ಮಾಡುತ್ತಾರೆ, ವಾಸ್ತು ಪ್ರಕಾ ತಮ್ಮ ಆಫೀಸಿನ ಕಿಟಕಿ ಬಾಗಿಲು ಬದಲಾಯಿಸುತ್ತಾ ಸ್ಯಾಟಲೈಟಿಗೆ ಹೆಸರಿಡಲು ನ್ಯೂಮರಾಲಾಜಿಸ್ಟರ ಸಲ ಕೇಳುತ್ತಾರೆ! ವೈಜ್ಞಾನಿಕ ಸಂಶೋಧನೆಯ ಅತ್ಯು ಸಂಸ್ಥೆಯಲ್ಲಿಯೇ ಇಂತಹ ಕಂದಾಚಾರವಾದರೆ ಇನ್ನ ಸಾಧಾರಣ ಕಾಲೇಜು ವಿದ್ಯಾರ್ಥಿಗಳು ಕಂದಾಚಾ ತೋರಿಸದೇ ಇರುತ್ತಾರೆಯೇ.

ಯಾಣದ ಬಂಡೆಗಳ ಬಗ್ಗೆ ಡಾ.ಉಪಾಧ್ಯಾ ಅ ವೈಜ್ಞಾನಿಕ ವಿಶ್ಲೇಷಣೆ ರುಚಿಸದೇ ಪೂಜೆ ಮಾಡಿಸ ಓಡುವ ಕಂದಾಚಾರಿ ಪದವಿ ವಿದ್ಯಾರ್ಥಿಗಳ ನಡ ಒಬ್ಬ ವಿಚಾರವಾದಿ ಶಿಕ್ಷಕನು ಅನುಭವಿಸುವ ಮಾನ ಹಿಂಸೆಯನ್ನು ನಾವು ಅರ್ಥಮಾಡಿಕೊಳ್ಳಬಹುದು. ಕಾ ವಿಚಾರವಾದಿಗಳ ಕುಟುಂಬದೊಳಗೆಯೂ ಇಂತಹ ವಿಷಮ ವಾತಾವರಣವಿರುತ್ತದೆ. ಕುಟುಂಬದ ಯಜಮಾ ಒಬ್ಬನೇ ವಿಚಾರವಾದಿಯಾಗಿದ್ದು ಹೆಂಡತಿ ಮಕ್ಕಳು ಬಂ ಬಾಂಧವರೆಲ್ಲ ವಿದ್ಯಾವಂತ-ಕಂದಾಚಾರಿಗಳಾಗಿದ್ದರೆ

"ಒಂದೇ ಶಾಟ್‌ನಲ್ಲಿ ಸಿನಿಮಾ ಮಾಡುವೆ..."

ಸಂದರ್ಶನ



ಛಾಯಾಗ್ರಹಕ ನಂದ ಅವರು ಕನ್ನಡ ಚಿತ್ರರಂಗದಲ್ಲಿ ಹೊಸ ಪ್ರಯತ್ನಗಳನ್ನು ಮಾಡುತ್ತಿರುವವರು. ಅವರೊಂದಿಗಿನ ಮಾತುಕತೆ ಇಲ್ಲಿದೆ.

ಪ್ರಶ್ನೆ: ನಿಮ್ಮ ಹಿನ್ನೆಲೆ ಬಗ್ಗೆ ಸ್ವಲ್ಪ ಹೇಳಿ.

ನಂದ: ನನ್ನ ಪೂರ್ತಿ ಹೆಸರು ಎಂ.ಯು.ನಂದಕುಮಾರ್ ...ತ. ಮೂಲತಃ ಮೈಸೂರಿನವನು. ಎಸ್ಸೆಸ್ಸೆಲ್ಸಿವರೆಗೂ ...ದಿದ್ದೀನಿ. ಮನೆ ಕಡೆ ಪ್ರಾಬ್ಲಮ್ ಇದ್ದಿದ್ರಿಂದ ಕಾಲೇಜಿಗೆ ...ೋಗಲು ಆಗಲಿಲ್ಲ. ನಮ್ಮದು ಮಧ್ಯಮ ವರ್ಗದ ...ಟುಂಬ.

ಪ್ರಶ್ನೆ: ನಿಮ್ಮ ಕುಟುಂಬಕ್ಕೂ ಕಲೆಗೂ ಏನಾದ್ರೂ ...ಟು ಇದೆಯಾ?

ನಂದ: ನಮ್ಮ ಸೋದರಮಾವ ನಾಟಕಗಳಲ್ಲಿ ...ಭಿನಯಿಸುತಿದ್ರು. ಅವುಗಳಲ್ಲಿ ದಕ್ಷಯಜ್ಞ, ತ್ರಿಪುರ ಸಂಹಾರ ...ಮುಖ ನಾಟಕಗಳು. ನನಗೂ ಕೂಡ ಸುಬ್ರಹ್ಮಣ್ಯನ ...ತ್ರ ಮಾಡುವ ಅವಕಾಶ ಬಂದಿತ್ತು. ಯಾವಾಗ ಮೇಸ್ಟ್ರು ...ರ್ಮೋನಿಯಂ ಹಿಡಿದುಕೊಂಡು ಕೂತರೋ ಭಯ ...ರುವಾಗಿ ಅಲ್ಲಿಂದ ಎಸ್ಕೇಪಾಗ್ಬಿಟ್ಟೆ. ಕಡೆಗೂ ರಂಗಕಲಾವಿದ ...ಗ್ಲಿಲ್ಲ.

ಪ್ರಶ್ನೆ: ಸಿನಿಮಾ ಜಗತ್ತಿನ ಬಗ್ಗೆ ಆಸಕ್ತಿ ಹುಟ್ಟಿಕೊಂಡಿದ್ದು ...ಗೆ?

ನಂದ: ನಾನು ಚಿಕ್ಕವನಿದ್ದಾಗ 'ಕಿಂದರ ಜೋಗಿ' ಸಿನಿಮಾ ...ಟಿಂಗಿಗೆ ಅಂತ ಚಿತ್ರತಂಡ ಮೈಸೂರಿನ 'ಪ್ರೀಮಿಯರ್ ...ಡಿಯೋ'ಗೆ ಬಂದಿತ್ತು. ಆ ಸಿನಿಮಾದಲ್ಲಿ ನಮ್ಮ ಪಕ್ಕದ ...ನೆಯ ವ್ಯಕ್ತಿಯೊಬ್ಬರು ಪುಟ್ಟದೊಂದು ಪಾತ್ರ ಮಾಡಿದ್ದರು. ಅವರ ಜೊತೆ ಚಿತ್ರೀಕರಣ ನೋಡಲು ಹೋಗಿದ್ದೆ. ಅಲ್ಲಿ ರವಿಚಂದ್ರನ್, ಜೂಹಿ ಚಾವ್ಲಾ ಇದ್ರು. ಅವರನ್ನು ಡೈರೆಕ್ಟಾಗಿ ನೋಡಿ ರೋಮಾಂಚನವಾಯ್ತು. ಅಲ್ಲಿಯ ಅಟ್ಮಾಸ್ಫಿಯರ್ ನನ್ನ ಮನಸ್ಸನ್ನು ಸೆಳೆಯಿತು. ಅವತ್ತಿಂದ ನಾನೂ ಚಿತ್ರರಂಗದಲ್ಲಿ ಏನಾದರು ಸಾಧಿಸಬೇಕು ಅಂತ ಆಸೆ ಬಂತು.

ಪ್ರಶ್ನೆ: ಗಾಂಧಿನಗರಕ್ಕೆ ಬಂದಿದ್ದು ಹೇಗೆ?

ನಂದ: ಮೈಸೂರಿನಲ್ಲಿ ಮನೋಹರ್ ಅಂತ ಒಬ್ರಿದ್ರು. ಅವರು ಕುಮಾರ್ ಬಂಗಾರಪ್ಪನವರ 'ರೇಣುಕಾಂಬ ಕಂಬೈನ್ಸ್'ನಲ್ಲಿ ಮ್ಯಾನೇಜರ್ ಆಗಿದ್ರು. ಅವರೇ ನನ್ನನ್ನು ಮೊದಲ ಬಾರಿಗೆ ಗಾಂಧಿನಗರಕ್ಕೆ ಕರಕೊಂಡು ಬಂದೋರು. ಮೊದಲಿಗೆ ಅಂಬರೀಶ್ ಅಭಿನಯದ ಒಂದು ಸಿನಿಮಾದಲ್ಲಿ ಮೇಕಪ್ ಅಸಿಸ್ಟೆಂಟ್ ಆಗಿ ಕೆಲಸ ಕೊಡಿಸಿದರು. ಒಂದಷ್ಟು ಕಾಲ ಆ ಕೆಲಸ ಮಾಡಿದೆ. ಆಮೇಲೆ 'ಕ್ಷೀರ ಸಾಗರ' ಶುರುವಾಗುವಷ್ಟರಲ್ಲಿ 'ಯೂನಿಯನ್ ಕಾರ್ಡ್' ಮಾಡಿಸಬೇಕು ಅಂತ ತಗಾದೆ ಬಂತು. ಆ ಕೆಲಸ ಅಲ್ಲಿಗೆ ಕಟ್.

ಪ್ರಶ್ನೆ: ಅಲ್ಲಿಂದ ಮತ್ತೆಲ್ಲಿಗೆ?

ನಂದ: ಅಷ್ಟರಲ್ಲಿ ಚಿತ್ರರಂಗದ ಒಳಹೊರಗುಗಳ ಬಗ್ಗೆ ಒಂದಿಷ್ಟು ತಿಳಿದುಕೊಂಡಿದ್ದೆ. ಹೇಗೋ ರವಿಚಂದ್ರನ್ ಅವರ 'ಈಶ್ವರಿ' ಕಂಪನಿಯಲ್ಲಿ ಕೆಲಸ ಸಿಕ್ಕಿತು. 'ಕ್ಯಾಮೆರಾ ವೀಡಿಯೋ ರೆಕಾರ್ಡಿಂಗ್ ಅಸಿಸ್ಟೆಂಟ್' ಆದೆ. ಆ ಸಂಸ್ಥೆಯ ಪರ್ಮನೆಂಟ್ ಉದ್ಯೋಗಿಯಾದೆ. ಅಲ್ಲೇ ಬಹಳಷ್ಟು ಕಲಿತದ್ದು. ರವಿಚಂದ್ರನ್ ಅವರಿಂದ ತಾಂತ್ರಿಕವಾಗಿ ಎಲ್ಲಾ ವಿಭಾಗಗಳಲ್ಲೂ ತಿಳಿದುಕೊಳ್ಳಲು ಪ್ರಯತ್ನಿಸಿದೆ.

ಪ್ರಶ್ನೆ: ಸಿನಿಮಾಟೋಗ್ರಫಿ ಲಿಂಕ್ ಹೇಗೆ ಸಿಕ್ತು?

ನಂದ: ನಾನು ಈಶ್ವರಿ ಕಂಪನಿಯಲ್ಲಿ ಕೆಲಸ ಮಾಡುವಾಗ ಕ್ಯಾಮೆರಾಮ್ಯಾನ್ ಸೀತಾರಾಂ ಅವರ ಪರಿಚಯವಾಯ್ತು. ಅವರು ಲೆನ್ಸ್, ಫ್ರೇಮ್ ಮಾತ್ರವಲ್ಲ ಶಾಟ್ ಕಂಪೋಸ್ ಮಾಡುವುದರಿಂದ ಹಿಡಿದು, ಯಾವ ಯಾವ ಮೂಡ್‌ಗೆ ಯಾವ ಯಾವ ಬಗೆಯಲ್ಲಿ ಲೈಟಿಂಗ್ ಮಾಡಿಕೊಳ್ಳಬೇಕು ಅನ್ನೋದನ್ನು ಹೇಳಿಕೊಟ್ರು. ಅವರಿಂದ ಬಹಳಷ್ಟು ಕಲಿತೆ. ಅವರ ಬಳಿಯೇ ಮೊದಲಸಾರಿ ಕ್ಯಾಮೆರಾ ಅಸಿಸ್ಟೆಂಟ್ ಆಗಿ ಸೇರಿಕೊಂಡಿದ್ದು. ಅವರ ಜೊತೆ ಅನೇಕ ಸಿನಿಮಾಗಳಲ್ಲಿ ಕೆಲಸ ಮಾಡಿದೆ.

ಪ್ರಶ್ನೆ: ಸೀತಾರಾಂ ಹೊರತುಪಡಿಸಿ ಬೇರೆ ಯಾರ್‍ಯಾರ ಬಳಿ ಅಸಿಸ್ಟೆಂಟ್ ಕ್ಯಾಮೆರಾಮ್ಯಾನ್ ಆಗಿ ಕೆಲಸ ಮಾಡಿದೀರಿ?

ನಂದ: ಬಿ.ಸಿ.ಗೌರಿಶಂಕರ್, ಪಿ.ಕೆ.ಎಚ್.ದಾಸ್, ಎಸ್.ಕೃಷ್ಣ ಶೇಖರ್ ಚಂದ್ರು ಸೇರಿದಂತೆ ಅನೇಕರ ಜೊತೆ ವರ್ಕ್ ಮಾಡಿದ್ದೀನಿ.

ಪ್ರಶ್ನೆ: ಅಸಿಸ್ಟೆಂಟ್ ಆಗಿ ಕೆಲಸ ಮಾಡಿದ ಕೆಲವು ಚಿತ್ರಗಳನ್ನು ಹೆಸರಿಸುತ್ತೀರಾ?

ನಂದ: ಬಹಳಷ್ಟು ಚಿತ್ರಗಳಿವೆ... ಅವುಗಳಲ್ಲಿ 'ಹಳ್ಳಿಮೇಷ್ಟ್ರು', 'ಪುಟ್ನಂಜ', 'ಸಿಪಾಯಿ', 'ಕಲಾವಿದ', 'ಮೊಮ್ಮಗ', 'ಏಕಾಂಗಿ', 'ಆನಂದ ಜ್ಯೋತಿ', 'ಪುರುಷೋತ್ತಮ', 'ದಿಗ್ಗಜರು', 'ಸಿರಿವಂತ', 'ಹುಚ್ಚ', 'ಓಂ', 'ಸೋಲಿಲ್ಲದ ಸರದಾರ', 'ಮೌರ್ಯ', 'ಅಜಯ್', 'ರಾಜ್', 'ಬೆಳ್ಳಿಯಪ್ಪ ಬಂಗಾರಪ್ಪ', 'ನಮ್ಮ ಬಸವ', 'ಹಾಗೆ ಸುಮ್ಮನೆ' ಮತ್ತು 'ಮುಂಗಾರು ಮಳೆ' ಸದ್ಯಕ್ಕೆ ನೆನಪಿಗೆ ಬಂದಂಥವು.

ಪ್ರಶ್ನೆ: ರವಿಚಂದ್ರನ್ ಅವರ ಜೊತೆ ಕೆಲಸ ಮಾಡುವಾಗಿನ ಅನುಭವ ಹೇಗಿತ್ತು? ಒಂದು ಯಾವುದಾದರೂ ಘಟನೆ ಹೇಳ್ತೀರಾ?

ನಂದ: 'ಮಲ್ಲ' ಟೈಮಲ್ಲಿ ಒಂದು ಇನ್ಸಿಡೆಂಟ್ ಆಯ್ತು. ಒಂದು ದಿನ ಮಾನಿಟರ್ ರೆಕಾರ್ಡರ್ ಕೆಟ್ಟುಹೋಗಿತ್ತು. ಅವತ್ತು ನನಗೆ ಅಷ್ಟೇನೂ ಕೆಲಸವಿರಲಿಲ್ಲ. ಆಗ ರವಿ ಸಾರ್ "ಏನೋ, ಇವತ್ತೇನೂ ಕೆಲಸ ಇಲ್ವಲ್ಲೋ ನಿಂಗೆ. ಡೈರೆಕ್ಟರಾಗ್ತಿಯೇನೋ?" ಅಂತ ಸಡನ್ನಾಗಿ ಅಂದುಬಿಟ್ಟರು. ನಾನು "ಆಗ್ತೀನಿ ಸಾರ್!" ಅಂದೆ. ಅದಕ್ಕೆ ಅಲ್ಲೇ ಇದ್ದ ಸೀತಾರಾಂ ಸಾರ್ "ಏಮ್ರಾ... ಡೈರೆಕ್ಟರಾವ್ತಾವಾ?" ಅಂದರು. ನಾನು ಉತ್ತರಿಸುವಷ್ಟರಲ್ಲಿ ರವಿ ಸಾರ್ "ಆಗ್ತಾನಿವ್ನ!" ಅಂದ್ರು. ಪಕ್ಕದಲ್ಲೇ ಇದ್ದ ಸಾಹಸ ನಿರ್ದೇಶಕ ಕೆ.ಡಿ.ವೆಂಕಟೇಶ್ ಗುಟ್ಟಾಗಿ ಅಭಿನಂದಿಸಿದರು. ನಂಗೆ ಏನೇನೋ ಆಯ್ತು. ಹೇಳಕ್ಕಾಗಲ್ಲ ಬಿಡಿ!

ಪ್ರಶ್ನೆ: ಪ್ರೇಮ್ ಅವರ 'ಜೋಗಯ್ಯ' ಸಿನಿಮಾ ಮೂಲಕ ಮೊದಲ ಬಾರಿಗೆ ಸ್ವತಂತ್ರ ಕ್ಯಾಮೆರಾಮ್ಯಾನ್ ಆದ್ರಿ. ಸಾಲದ್ದಕ್ಕೆ 'ಜೋಗಯ್ಯ' ಶಿವಣ್ಣನ ನೂರನೇ ಚಿತ್ರ. ಈ ಅವಕಾಶ ಹೇಗೆ ಬಂತು?

ನಂದ: ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜ್' ಚಿತ್ರಕ್ಕೆ ಎಸ್.ಕೃಷ್ಣರ ಜೊತೆ ಅಸೋಸಿಯೇಟ್ ಕ್ಯಾಮೆರಾಮ್ಯಾನ್ ಆಗಿ ಕೆಲಸ ಮಾಡಿದ್ದೆ. ಅಲ್ಲಿ ಪ್ರೇಮ್ ಅವರು ನನ್ನ ಕೆಲಸ ನೋಡಿ ಮೆಚ್ಚಿಕೊಂಡಿದ್ದರು ಅನ್ಸುತ್ತೆ. ಅದಕ್ಕೆ ಅಂಥದೊಂದು ದೊಡ್ಡ ಚಿತ್ರದಲ್ಲಿ ಕೆಲಸ ಮಾಡಲು ಚಾನ್ಸ್ ಕೊಟ್ರು ಅನ್ಸುತ್ತೆ. ಅವರೊಬ್ಬ ಅದ್ಭುತ ಟೆಕ್ನಿಷಿಯನ್. ಫ್ರೇಮ್ ಟು ಫ್ರೇಮ್ ಸಿನಿಮಾ ಹೇಗಿರಬೇಕು ಅನ್ನೋದರ ಬಗ್ಗೆ ನಿಖರವಾದ ಐಡಿಯಾ ಇರುತ್ತೆ ಅವರಿಗೆ. 'ಜೋಗಯ್ಯ' ಚಿತ್ರದಲ್ಲಿ ಸಾಕಷ್ಟು ಫ್ರೀಡಂ ಕೊಟ್ಟಿದ್ರು. ಆ ಸಿನಿಮಾ ಮೂಲಕ ಅವರಿಂದ ಸಾಕಷ್ಟು ಕಲಿತೆ.

ಪ್ರಶ್ನೆ: ಬೇರೆ ಯಾವ ಯಾವ ನಿರ್ದೇಶಕರ ಜೊತೆ ಕೆಲಸ ಮಾಡುವಾಸೆ?


ನಂದ: ಕೆ.ವಿ.ರಾಜು ಅವರ ಜೊತೆ ಒಂದು ಸಿನಿಮಾದಲ್ಲಿ ಕೆಲಸ ಮಾಡುವಾಸೆ. ಹಾಗೇನೆ ಸೂರಿ, ಶಶಾಂಕ್, ಡಿ.ರಾಜೇಂದ್ರ ಬಾಬು, ಯೋಗರಾಜ ಭಟ್ರು ನನ್ನ ನೆಚ್ಚಿನ ನಿರ್ದೇಶಕರು. ಇವರ ಜೊತೆ ಮುಂದೆ ಅವಕಾಶ ಒದಗಿ ಬಂದರೆ ಕೆಲಸ ಮಾಡುವಾಸೆ.

ಪ್ರಶ್ನೆ: ನಿಮ್ಮ ನೆಚ್ಚಿನ ಛಾಯಾಗ್ರಾಹಕರು ಯಾರು?

ನಂದ: ಪಿ.ಸಿ.ಶ್ರೀರಾಮ್, ಸಂತೋಷ್ ಶಿವನ್, ರವಿ ಕೆ ಚಂದ್ರನ್ ನನಗಿಷ್ಟ.

ಪ್ರಶ್ನೆ: ನಿಮ್ಮ ಮುಂದಿನ ಚಿತ್ರಗಳು?

ನಂದ: 'ನಮಸ್ತೇ ಇಂಡಿಯಾ' ಅನ್ನೋ ಉತ್ಸಾಹಿ ಯುವಕರ ಒಂದು ಸಿನಿಮಾ ಮಾಡ್ತಿದ್ದೀನಿ. ಈ ಚಿತ್ರದ ವಿಶೇಷ ಅಂದ್ರೆ, ಇಡೀ ಸಿನಿಮಾವನ್ನು ಒಂದೇ ಶಾಟ್‌ನಲ್ಲಿ ತೆಗೆಯೋದು. ಆ ಕುರಿತು ಈಗಾಗಲೇ ಡೈರೆಕ್ಟರ್ ಜೊತೆ



ಚರ್ಚೆ ನಡೆಸಿ ಪ್ಲಾನ್ ಮಾಡ್ತಾ ಇದ್ದೀನಿ. ಮುಂದಿನ ತಿಂಗಳು ಶೂಟಿಂಗ್ ಶುರುವಾಗಲಿದೆ. ಚಿತ್ರದ ಡ್ಯೂರೇಶನ್ 2 ಗಂಟೆ ಇರುತ್ತೆ.

ಪ್ರಶ್ನೆ: ಈ ಮೊದಲು ಹೀಗೆ 'ಒಂದೇ ಶಾಟ್'ನಲ್ಲಿ ಚಿತ್ರೀಕರಿಸಿದ ಚಿತ್ರಗಳು ಬೇರೆ ಯಾವುದಾದರೂ ಭಾಷೆಯಲ್ಲಿ ಬಂದಿವೆಯೇ?


ಪ್ರಶ್ನೆ: ಇಂಗ್ಲಿಷಿನಲ್ಲಿ '21 ಬ್ರದರ್ಸ್', 'ರಷ್ಯನ್ ಆರ್ಕ್' ಅನ್ನುವ ಚಿತ್ರಗಳು ಬಂದಿವೆಯಂತೆ. ಆ ಚಿತ್ರಗಳ ಡ್ಯೂರೇಶನ್ 90 ನಿಮಿಷ. ಉಳಿದಂತೆ 'ಅಗಾಧಂ' ಅನ್ನುವ ಒಂದು ತಮಿಳು ಚಿತ್ರ ಇಂಥದೊಂದು ಪ್ರಯತ್ನ ಮಾಡಿದ ಭಾರತೀಯ ಚಿತ್ರವಂತೆ. 'ನಮಸ್ತೇ ಇಂಡಿಯಾ' ನನ್ನ ಪಾಲಿಗೆ ತುಂಬಾ ಚಾಲೆಂಜಿಂಗ್ ಸಿನಿಮಾ.

ಪ್ರಶ್ನೆ: ನಿಮ್ಮೆಲ್ಲ ಪ್ರಯತ್ನಗಳಿಗೂ ಶುಭವಾಗಲಿ ಎಂದು ಈ ಮೂಲಕ ಹಾರೈಕೆಗಳು.

ನಂದ: ಥ್ಯಾಂಕ್ ಯೂ ವೆರಿಮಚ್!



ಸಂದರ್ಶಕ
ಹೃದಯಶಿವ



...ಚಾರವಾದಿ ದಿನಾಲೂ ಅನುಭವಿಸುವ ಮಾನಸಿಕ ಹಿಂಸೆ ...ರ್ಣಿಸುವುದು ಅಸಾಧ್ಯ ಎಂದು ನನ್ನ ಸ್ವಂತ ಅನುಭವದಿಂದ ...ಳಬಲ್ಲೆ.

...ಗಂಡನಿಗೆ ಗೊತ್ತಾಗದಂತೆ ಹರಕೆಗಳನ್ನು ಹೊತ್ತು ಅವನ್ನು ...ರಿಸಲು ಒದ್ದಾಡುವ ಹೆಂಡತಿ, ಜತೆಗೆ ಜಾತಕ-ನಕ್ಷತ್ರಗಳ ...ಹೊಂದಾಣಿಕೆಯ ಮೂರ್ಖತನದಿಂದ ಮಗಳಿಗೆ ಬರುವ ...ತ್ತಮ ವರಗಳೆಲ್ಲಾ ಕೈತಪ್ಪಿ ಹೋಗುವಾಗ ಮಧ್ಯಮ ...ರ್ಗದ ವಿಚಾರವಾದಿಗಳಿಗೆ ಆಗುವ ನೋವು-...ಸಹಾಯಕತೆ ಅನುಭವಿಸಿದವರಿಗೇ ಗೊತ್ತು. ...ಟುಂಬದಲ್ಲಾಗುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ...ಟುಂಬದ ಸದಸ್ಯರೆಲ್ಲ ಒಂದು ಗುಂಪಾದರೆ ವಿಚಾರವಾದಿ ...ತ್ರ ಒಬ್ಬಂಟಿ. ನಾಸ್ತಿಕ ಎಂಬ ಹಣೆಪಟ್ಟಿಯೊಂದಿಗೆ ...ತ ವಿಚಿತ್ರ ಪ್ರಾಣಿಯೋ ಅಥವಾ ಮಾನಸಿಕ ರೋಗಿಯೋ ...ಬಂತಹ ತುಂಟ ಮದುಕದ ನೋಟ ಎಲ್ಲರಿಂದ!

ಕಲ್ಪನಾಶಕ್ತಿಯಲ್ಲಿ ಭಾರತೀಯರನ್ನು ಜಗತ್ತಿನಲ್ಲಿ ಯಾರೂ ...ಗಟ್ಟಲಾರರು ಎಂಬುದು ನಮ್ಮ ಪುರಾಣಗಳನ್ನು ...ದಾಗ ತಿಳಿಯುತ್ತದೆ. ಭಾರತದಲ್ಲಿರುವಷ್ಟು ವೈವಿಧ್ಯಮಯ ...ತ್ರ, ಪೌರಾಣಿಕ ಕಥೆಗಳು ಜಗತ್ತಿನ ಬೇರೆ ಯಾವುದೇ ...ದಲ್ಲಿಯೂ ಇಲ್ಲ. ಪ್ರಕೃತಿ ವೈಚಿತ್ರ್ಯ ಕಂಡಲ್ಲೆಲ್ಲಾ ...ಯಲ್ಲಿ ಒಂದು ಕ್ಷೇತ್ರ ಸ್ಥಾಪಿಸಿದರು. ನಂತರ ಆ ...ಕೃತಿ ವೈಚಿತ್ರ್ಯಕ್ಕೆ ಆ ಕ್ಷೇತ್ರದ ದೇವರು ಮುಖಿಯಿಂದ ಉಂಟಾಗಿದ್ದೆಂದು ಅದಕ್ಕೆ ಹೊಂದಾಣಿಕೆಯಾಗುವ ಕಾಲ್ಪನಿಕ ಸ್ಥಳ ಪುರಾಣ ಕಟ್ಟಿದರು. ಯಾಣದಲ್ಲಿ ಆಗಿರುವುದೂ ಅದೇ. ನಮ್ಮ ಪುರಾಣಕರ್ತರಲ್ಲಿ ಕೆಲವು ಅತೀ ವಿಕೃತ ಕಲ್ಪನೆಯವರೂ ಇದ್ದಾರೆಂಬುದಕ್ಕೆ ಯಾಣದ ಅರ್ಚಕರು ಹೇಳುವ ಭಸ್ಮಾಸುರ ಮೋಹಿನಿ ಕತೆಯೇ ಅತ್ಯುತ್ತಮ ಉದಾಹರಣೆ. ದೇವರು ಹಿಂದೆಮುಂದೆ ನೋಡದೆ ವರ ಕೊಡುವ ಪೆದ್ದ-ಮೂರ್ಖ, ಜೀವ ಭಯವುಳ್ಳ ಹೇಡಿ, ಮೊದಲು ಎರಡೆರಡು ಹೆಂಡತಿಯಿದ್ದರೂ ಮೋಹಿನಿಯೆಂಬ ಹೆಣ್ಣು ವೇಷದ ಗಂಡನ್ನು ನೋಡಿ, ಅದು ಗಂಡು ದೇವರೆಂದು ಗೊತ್ತಿದ್ದೂ ಮೋಹಿಸುವ ಅನೈಸರ್ಗಿಕ ಭಾವನೆಯುಳ್ಳವ, ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಗಂಡು ದೇವರು ಮಗು ಹೆರುವುದು, ಆ ಎರಡೂ ದೇವರ ಹೆಂಡತಿಯರು ಈ ವಿಕೃತಿಯನ್ನು ನೋಡಿಯೂ ಸಹಿಸಿಕೊಂಡು ಒಂಬತ್ತು ತಿಂಗಳು ಸುಮ್ಮನಿರುವುದು, ಇಂತಹ ಅತೀ ಮೂರ್ಖ ಕಲ್ಪನೆಯ ಪುರಾಣವನ್ನು ಕೇವಲ ವಿಕೃತ ಕಲ್ಪನಾಶಕ್ತಿಯುಳ್ಳ ಭಾರತೀಯರು ಮಾತ್ರ ಕಟ್ಟಲು ಸಾಧ್ಯ.


ಕರಾವಳಿಯ ಒಬ್ಬ ಯಕಶ್ಚಿತ ತಾಂತ್ರಿಕ ಚಂಚಂಭಟ್ಟ ಇಂದು ಭಾರತದ ವೈಜ್ಞಾನಿಕ ರಾಜಧಾನಿ ಎಂದೂ, 80% ವಿದ್ಯಾವಂತರೇ ಇರುವ ನಗರ ಎಂದೂ ಭಾವಿಸಲಾಗಿರುವ ಬೆಂಗಳೂರಿನಲ್ಲಿ ಐನೂರು ಕೋಟಿ ತೂಗುತ್ತಾನೆ. ಕನ್ನಡ ಸಿನೆಮಾದಲ್ಲಿ ಜೂನಿಯರ್ ಆರ್ಟಿಸ್ಟುಗಳಾಗಿದ್ದವರು ಟಿವಿ ಚಾನೆಲ್ಲುಗಳ ಕೃಪೆಯಿಂದ ಕಾಳಿ ಸ್ವಾಮಿ ಬ್ರಹ್ಮಾಂಡ ಜ್ಯೋತಿಷಿ ಎಂಬ ಬಿರುದಿನೊಂದಿಗೆ ಕೋಟಿಗಟ್ಟಲೇ ಆಸ್ತಿ ಮಾಡಿಕೊಂಡು ಮಜಾ ಮಾಡುತ್ತಿದ್ದಾರೆ. ವಿದೇಶದಲ್ಲಿ ಕಲಿತ ಡಾಕ್ಟರರು ತಮ್ಮ ಕ್ಲಿನಿಕ್ ಯಾವ ದಿಕ್ಕಿನಲ್ಲಿರಬೇಕು, ರೋಗಿಗೆ ಆಪರೇಶನ್ ಯಾವ ಘಳಿಗೆಯಲ್ಲಿ ಮಾಡಬೇಕೆಂದು ಕಣಿ ಕೇಳುತ್ತಾರೆ. ತನ್ನ ಕಂಪ್ಯೂಟರ್ ಎಲ್ಲಿ ಇಡಬೇಕು, ಯಾವ ದಿಕ್ಕಿನಲ್ಲಿ ಮುಖಮಾಡಿ ಕುಳಿತುಕೊಳ್ಳಬೇಕು ಎಂದು ಟೆಕ್ಕಿ ವಾಸ್ತು ಪಂಡಿತನನ್ನು ಕೇಳುತ್ತಾನೆ. ಮಾರಿದೇವಿಯ ಗುಡಿಯಲ್ಲಿ ಉಚ್ಚ ಪೊಲೀಸ್ ಅಧಿಕಾರಿಯೇ ಆಡು ಬಲಿ ಕೊಡಿಸುತ್ತಾನೆ. ಕೋರ್ಟಿನಲ್ಲಿ ಸಾವಿರ ಪ್ರಶ್ನೆ ಕೇಳಿ ವಿರೋಧಿಗಳನ್ನು ತಬ್ಬಿಬ್ಬು ಮಾಡುವ ವಕೀಲನು ಜ್ಯೋತಿಷಿ ಹೇಳಿದ ಗ್ರಹ ಶಾಂತಿಯನ್ನು ಬಾಯಿಮುಚ್ಚಿಕೊಂಡು ಮಾಡುತ್ತಾನೆ. ವಿದ್ಯಾವಂತರು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವ ಬದಲು ಹೆಚ್ಚೆಚ್ಚು ಕಂದಾಚಾರಕ್ಕೆ ಬಲಿಯಾಗುತ್ತಿದ್ದಾರೆ ಎಂಬುದಕ್ಕೆ ಇವರೆಲ್ಲ ಸಾಕ್ಷಿ. ಪ್ರಸ್ತಾವಿತ ಮೌಢ್ಯ ವಿರೋಧಿ ವಿಧಾಯಕ ಇವನ್ನೆಲ್ಲ ಸ್ವಲ್ಪವಾದರೂ ನಿಯಂತ್ರಿಸಬಹುದೆಂದು ಆಶಿಸೋಣ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

'ಥೂತ್ತೇರಿ' ಬರೆಸಿದ್ದಕ್ಕೆ ಥ್ಯಾಂಕ್ಸ್. ಆದರೆ ಕಟ್ಟೆಪುರಾಣ ಎಲ್ರೀ? ಬಿ.ಚಂದ್ರೇಗೌಡರಿಗೆ ಹೇಳಿ, ಅವರೆಲ್ಲಿದ್ದಾರೋ ಅಲ್ಲಿಂದಲೇ ಬರೆಯಲು.

- ನಾಗಾ, ಎಸ್ ಎಂ ಎಸ್ ಮೂಲಕ

ಅಹಮದಾಬಾದಿನಲ್ಲಿ ಸಬರಮತಿ ನದಿ ಹರಿಯುತ್ತೆ. ವಿಪರೀತ ಮಲೀನಗೊಂಡ ನದಿ ಇದು. ಇದನ್ನು ಮೋದಿ ಸರ್ಕಾರ ಶುದ್ಧಗೊಳಿಸಿದ್ದು ಹೇಗೆ ಗೊತ್ತಾ? ನರ್ಮದಾ



ನದಿಯ ಕುಡಿಯುವ ನೀರನ್ನು ಈ ನದಿಗೆ ನೇರವಾಗಿ ಹರಿಸುವ ಮೂಲಕ! ಯಾವುದೇ ಸಮಸ್ಯೆಗೆ ಮೋದಿ ಪರಿಹಾರ ಕಂಡುಕೊಳ್ಳುವ ರೀತಿ ಇದು. (ಹೆಚ್ಚಿನ ಮಾಹಿತಿಗೆ ನೋಡಿಲು 'ಡೌನ್ ಟು ಅರ್ಥ್' ಮ್ಯಾಗಜೀನಿನ ಮೇ ತಿಂಗಳ ಸಂಚಿಕೆ.

- ರವಿಕುಮಾರ್, ಹಾಸನ

'ಬ್ರಾಹ್ಮಣ್ಯ' ಕುರಿತಂತೆ ಚಿಂತನಾಗೋಷ್ಠಿ ಕರ್ನಾಟಕದ ಉದ್ದಗಲಕ್ಕೂ ಆಗಬೇಕಿದೆ. ನಿಮ್ಮ ತಂಡದ ಪ್ರಯತ್ನ ಮೆಚ್ಚಿಕೊಳ್ಳುವಂತದ್ದಾಗಿದೆ. ನಮ್ಮ ಸಹಕಾರ ನಿಮಗೆಲ್ಲ ಇದ್ದೇ ಇರುತ್ತದೆ.

- ಸವೇರಾ ಸ್ವಾಮಿ, ಎಸ್.ಆರ್. ಪಟ್ಟಣ

ಉತ್ತರ ಪ್ರದೇಶ ರಾಜ್ಯದ ಮುಜಾಫರನಗರದಲ್ಲಿ ಕೆಲ ದುಷ್ಟ ಶಕ್ತಿಗಳು ನಾಗರಿಕ ಸಮಾಜವನ್ನು ಜಾತಿಯ ಆಧಾರದಲ್ಲಿ ಒಡೆಯುವ ಕೆಲಸವನ್ನು ಹೇಗೆ ಮಾಡಿದವು ಎಂಬುದನ್ನು ಅಕ್ಟೋಬರ 2, 2013 ರ ಗೌರಿ ಲಂಕೇಶ ಪತ್ರಿಕೆಯಲ್ಲಿ ಪ್ರಕಟವಾದ 'ಕಂಡಹಾಗೆ' ಲೇಖನ ಓದಿ ಮನವರಿಕೆಯಾಯಿತು. ಧರ್ಮದ ಹೆಸರಿನಲ್ಲಿ ಗಲಭೆಯನ್ನುಂಟುಮಾಡುವ ಕೆಟ್ಟ ಕೆಲಸದಲ್ಲಿ ಕೆಲ ದುಷ್ಟ ಶಕ್ತಿಗಳು ತೊಡಗಿರುವುದು ಖೇದದ ಸಂಗತಿ. ಆ ರಾಜ್ಯದ ಸರ್ಕಾರ ಇಂತಹ ಶಕ್ತಿಗಳನ್ನು ತಕ್ಷಣ ಹೊಸಕಿ ಹಾಕಿದ್ದರೆ ಮುಜಾಫರನಗರದಲ್ಲಿ ಇಂದಿನ ಪರಿಸ್ಥಿತಿ ಬರುತ್ತಿರಲಿಲ್ಲ, ಇಷ್ಟೊಂದು ಸಾವುನೋವು ಸಂಭವಿಸುತ್ತಿರಲಿಲ್ಲ.

ನಾಗರಿಕ ಸಮಾಜವನ್ನು ಜಾತಿ, ಧರ್ಮದ ಹೆಸರಿನಲ್ಲಿ ಒಡೆಯುವುದು ದೇಶದ ಭವಿಷ್ಯಕ್ಕೆ ಒಳ್ಳೆಯದಲ್ಲ. ಇಂತಹ ಕೆಲಸಗಳನ್ನು ಹಸಿದ ಹೊಟ್ಟೆಯ ಬಡವರು ಮಾಡುತ್ತಿಲ್ಲ ಬದಲಾಗಿ ಹೊಟ್ಟೆ ತುಂಬಿದ ದುಷ್ಟಶಕ್ತಿಗಳೇ ಇಂತಹ ಕೆಟ್ಟ ಕೆಲಸಕ್ಕೆ ಕೈ ಹಾಕುತ್ತಿದ್ದಾರೆ.


ಹಿಂದೂ, ಮುಸ್ಲಿಂ, ಸಿಖ್ಖ, ಕ್ರೈಸ್ತ, ಜೈನ್, ಬೌದ್ಧರಾಗದೇ ಮೊದಲು ಮಾನವರಾಗಬೇಕಾಗಿರುವುದು ಇಂದಿನ ಅವಶ್ಯಕತೆಗಳೊಂದರಲ್ಲಿ ಒಂದು.

- ಪ್ರೊ.ಎಂ.ಬಿ.ಪಾಟೀಲ, ರಾಮದುರ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಬಹುದು ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 09-10-2013

'ಕೇರಾಫ್ ಫುಟ್‌ಪಾತ್-2'ಗೆ ಕಿಶನ್ ಸ್ಕೆಚ್ಚು




'ನಮ್ಮ ಸಿನಿಮಾ ಆ ದಾಖಲೆ ಮಾಡಿದೆ. ಈ ದಾಖಲೆ ಮಾಡಿದೆ' ಅಂತ ಸದಾ ಅಲ್ಲಲ್ಲಿ ಹೇಳಿಕೊಂಡು ಸುದ್ದಿಯಲ್ಲಿರಲಿಚ್ಛಿಸುವ ಮಾಸ್ಟರ್ ಕಿಶನ್ ಮತ್ತೊಂದು ಸಾಹಸಕ್ಕೆ ಕೈಹಾಕಲಿದ್ದಾರೆ. ಅಂದಹಾಗೆ ಈ ಕಿಶನ್ 'ಕೇರಾಫ್ ಫುಟ್‌ಪಾತ್' ಅನ್ನುವ ಒಂದು ಸಿನಿಮಾವನ್ನು ಕೆಲವು ವರ್ಷಗಳ ಹಿಂದೆ ನಿರ್ದೇಶಿಸಿದ್ದರು. ಆ ಮೂಲಕ ಜಗತ್ತಿನಲ್ಲೇ ತಾವು ಅತೀ ಕಿರಿಯ ವಯಸ್ಸಿನ ನಿರ್ದೇಶಕ ಎಂಬ ಪಟ್ಟವನ್ನು ಪಡೆದು ಅದನ್ನು ಗಿನ್ನಿಸ್ ಪುಸ್ತಕದಲ್ಲಿ ದಾಖಲಿಸಿ ದೇಶದಾದ್ಯಂತ ಭಾರೀ ಪ್ರಚಾರ ಗಳಿಸಿದ್ದರು. ಅಂತಹ ಕಿಶನ್ ಇತ್ತೀಚೆಗಷ್ಟೇ ತನ್ನ ತಂದೆ ಶ್ರೀಕಾಂತ್ ನಿರ್ದೇಶನದ 'ಟೀನೇಜ್' ಅನ್ನುವ ಸಿನಿಮಾದಲ್ಲಿ ನಾಯಕನಟನಾಗಿ ಪ್ರಮೋಶನ್ ಪಡೆಯಲು ಹೋಗಿ ದಬಾಕಿಕೊಂಡರು. ಪ್ರೇಕ್ಷಕ 'ಟೀನೇಜ್' ಚಿತ್ರವನ್ನು ಮೂಸಿನೋಡಲಿಲ್ಲ, ಅಲ್ಲಿಗೆ ಅಪ್ಪ ನಿರ್ದೇಶಕನಾಗಿ ಸೋತರೆ, ಮಗ ಹೀರೋ ಆಗುವಲ್ಲಿ ಎಡವಿದಂತಾಯಿತು.

ಈಗ ಅದೇ ಕಿಶನ್-ಶ್ರೀಕಾಂತ್ ಜೋಡಿ ತನ್ನ ಹಳೇ ವರಸೆಗೆ ತಿರುಗಿದೆ. ಅಂದರೆ 'ಕೇರಾಫ್ ಫುಟ್‌ಪಾತ್-2' ಮಾಡಲು ಹೊರಟಿದೆ. ಈ ಚಿತ್ರಕ್ಕೆ ಕಿಶನ್ ಸ್ವತಃ ನಿರ್ದೇಶಕ ಕಂ ಹೀರೋ! ಶ್ರೀಕಾಂತ್ ನಿರ್ಮಾಪಕ. ಮಾನವೀಯತೆಯ ಕಳಕಳಿ ಇರುವ ಕಥಾವಸ್ತುವನ್ನುಳ್ಳ ಈ ಚಿತ್ರವನ್ನು ಏಕಕಾಲಕ್ಕೆ ಕನ್ನಡ ಹಾಗೂ ಹಿಂದಿಯಲ್ಲಿ ನಿರ್ಮಿಸುವ ಪ್ಲಾನ್ ಇದೆಯಂತೆ. ದಾಖಲೆ ನಿರ್ಮಿಸಲೆಂದೇ ಚಿತ್ರರಂಗಕ್ಕೆ ಬಂದಂತಿರುವ ಈ ಜೋಡಿ ಈ ಚಿತ್ರದಲ್ಲೂ ಏನಾದರೂ ಹೊಸದಾಖಲೆ ನಿರ್ಮಿಸಲೇಬೇಕು ಅಂತ ಈಗಾಗಲೇ ಸ್ಕೆಚ್ಚು ಹಾಕಿದೆ.

'ಕೇರಾಫ್ ಫುಟ್‌ಪಾತ್' ಮೊದಲ ಭಾಗದಲ್ಲಿ ಬಾಲಿವುಡ್‌ನಿಂದ ಜಾಕಿ ಶರಾಫ್ ಮತ್ತು ಸೌರಬ್ ಶುಕ್ಲಾರನ್ನೂ, ಕನ್ನಡದಿಂದ ಅಂಬರೀಶ್ ಮತ್ತು ಸುದೀಪ್‌ರನ್ನು ಅತಿಥಿನಟರಾಗಿ ಬಳಸಿಕೊಂಡು ಯಶಸ್ವಿಯಾದಂತೆ ಈ ಬಾರಿಯೂ ಅಂತಹ ಕೆಲವು ಪ್ರಸಿದ್ಧ ಮುಖಗಳನ್ನು ಬಳಸಿಕೊಳ್ಳಬೇಕೆಂಬ ತಂತ್ರಗಳು ಜರುಗುತ್ತಿವೆ. ಈ ನಿಟ್ಟಿನಲ್ಲಿ ಚಿತ್ರದ ಹೀರೋಯಿನ್ ಆಗಿ ಹಿಂದಿಯ ಕಲರ್ಸ್ ಚಾನೆಲ್‌ನಲ್ಲಿ ಪ್ರಸಾರಗೊಳ್ಳುವ 'ಬಾಲಿಕಾ ವಧು' ಧಾರಾವಾಹಿಯಲ್ಲಿ ಅಭಿನಯಿಸಿರುವ ಅವಿಕಾ ಘೋರ್ ಅನ್ನುವ ನಟಿಯನ್ನು ಕರೆತರುವ ಯೋಜನೆಯಿದೆ. ಈ 'ಬಾಲಿಕಾ ವಧು' ಧಾರಾವಾಹಿಯ ಕನ್ನಡ ಅವತರಣಿಕೆ ಸದ್ಯ ಈಟಿವಿ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಪುಟ್ಟಗೌರಿ ಮದುವೆ' ಅನ್ನುವುದನ್ನು ಇಲ್ಲಿ ಗಮನಿಸಬಹುದು.

ಕಿಶನ್-ಶ್ರೀಕಾಂತ್‌ರ ಹೊಸ ಪ್ರಯತ್ನ ಗಿಮಿಕ್-ದಾಖಲೆ ತೀಟೆಗಳನ್ನು ಮೀರಿ ಒಂದು ಸದಭಿರುಚಿ ಚಿತ್ರವನ್ನು ಕನ್ನಡ ಪ್ರೇಕ್ಷಕರಿಗೆ ಕೊಡುವಂತಾಗಲಿ ಎಂಬುದು ನಮ್ಮ ಆಶಯ. ಅಂದಹಾಗೆ 'ಮಾ.ಕಿಶನ್' ಈಗ ಬರೀ 'ಕಿಶನ್'!

ಕೋಮಲ್ ರಾಜಕೀಯಕ್ಕೆ



ಹಾಸ್ಯನಟ ಕಂ ಹೀರೋ ಕೋಮಲ್ ಅವರಿಗೆ ರಾಜಕೀಯದ ಐಲು ಹತ್ತಿದೆ ಅನ್ನುವ ಸುದ್ದಿ ತುರುವೇಕೆರೆ ಹಾಗೂ ಶ್ರೀರಾಂಪುರಗಳಿಂದ ಏಕಕಾಲಕ್ಕೆ ಕೇಳಿಬರುತ್ತಿದೆ. ಒಂದು ಮೂಲದ ಪ್ರಕಾರ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಲೋಕಸಭಾ ಕ್ಷೇತ್ರದಿಂದ ಕೋಮಲ್ ಜೆಡಿಎಸ್ ಪಕ್ಷದಿಂದ ಕಣಕ್ಕಿಳಿಯಲಿದ್ದಾರೆ. ಈ ಕುರಿತು ಈಗಾಗಲೇ ತುರುವೇಕೆರೆಯ ಜೆಡಿಎಸ್ ಮುಖಂಡರ ಮೂಲಕ ಜೆಡಿಎಸ್‌ನ ಕೆಲವು ಪ್ರಮುಖ ನಾಯಕರನ್ನು ಭೇಟಿಯಾಗಿದ್ದು, ತಮಗೆ ಟಿಕೆಟು ಕೊಡಬೇಕೆಂದೂ, ಗೆಲ್ಲಲು ಬೇಕಾದ ಜನಪ್ರಿಯತೆ ತಮಗಿದೆಯೆಂದೂ, ಅದಕ್ಕೆ 'ಗೋವಿಂದಾಯನಮಃ' ಮತ್ತು ಇತರೆ ಸಿನಿಮಾಗಳೇ ಸಾಕ್ಷಿ ಎಂದೂ ಕೋಮಲ್ ಹೇಳಿದ್ದಾರಂತೆ. ಅದಕ್ಕೆ ಜೆಡಿಎಸ್ ಪಕ್ಷದ ನಾಯಕರು "ನೋಡುವ ತಡೀರಿ ಸ್ವಲ್ಪ ದಿನಾ..." ಅಂತ ಹೇಳಿದ್ದಾರಂತೆ. ಈಗ ಕೋಮಲ್ ತಮಗೆ ಟಿಕೆಟ್ ಸಿಗುವ ದಿನ ಆದಷ್ಟು ಬೇಗ ಬರಲಿ, ತಾವು ಸಂಸದರಾಗಿ ಮೆರೆಯುವ ಕನಸು ನನಸಾಗಲಿ ಎಂದು ಕಾತುರದಿಂದಿದ್ದಾರಂತೆ.

ಟ್ವಿಸ್ಟ್ ಏನಪಾ ಅಂದರೆ, ಕೋಮಲ್ ಅವರ ಈ ರಾಜಕೀಯ ವರಸೆ ಅವರ ಅಣ್ಣ ಜಗ್ಗೇಶ್‌ಗೆ ಸುತರಾಂ ಇಷ್ಟವಿಲ್ಲವಂತೆ. ಈಗಾಗಲೇ ರಾಜಕೀಯ ಕ್ಷೇತ್ರದಲ್ಲಿ ಏನೇನೋ ಮಾಡಲು ಹೋಗಿ, ಏನೇನೋ ಆಗಿ, ಬಿಜೆಪಿಯಿಂದ ಆಪರೇಶನ್ ಕ'ಮಲ' ಮಾಡಿಸಿಕೊಂಡು ಎಂ.ಎಲ್.ಸಿ ಆಗಿ, ಒಂದಿಷ್ಟು ದಿನ 'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ'ಯ ಉಪಾಧ್ಯಕ್ಷರಾಗಿ, ಬಿಜೆಪಿ ಸರ್ಕಾರ ಬಿದ್ದ ಮೇಲೆ ಆ ಪೋಸ್ಟ್ ಕೂಡ ಕಳೆದುಕೊಂಡು ಈಗ ಕೈಗೆ ಸಿಕ್ಕ ಸಿನಿಮಾಗಳಲ್ಲಿ ನಟಿಸುತ್ತ ತಾವೇ ಕಾಲ ಕಳೆಯುತ್ತಿರುವಾಗ ತಮ್ಮ ಸೋದರ ಕೂಡ ರಾಜಕೀಯಕ್ಕೆ ಬರುವುದು ಜಗ್ಗೇಶ್‌ಗೆ ಇಷ್ಟವಿಲ್ಲವಂತೆ. ಇಷ್ಟಕ್ಕೂ ತಾವಿರೋದು ಬಿಜೆಪಿಯಲ್ಲಿ, ಕೋಮಲ್ ಟಿಕೆಟ್ ಬಯಸುತ್ತಿರೋ[illegible] ಜೆಡಿಎಸ್ ಪಕ್ಷದಿಂದ. ಒಂದು ವೇಳೆ ಕೋಮಲ್ ಗೆದ್ದು ಎಂಪಿಯಾಗಿಬಿಟ್ಟರೆ ತಮಗಿಂತಲೂ ನಾಲ್ಕಾರು ಹೆಜ್ಜೆ ಮು[illegible] ಹೋದಂತಾಗುತ್ತದೆ ಅನ್ನುವ ಆತಂಕ ಜಗ್ಗೇಶರಿಗಿರಬಹುದೋ ಏನೋ!

ಇಲ್ಲಿ ಒಂದು ವಿಷಯ ಗಮನಿಸಬೇಕು: ಬಹಳಷ್ಟು ವರ್ಷಗಳಿಂದ ನಾಯಕನಟನಾಗಿ ಗಟ್ಟಿಯಾಗಿ ನಿಲ್ಲಬೇಕೆ[illegible] ಆಸೆ ಹೊತ್ತಿದ್ದ ಕೋಮಲ್ ಪ್ರಯೋಗಗಳ ಮೇಲೆ ಪ್ರಯೋಗ ಮಾಡಿ, ಸೋಲಿನ ಮೇಲೆ ಸೋಲನ್ನು ಅನುಭ[illegible] ದೊಡ್ಡ ದೊಡ್ಡ ಹೀರೋಗಳು ಮಾತ್ರವಲ್ಲದೆ ಸಣ್ಣ ಪುಟ್ಟ ಹೈಕಳುಗಳ ಜೊತೆಗೆಲ್ಲಾ ಪೋಷಕನಟನಾಗಿ ಅಭಿನಯಿಸ[illegible] ಮೂಲಕ ಚಿತ್ರರಂಗದಲ್ಲಿ ಚಾಲ್ತಿಯಲ್ಲಿದ್ದರು. ಕೊನೆಗೆ ದಿನೇಶ್ ಬಾಬು ತಮ್ಮ 'ಮಿ. ಗರಗಸ' ಚಿತ್ರದಲ್ಲಿ ಕೋಮಲ್‌ರ[illegible] ನಾಯಕನಟನನ್ನಾಗಿ ಹಾಕಿಕೊಂಡರು. ಆ ಚಿತ್ರ ಸ್ವಲ್ಪ ಹೆಸರು, ದುಡ್ಡು ಎರಡನ್ನೂ ಮಾಡಿತು. ಕೋಮಲ್ ಮಾರ್ಕೆ[illegible] ಮತ್ತೆ ಸುಧಾರಿಸತೊಡಗಿತು. ಅದೇ ಜೋಶ್‌ನಲ್ಲಿ ಕೋಮಲ್ ತಮ್ಮ ಭಾವ ಶ್ರೀನಿವಾಸ್ ಸೇರಿ 'ಚಮ್ಕಾಯ್ಸಿ ಚಿ[illegible] ಉಡಾಯ್ಸಿ' ಎಂಬ ಸಿನಿಮಾ ನಿರ್ಮಿಸಿದರು. ಆ ಯತ್ನದಲ್ಲಿ ಒಂದು ರೇಂಜಿಗೆ ಗೆದ್ದೂ ಬಿಟ್ಟರು. ಅಲ್ಲಿಂದಾ[illegible] ಕೋಮಲ್ ಹೆಸರಿಗೆ ಒಳ್ಳೆ ಟಿವಿ ರೈಟ್ಸ್ ಸಿಕ್ಕಿದ್ದರಿಂದ ಹೀರೋ ಆಗಿ ಒಂದಷ್ಟು ಅವಕಾಶಗಳು ಸಿಕ್ಕಿದವು. [illegible] ಪಟ್ಟಿಯಲ್ಲಿ 'ಗೋವಿಂದಾಯನಮಃ' ಹಿಟ್ ಚಿತ್ರವೆಂದು ಪರಿಗಣಿಸಲ್ಪಟ್ಟಿತು. ಈಗ 'ಪ್ಯಾರ್ಗೆ ಆಗ್ಬಿಟ್ಟೈತೆ' ಕೂ[illegible] ಸರಾಗವಾಗಿ ಉಸಿರಾಡುತ್ತಿದೆ.

ಈಗ ಭರವಸೆಯ ಹೀರೋ ಆಗಿ ಭದ್ರವಾಗಿ ತಳವೂರುವ ಎಲ್ಲ ಅವಕಾಶಗಳಿದ್ದರೂ ಕೋಮಲ್ ಚಿತ್ತ ಅದ[illegible] ರಾಜಕೀಯದತ್ತ ವಾಲುತ್ತಿದೆ? ದೂರದ ಬೆಟ್ಟವನ್ನು ದಾರ ಹಾಕಿ ಅಳೆಯುವ ಪ್ರಯತ್ನ ಮಾಡುತ್ತಿದೆ??

ಕೊಚಾಡಿಯಾನ್ c/o ರಾಕ್‌ಲೈನ್



ರಜನಿಕಾಂತ್ ಅಭಿನಯದ 'ಕೊಚಾಡಿಯಾನ್' ಚಿತ್ರ ಬಿಡುಗಡೆಗೂ ಮುನ್ನ ಎಲ್ಲೆಡೆ ಕ್ರೇಜ್ ಹುಟ್ಟುಹಾಕಿದೆ. ಈ ಚಿತ್ರವನ್ನು ಕರ್ನಾಟಕದಾದ್ಯಂತ ಬಿಡುಗಡೆ ಮಾಡಲು ವಿತರಕರಾದ ರಾಕ್‌ಲೈನ್ ವೆಂಕಟೇಶ್ ಹಾಗೂ ಮುನಿರತ್ನಂ ಈಗಾಗಲೇ ಭಾರೀ ದೊಡ್ಡ ಮೊತ್ತವನ್ನು ಕೊಟ್ಟಿದ್ದಾರೆಂಬ ಸುದ್ದಿ ಗಾಂಧಿನಗರದಲ್ಲಿ ಹಬ್ಬಿದೆ.

ಅಷ್ಟು ದೊಡ್ಡ ಮೊತ್ತವನ್ನು ಕೊಟ್ಟು ಚಿತ್ರವನ್ನು ಕೊಂಡುಕೊಂಡಾಗ ವ್ಯವಸ್ಥಿತ ರೀತಿಯಲ್ಲಿ ಅದನ್ನು ಬಿಡುಗಡೆ ಮಾಡಬೇಕಾಗುತ್ತದೆ. ರಜನಿಕಾಂತ್ ತರಹದ ದೊಡ್ಡ ಸ್ಟಾರ್ ಇರುವ ಚಿತ್ರವನ್ನು ಸುಸಜ್ಜಿತವಾದ, ಪ್ರಮುಖ ಥಿಯೇಟರುಗಳಲ್ಲೇ ಬಿಡುಗಡೆ ಮಾಡಬೇಕಾಗುತ್ತದೆ. ಚಿತ್ರರಂಗದ ಪಳಗಿದ ಕೈ ರಾಕ್‌ಲೈನ್ ವೆಂಕಟೇಶ್ ತರಹದವರಿಗೆ ಸಹಜವಾಗಿ ರಾಜ್ಯದ ಚಿತ್ರ ಪ್ರದರ್ಶಕರ ಸಖ್ಯ ಚೆನ್ನಾಗಿ ಇರುತ್ತೆ, 'ಕೊಚಾಡಿಯಾನ್'ಗೆ ಪ್ರಮುಖ ಥಿಯೇಟರುಗಳೂ ಸಿಗುತ್ತವೆ.



ಆದರೆ ಈ ಪ್ರಕ್ರಿಯೆ ಕನ್ನಡ ಚಿತ್ರಗಳ ಮೇಲೆ ಅಡ್ಡ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ, ಒಂದು ಕಡೆ ಹೊಸದಾಗಿ ಬಿಡುಗಡೆಯಾಗಬೇಕಾದ ಚಿತ್ರಗಳಿಗೆ ಥಿಯೇಟರುಗಳ ಸಮಸ್ಯೆ ಉದ್ಭವವಾದರೆ, ಮತ್ತೊಂದು ಕಡೆ ಈಗಾಗಲೇ ಬಿಡುಗಡೆಯಾಗಿರುವ ಚಿತ್ರಗಳು ಪ್ರೇಕ್ಷಕರ ಕೊರತೆಯನ್ನು ಎದುರಿಸಬೇಕಾಗಬಹುದು.

ಕನ್ನಡ ಚಿತ್ರರಂಗದ ಬಗ್ಗೆ ಅಪಾರ ಕಾಳಜಿ ಇರುವವರಂತೆ ಮಾತಾಡುವ ರಾಕ್‌ಲೈನ್ ವೆಂಕಟೇಶ್-ಮುನಿರತ್ನಂ ಥರದವರೇ ಹಣದಾಸೆಗೆ ಹೀಗೆ ಪರಭಾಷೆಯ ದೊಡ್ಡ ಚಿತ್ರವೊಂದನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡಲು ಮುಂದಾದರೆ ಹೇಗೆ? ನಿರ್ದಿಷ್ಟ ಪ್ರೇಕ್ಷಕರನ್ನಷ್ಟೇ ನೆಚ್ಚಿಕೊಂಡಿರುವ ಕನ್ನಡ ಚಿತ್ರರಂಗದಲ್ಲಿ ಸಂಭವಿಸಬಹುದಾದ ಆರ್ಥಿಕ ಸಂಕಷ್ಟಕ್ಕೆ ಹೊಣೆ ಯಾರು? ಸಾಲಸೋಲ ಮಾಡಿ ಹಣ ಹೂಡಿ ಸಣ್ಣಪುಟ್ಟ ಬಜೆಟ್ಟಿನ ಚಿತ್ರಗಳನ್ನು ನಿರ್ಮಿಸುವ ನಿರ್ಮಾಪಕರ ಕಥೆ ಏನಾಗಬೇಡ?

ಇಷ್ಟಕ್ಕೂ ರಾಕ್‌ಲೈನ್ ವೆಂಕಟೇಶ್‌ರ ಒಡೆತನದಲ್ಲಿರುವ 'ರಾಕ್‌ಲೈನ್ ಮಾಲ್'ನಲ್ಲಿರುವ ಮಲ್ಟಿಪ್ಲೆಕ್ಸ್ ಥಿಯೇಟರುಗಳಲ್ಲಿ ಶೇಕಡಾ ಎಂಬತ್ತರಷ್ಟು ಪರಭಾಷಾ ಚಿತ್ರಗಳೇ ಪ್ರದರ್ಶನಗೊಳ್ಳುತ್ತವೆ ಅನ್ನುವುದನ್ನು ಇಲ್ಲಿ ಗಮನಿಸಬೇಕು. ರಾಕ್‌ಲೈನ್ ಥರದವರೇ ಹೀಗಾದರೆ ಕನ್ನಡ ಚಿತ್ರರಂಗದ ಅಳಲನ್ನು ಯಾರು ಕೇಳಬೇಕು?

ಜಂಗಲ್ ಗೌಡ ಬೆಟ್ಟ ಹತ್ತಿದ ಕಥೆ



ಕಾಡಿನ ಹೈದ ರಾಜೇಶನನ್ನು ಪ್ಯಾಟೆಗೆ ಕರೆತಂದು, ರಿಯಾಲಿಟಿ ಶೋವೊಂದರಲ್ಲಿ ಆವರನ್ನು ತುರುಕಿ, ಕಡೆಗೆ 'ಜಂಗಲ್ ಜಾಕಿ' ಅನ್ನೋ ಒಂದು ಸಿನಿಮಾಕ್ಕೆ ಆ ಅಮಾಯಕ ಹೈದನನ್ನೇ ಹೀರೋ ಮಾಡಿ, ಆ ಚಿತ್ರವನ್ನೂ ರಿಲೀಜೂ ಮಾಡಿ, ಇದೀಗ ನಿರೀಕ್ಷಿತ ಮಟ್ಟದಲ್ಲಿ ಕಲೆಕ್ಷನ್ನಿಲ್ಲದೆ ಕಣ್ಣುಬಾಯಿ ಬಿಡುತ್ತಿರುವ ನಿರ್ಮಾಪಕರಲ್ಲಿ ಒಬ್ಬರಾದ ಉಮೇಶ್ ಗೌಡ ಅನ್ನುವ ವ್ಯಕ್ತಿ ಚಿತ್ರ ಬಿಡುಗಡೆಯ ಹಿಂದಿನ ದಿನ ತನ್ನ ಪತ್ನಿ ಹಾಗೂ ಒಂದು ವರ್ಷದ ಮಗುವಿನ ಸಮೇತ ರಾಮನಗರ ಸಮೀಪದ ರೇವಣಸಿದ್ದೇಶ್ವರ ಬೆಟ್ಟಕ್ಕೆ ಹೋಗಿ ಚಿತ್ರದ ಸಿಡಿಯನ್ನು ದೇವರ ಮುಂದೆ ಇರಿಸಿ, ಚಿತ್ರ ಗೆಲ್ಲುವಂತೆ ಪ್ರಾರ್ಥಿಸಿ ಬಂದಿರುವುದು ನಿಜಕ್ಕೂ ಅಚ್ಚರಿ ತರುವಂಥದು.

ಜನರಿಗೆ ಮುಗ್ಧ ರಾಜೇಶನ ಮೇಲಿದ್ದ ಸಿಂಪಥಿಯನ್ನೇ ಲಾಭವಾಗಿ ಪರಿವರ್ತಿಸುವ ಐಡಿಯಾ ಇಟ್ಟುಕೊಂಡು ಸಿನಿಮಾ ನಿರ್ಮಿಸಲು ಮುಂದಾದ ಇವರಿಗೆ ಕಥೆಯ ಬಗ್ಗೆ ಕಿಂಚಿತ್ತೂ ಅಭಿರುಚಿ ಇರಲಿಲ್ಲ ಅನ್ನೋದು 'ಜಂಗಲ್ ಜಾಕಿ' ಚಿತ್ರವನ್ನು ನೋಡಿದರಷ್ಟೇ ಗೊತ್ತಾಗೋದು.

ಆರಾಮಾಗಿ ಕಾಡಿನಲ್ಲಿದ್ದ ರಾಜೇಶನನ್ನು ನಗರಕ್ಕೆ ಕರೆತಂದು ಆತನ ದಿಕ್ಕು ತಪ್ಪಿಸಿದ ಖ್ಯಾತಿ ಕಿರುತೆರೆಗೆ ಮೊದಲು ಸಲ್ಲಬೇಕು, ಆನಂತರದ್ದು ಹಿರಿತೆರೆಯ 'ಜಂಗಲ್ ಜಾಕಿ' ಚಿತ್ರತಂಡಕ್ಕೆ. ಚಿತ್ರದ ಟೈಟಲ್‌ನಿಂದ ಹಿಡಿದು, ಮುಹೂರ್ತ, ಚಿತ್ರೀಕರಣ, ಡಬ್ಬಿಂಗ್, ರೆಕಾರ್ಡಿಂಗ್ ಇತ[illegible] ಪ್ರಕ್ರಿಯೆಗಳಲ್ಲಿ ಒಂದು ದಿನವೂ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳು, ಲೊಕೇಷನ್, ತಂತ್ರಜ್ಞ[illegible] ನಿರ್ದೇಶಕನ ಪ್ರತಿಭೆ-ಸಾಮರ್ಥ್ಯಗಳ ಕಡೆ ನಿರ್ಮಾಪಕ ಉಮೇಶ್ ಗೌಡ ಎಂದು ತಲೆ ಕೆಡಿಸಿಕೊಂಡಂತೆ ಕಾಣಿಸುವುದಿ[illegible] ಇಂತಹ ಮುಖ್ಯ ಅಂಶಗಳನ್ನೇ ಕಡೆಗಣಿಸಿ ಚಿತ್ರವನ್ನು ಹಿಟ್ ಮಾಡಪ್ಪ ಎಂದು ದೇವರಿಗೆ ಪ್ರಾರ್ಥಿಸಿದರೆ ಏನಾಗುತ್ತದ[illegible] ಅದೇ ಆಗಿದೆ.

ಮುಂದೆಯಾದರೂ ಒಂದು ಒಳ್ಳೆಯ ಚಿತ್ರವನ್ನು ಮಾಡಲು ಏನೇನು ಬೇಕು ಎಂಬುದನ್ನು ಉಮೇಶ್ ಗ[illegible] ಅರಿತುಕೊಂಡರೆ ಅವರಿಗೇ ಒಳ್ಳೆಯದು. ಅಂದಹಾಗೆ ಈ ಉಮೇಶ್ ಗೌಡ ನೆಲಮಂಗಲದ 'ಕರ್ನಾಟಕ ರಕ್ಷ[illegible] ವೇದಿಕೆ' ಬ್ರಾಂಚಿನ ಪ್ರೆಸಿಡೆಂಟು!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com